ಬೆಂಗಳೂರು ಶುಕ್ರವಾರ 25 ಸೆಪ್ಟೆಂಬರ್ 2026 | ಸಂಪುಟ 44 | ಸಂಚಿಕೆ 284 ಪುಟ 8 | ಬೆಲೆ 3.00
Sanjevani Kannada Daily | Bangalore | Friday | 25 September 2026 | Vol: 44 Issue 284 | Pages 8 | RNI No: 36667/82 | Rs. 3.00




# ಸಂಜೆವಾಣಿ

1982
ಬೆಂಗಳೂರು - ಹುಬ್ಬಳ್ಳಿ - ಕಲಬುರಗಿ - ಬಳ್ಳಾರಿ - ಮೈಸೂರು - ಮಂಗಳೂರು - ರಾಯಚೂರು - ದಾವಣಗೆರೆ - ಶಿವಮೊಗ್ಗ
www.sanjevani.com contact @sanjevani.com PH: 080 22868882

# ಸಿಇಸಿ ವಿರುದ್ಧ ಸುಪ್ರೀಂನಲ್ಲಿ ಅರ್ಜಿ

## ಫಾರಂ 6 ಬದಲಾವಣೆ, ಮತದಾರರ ಪಟ್ಟಿ ಕೇಂದ್ರೀಕರಣ ಕುರಿತು ತನಿಖೆ, ಕ್ರಮಕ್ಕೆ ಮನವಿ




ನವದೆಹಲಿ.ಸೆ.25– ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ವಿರುದ್ಧ ಕೇಳಿ ಬಂದಿರುವ ಆರೋಪಗಳ ಬಗ್ಗೆ ತನಿಖೆ ನಡೆಸಿ ಕಾನೂನು ಕ್ರಮಕ್ಕೆ ಕೋರಿ ಸುಪ್ರೀಂಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ.

ವಿಶೇಷ ತೀವ್ರ ಪರಿಷ್ಕರಣೆ ಸೇರಿದಂತೆ ಮತದಾರರ ಪಟ್ಟಿಗೆ ಸಂಬಂಧಿಸಿದ ಹಲವು ನಿರ್ಧಾರಗಳನ್ನು ಇತರ ಇಬ್ಬರು ಚುನಾವಣಾ ಆಯುಕ್ತರ ಸಮ್ಮತಿಯಿಲ್ಲದೆ ಏಕಪಕ್ಷೀಯವಾಗಿ ಕೈಗೊಳ್ಳಲಾಗಿದೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಿಇಸಿ ವಿರುದ್ಧ ಕಾನೂನು ಕ್ರಮ ಹಾಗೂ ಸ್ವತಂತ್ರ ತನಿಖೆ ನಡೆಸುವಂತೆ ಮನವಿ ಮಾಡಲಾಗಿದೆ.

ಮತದಾರರ ನೋಂದಣಿಗೆ ಬಳಸುವ ಫಾರಂ6ರಲ್ಲಿ ಮಾಡಲಾದ ಬದಲಾವಣೆ, ಚುನಾವಣಾ ಪಟ್ಟಿಯ ದತ್ತಾಂಶವನ್ನು ಕೇಂದ್ರೀಕರಿಸುವ ಕ್ರಮ ಹಾಗೂ ಎಸ್‌ಐಆರ್‌ಗೆ ಸಂಬಂಧಿಸಿದ ನಿರ್ಧಾರಗಳನ್ನು ಅರ್ಜಿಯಲ್ಲಿ ಪ್ರಮುಖವಾಗಿ ಪ್ರಶ್ನಿಸಲಾಗಿದೆ. ಈ ಕ್ರಮಗಳಿಂದ ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಹೊರಗುಳಿಯುವ ಪರಿಸ್ಥಿತಿ ಉಂಟಾಗಿದೆ ಎಂದು ಅರ್ಜಿದಾರರು ದೂರಿದ್ದಾರೆ.

ಅರ್ಜಿಯಲ್ಲಿ, ಜನಪ್ರತಿನಿಧಿ ಕಾಯ್ದೆಯ ಸೆಕ್ಷನ್ 32 ಅಡಿಯಲ್ಲಿ ಸಿಇಸಿ ಜ್ಞಾನೇಶ್



ಕುಮಾರ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ. ಜೊತೆಗೆ, ಸಿಇಸಿ ಅವರ ಸಮ್ಮತಿಯೊಂದಿಗೆ ನಡೆದಿರುವುದಾಗಿ ಆರೋಪಿಸಲಾಗಿರುವ ನಿರ್ಧಾರಗಳನ್ನು ಪರಿಶೀಲಿಸಿ, ಅಗತ್ಯವಿದ್ದರೆ ಅವುಗಳನ್ನು ರದ್ದುಗೊಳಿಸುವಂತೆಯೂ ಮನವಿ ಮಾಡಲಾಗಿದೆ.

**ಫಾರಂ6 ಬದಲಾವಣೆ ವಿವಾದ**

ಹೊಸ ಮತದಾರರ ನೋಂದಣಿಗಾಗಿ ಬಳಸುವ ಫಾರಂ6ರಲ್ಲಿ ಈ ವರ್ಷ ಜುಲೈನಲ್ಲಿ ಹೊಸ ಪ್ರಶ್ನೆಯೊಂದನ್ನು ಸೇರಿಸಲಾಗಿತ್ತು. ಅರ್ಜಿದಾರರು ಅಥವಾ ಅವರ ಪೋಷಕರು/ಅಜ್ಜ–ಅಜ್ಜಿಯರ ಹೆಸರು ಹಿಂದಿನ ಖಖಖ ಮತದಾರರ ಪಟ್ಟಿಯಲ್ಲಿ ಇದೆಯೇ ಎಂಬ ಮಾಹಿತಿಯನ್ನು ಕೇಳಲಾಗಿತ್ತು. ಈ ಪ್ರಶ್ನೆಗೆ ಉತ್ತರಿಸದೆ ಅರ್ಜಿ ಮುಂದುವರಿಸಲು ಸಾಧ್ಯವಾಗದ ರೀತಿಯಲ್ಲಿ ವ್ಯವಸ್ಥೆ ರೂಪಿಸಲಾಗಿತ್ತು ಎಂದು ವರದಿಯಾಗಿದೆ.

ಈ ಬದಲಾವಣೆಗೆ ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಆಕ್ಷೇಪ ವ್ಯಕ್ತಪಡಿಸಿದ್ದರು. ನಿಯಮ ಬದಲಿಸದೆ ಫಾರಂ6ರಲ್ಲಿ ಇಂತಹ ಬದಲಾವಣೆ ಮಾಡಲು ಸಾಧ್ಯವಿಲ್ಲ ಎಂದು ಅವರು ಆಂತರಿಕವಾಗಿ ಪ್ರಶ್ನಿಸಿದ್ದರು. ಸಂಧು ಅವರು ಬಳಿಕ ಈ ಬದಲಾವಣೆಯನ್ನು 'ಅಧಿಕೃತವಲ್ಲ' ಮತ್ತು 'ಕಾನೂನುಬಾಹಿರ' ಎಂದು ಆಕ್ಷೇಪಿಸಿ ಅದನ್ನು ತಕ್ಷಣ ತೆಗೆದುಹಾಕಬೇಕು ಎಂದು ದಾಖಲಿಸಿದ್ದರು.

ಚುನಾವಣಾ ಆಯೋಗದ ಒಳಗಿನ ಭಿನ್ನಾಭಿಪ್ರಾಯಕ್ಕೆ ಸಂಬಂಧಿಸಿ ಪುಟ 2



ಪೌರಕಾರ್ಮಿಕರ ದಿನಾಚರಣೆ ಪ್ರಯುಕ್ತ ನಗರದ ಜಿಬಿಎ ಕೇಂದ್ರ ಕಚೇರಿಯ ಆವರಣದಲ್ಲಿರುವ ಪೌರಕಾರ್ಮಿಕರ ಧ್ವನಿ, ಮಾಜಿ ಶಾಸಕ ಐಪಿಡಿ ಸಾಲಪ್ಪನವರ ಪ್ರತಿಮೆಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ರವರು ಮಾಲಾರ್ಪಣೆ ಮಾಡಿದರು. ಸಚಿವರಾದ ನರೇಂದ್ರಸ್ವಾಮಿ, ಎಚ್.ಸಿ. ಬಾಲಕೃಷ್ಣ, ಡಾ. ಯತೀಂದ್ರ ಸಿದ್ದರಾಮಯ್ಯ ಮತ್ತಿತರರು ಇದ್ದಾರೆ.

## ಅಟ್ಟಿಕಾ ಗೋಲ್ಡ್ ಕಂಪನಿ ಮೇಲೆ ಐಟಿ ದಾಳಿ

ಬೆಂಗಳೂರು, ಸೆ. 25- ಅಟ್ಟಿಕಾ ಗೋಲ್ಡ್ ಕಂಪನಿಯ ಮೇಲೆ ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳ ದಾಳಿ ಮುಕ್ತಾಯಗೊಂಡ ಕೆಲವೇ ಗಂಟೆಗಳಲ್ಲಿ ಆದಾಯ ತೆರಿಗೆ (ಐಟಿ) ಇಲಾಖೆ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಅಟ್ಟಿಕಾ ಗೋಲ್ಡ್ ಕಂಪನಿಗೆ ಸಂಬಂಧಿಸಿದ ಕಚೇರಿಗಳ ಮೇಲೆ ಇತ್ತೀಚೆಗೆ ಇಡಿ ಅಧಿಕಾರಿಗಳು ದಾಳಿ ನಡೆಸಿ, ಹಲವು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಂಡ ಬೆನ್ನಲ್ಲೇ ಐಟಿ ಇಲಾಖೆ ಅಧಿಕಾರಿಗಳು ಕಂಪನಿಗೆ ಸಂಬಂಧಿಸಿದ 19 ಸ್ಥಳಗಳಲ್ಲಿ ಏಕಕಾಲದಲ್ಲಿ ದಾಳಿ ನಡೆಸಿ ಪರಿಶೀಲನೆ ನಡೆಸಿದ್ದಾರೆ.

ಕಂಪನಿಯ ವ್ಯವಹಾರದಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಗಳು ಕೇಳಿಬಂದಿರುವ ಹಿನ್ನೆಲೆಯಲ್ಲಿ ಇಡಿ ಅಧಿಕಾರಿಗಳು ಪರಿಶೀಲನೆ ನಡೆಸಿದ್ದರು. ವಿಶೇಷವಾಗಿ ನೇರವಾಗಿ ಗ್ರಾಹಕರಿಂದ ಚಿನ್ನ ಖರೀದಿ ಸೇರಿದಂತೆ ಕಂಪನಿಯ ಹಣಕಾಸು ವ್ಯವಹಾರಗಳ ಕುರಿತು ಹಲವು ಆರೋಪಗಳು ಕೇಳಿಬಂದಿದ್ದವು.

ಈ ಹಿನ್ನೆಲೆಯಲ್ಲಿ ಇಡಿ ಅಧಿಕಾರಿಗಳು ಕಂಪನಿಯ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳು ಹಾಗೂ ಇತರ ಮಾಹಿತಿಯನ್ನು ಸಂಗ್ರಹಿಸಿದ್ದರು. ಇದೀಗ ಐಟಿ ಅಧಿಕಾರಿಗಳು ಕೂಡ ಕಂಪನಿಯ ಹಣಕಾಸು ವಹಿವಾಟು, ಆದಾಯ–ತೆರಿಗೆ ದಾಖಲೆಗಳು ಹಾಗೂ ಇತರ ವ್ಯವಹಾರಿಕ ದಾಖಲೆಗಳನ್ನು ಪರಿಶೀಲಿಸುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇಡಿ ದಾಳಿ ಮುಕ್ತಾಯಗೊಂಡ ಬೆನ್ನಲ್ಲೇ ಐಟಿ ಇಲಾಖೆ ದಾಳಿ ನಡೆಸಿರುವುದು ಅಟ್ಟಿಕಾ ಗೋಲ್ಡ್ ಕಂಪನಿಗೆ ಮತ್ತಷ್ಟು ತನಿಖೆಯ ಬಿಸಿ ಎದುರಾದಂತಾಗಿದೆ.

## ಸಿಇಸಿಗೆ ಮಾತ್ರವಲ್ಲ, ಇನ್ನಿಬ್ಬರು ಆಯುಕ್ತರಿಗೂ ಪ್ರಶ್ನೆಗಳ ಸುರಿ ಮಳೆ

ನವದೆಹಲಿ,ಸೆ.25- ಚುನಾವಣಾ ಆಯೋಗದ ಆಂತರಿಕ ಭಿನ್ನಾಭಿಪ್ರಾಯಗಳ ಕುರಿತು ವರದಿಗಳು ಚರ್ಚೆಗೆ ಗ್ರಾಸವಾಗಿರುವ ಬೆನ್ನಲ್ಲೇ, ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರ ನಿರ್ಧಾರಗಳ ಜತೆಗೆ ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಹಾಗೂ ವಿವೇಕ್ ಜೋಶಿ ಅವರ ನಡೆ ಬಗ್ಗೆಯೂ ಪ್ರಶ್ನೆಗಳು ಎದ್ದಿವೆ.

ದಿ ಇಂಡಿಯನ್ ಎಕ್ಸ್‌ಪ್ರೆಸ್ ತನಿಖಾ ವರದಿ ಪ್ರಕಾರ, ಕಳೆದ 10 ತಿಂಗಳಲ್ಲಿ




ಇಬ್ಬರು ಆಯುಕ್ತರು ಮತದಾರರ ಪಟ್ಟಿ, ಹೊಸ ಮತದಾರರ ನೋಂದಣಿಯ ಫಾರ್ಮ್–6, ಮತದಾರರ ದತ್ತಾಂಶಕ್ಕೆ ಪ್ರವೇಶ ಹಾಗೂ ಆಯೋಗದ ಐಟಿ ವ್ಯವಸ್ಥೆ ಸೇರಿದಂತೆ ಹಲವು ವಿಚಾರಗಳಲ್ಲಿ ಕನಿಷ್ಠ 14 ಬಾರಿ ಆಕ್ಷೇಪ ದಾಖಲಿಸಿದ್ದಾರೆ. ಒಂದೇ ದಿನ ನಾಲ್ಕು ಬಾರಿ ಆಕ್ಷೇಪ ವ್ಯಕ್ತಪಡಿಸಿದ ಸಂದರ್ಭವೂ ಇತ್ತು ಎನ್ನಲಾಗಿದೆ.

ಮತದಾರರ ದತ್ತಾಂಶವನ್ನು ಕೇಂದ್ರೀಕೃತವಾಗಿ ನಿರ್ವಹಿಸುವುದರಿಂದ ಚುನಾವಣಾ ನೋಂದಣಿ ಅಧಿಕಾರಿಗಳ ಕಾನೂನುಬದ್ಧ ಅಧಿಕಾರಗಳಿಗೆ ಧಕ್ಕೆಯಾಗಬಹುದು ಎಂಬ ಆತಂಕವನ್ನು ಇಬ್ಬರೂ ವ್ಯಕ್ತಪಡಿಸಿದ್ದರು. ಫಾರ್ಮ್–6ರ ಕೆಲವು ಬದಲಾವಣೆಗಳನ್ನು ಎಸ್‌ಐಆರ್ ಆದೇಶದ ಮೂಲಕ ಜಾರಿಗೆ ತರಲು ಸಾಧ್ಯವಿಲ್ಲ; ಅಗತ್ಯವಿದ್ದರೆ ಪುಟ 2

## ಜ್ಞಾನೇಶ್ ರಾಜೀನಾಮೆಗೆ ಆಗ್ರಹಿಸಿ ನಾಳೆ ರಾಜ್ಯಾದ್ಯಂತ ಕೈ ಪ್ರತಿಭಟನೆ

ಬೆಂಗಳೂರು, ಜು. 25- ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್‌ಕುಮಾರ್ ಅವರ ರಾಜೀನಾಮೆಗೆ ಆಗ್ರಹಿಸಿ ಕಾಂಗ್ರೆಸ್ ಪಕ್ಷ ನಾಳೆ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲಿದೆ.

ಕೆಪಿಸಿಸಿ ಕಚೇರಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು, ಕೇಂದ್ರ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ಅವರನ್ನು ತಕ್ಷಣ ಬಂಧಿಸಿ ಅವರ ರಾಜೀನಾಮೆ ಪಡೆಯಬೇಕು. ಹಾಗೆಯೇ ಚುನಾವಣಾ ಆಯೋಗ ನಡೆಸಿರುವ ಎಲ್ಲ ಎಸ್‌ಐಆರ್ ಪ್ರತಿ ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.



ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್ ರಾಜೀನಾಮೆ ನೀಡುವವರೆಗೂ ಕಾಂಗ್ರೆಸ್ ಹೋರಾಟ ನಡೆಸಲಿದೆ. ನಾಳೆ ಬೆಂಗಳೂರಿನ ಸ್ವತಂತ್ರ ಉದ್ಯಾನವನದಲ್ಲಿ ಪ್ರತಿಭಟನೆ ನಡೆಯಲಿದ್ದು, ಜತೆಗೆ ಎಲ್ಲ ಜಿಲ್ಲೆಗಳಲ್ಲೂ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪ್ರತಿಭಟನೆ ನಡೆಸಲಿದ್ದಾರೆ ಎಂದರು.

ಕೇಂದ್ರ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್, ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಇವರೆಲ್ಲಾ ದೇಶ ದ್ರೋಹಿಗಳು ಎಂದು ಆರೋಪಿಸಿದ ಅವರು, ಇವರ್ಯಾರು ಕ್ಷಮೆಗೆ ಅರ್ಹರಲ್ಲ ಎಂದು ಹೇಳಿದರು.

ಪ್ರಧಾನಿ ಮೋದಿ, ಅಮಿತ್ ಶಾ ಇವರೆಲ್ಲಾ ಕ್ಷಮೆ ಕೇಳದಂತಹ ಪುಟ 2

## ನಕಲಿ ಔಷಧ ಮಾರಾಟ ಮಾಡಿದರೆ ಕೊಲೆ ಯತ್ನ ಕೇಸ್

ಬೆಂಗಳೂರು,ಸೆ.25- ಜೀವ ಉಳಿಸಬೇಕಾದ ಔಷಧಿಗಳನ್ನೇ ನಕಲಿ ಮಾಡಿ ಜನರ ಜೀವದ ಜೊತೆ ಚೆಲ್ಲಾಟವಾಡುತ್ತಿರುವ ದಂಧೆಕೋರರ ವಿರುದ್ಧ ರಾಜ್ಯ ಸರ್ಕಾರ ಮತ್ತಷ್ಟು ಕಠಿಣ ಕ್ರಮಕ್ಕೆ ಮುಂದಾಗಿದೆ. ನಕಲಿ ಔಷಧ ಎಂದು ತಿಳಿದಿದ್ದರೂ ಮಾರಾಟ ಮಾಡಿ, ರೋಗಿಗಳ ಜೀವಕ್ಕೆ ಅಪಾಯ ಉಂಟು ಮಾಡಿದ ಪ್ರಕರಣಗಳನ್ನು ಕೇವಲ ಔಷಧ ಕಾಯ್ದೆಯಡಿ ಸೀಮಿತಗೊಳಿಸದೆ, ಕೊಲೆ ಯತ್ನದಂತಹ ಗಂಭೀರ ಅಪರಾಧದಡಿ ಪ್ರಕರಣ ದಾಖಲಿಸುವ ಕುರಿತು ಸರ್ಕಾರ ಚಿಂತನೆ ನಡೆಸುತ್ತಿದೆ. ಆರೋಗ್ಯ ಸಚಿವ ಯು.ಟಿ.ಖಾದರ್ ಈ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನಲ್ಲಿ ನಕಲಿ ಹಾಗೂ ಮರುಪ್ಯಾಕೇಜ್ ಮಾಡಲಾದ ಔಷಧಿಗಳ ಜಾಲ ಪತ್ತೆಯಾದ ಬೆನ್ನಲ್ಲೇ ಸರ್ಕಾರ ತನಿಖೆಯ



ಬಿಗಿ ಜಾಲ ಬೀಸಿದೆ. ಬಿದದಿ ಸಮೀಪದ ಫಾರ್ಮ್‌ಹೌಸ್‌ವೊಂದರ ಮೇಲೆ ಆಗಸ್ಟ್ 18ರಂದು ನಡೆದ ದಾಳಿಯಲ್ಲಿ ಸುಮಾರು 5 ಕೋಟಿ ಮೌಲ್ಯದ ನಕಲಿ, ಅವಧಿ ಮೀರಿದ ಔಷಧಗಳು, ಪ್ಯಾಕಿಂಗ್ ಸಾಮಗ್ರಿ, ಲೇಬಲ್‌ಗಳು ಹಾಗೂ ಔಷಧ ತುಂಬುವ ಯಂತ್ರಗಳನ್ನು ವಶಪಡಿಸಿಕೊಳ್ಳಲಾಗಿತ್ತು.

ತನಿಖೆಯಲ್ಲಿ ಕಡಿಮೆ ಬೆಲೆಯ ಔಷಧಿಗಳನ್ನು ಬೇರೆ ರಾಜ್ಯಗಳಿಂದ ತರಿಸಿ, ಹೊಸ ವಯಲ್ಸ್‌ಗೆ ತುಂಬಿ, ದುಬಾರಿ ಜೀವ ರಕ್ಷಕ ಔಷಧಿಗಳ ಹೆಸರಿನಲ್ಲಿ ಮರುಲೇಬಲ್ ಮಾಡಿ ಮಾರಾಟ ಮಾಡುತ್ತಿದ್ದರೆಂಬ ಆರೋಪ ಕೇಳಿಬಂದಿದೆ. ವಶಪಡಿಸಿಕೊಂಡ ಔಷಧಿಗಳಲ್ಲಿ Emblaveo, Zavicefta, Xavitaz ಸೇರಿದಂತೆ ಹಲವು ಇಂಜೆಕ್ಷನ್‌ಗಳು ಸೇರಿವೆ. ನಕಲಿ ಲೇಬಲ್‌ಗಳ ಮೇಲಿದ್ದ QR/ಸ್ಕ್ಯಾನಿಂಗ್ ಕೋಡ್‌ಗಳು ಕಾರ್ಯನಿರ್ವಹಿಸದಿರುವುದು ಕೂಡ ಪತ್ತೆಯಾಗಿದೆ.

**24ಕ್ಕೂ ಹೆಚ್ಚು ಆಸ್ಪತ್ರೆಗಳಿಗೆ ಜಾಲ**

ನಕಲಿ ಔಷಧಗಳು ಬೆಂಗಳೂರಿನ ಆಸ್ಪತ್ರೆಗಳು ಹಾಗೂ ಕ್ಲಿನಿಕ್‌ಗಳಿಗೆ ಪೂರೈಕೆಯಾಗಿರುವ ಶಂಕೆಯ ಹಿನ್ನೆಲೆಯಲ್ಲಿ ತನಿಖೆ ಮತ್ತಷ್ಟು ವಿಸ್ತರಿಸಿದೆ. ಇತ್ತೀಚಿನ SIT ತನಿಖೆಯಲ್ಲಿ ಬೆಂಗಳೂರಿನ ಆಸ್ಪತ್ರೆಗಳು ಹಾಗೂ ಕರ್ನಾಟಕದ ಇತರೆ ಭಾಗಗಳಿಗೆ ಕೋಟ್ಯಂತರ ರೂಪಾಯಿ ಮೌಲ್ಯದ ಶಂಕಿತ ಪುಟ 2

## ಕೇಂದ್ರದ ನೆರವಿಗೆ ಕಾಯದೆ ಅನ್ನದಾತರಿಗೆ ಸಹಾಯ ಹಸ್ತ: ಡಿಸಿಎಂ

ಬೆಂಗಳೂರು, ಸೆ.25- ಬರದಿಂದ ಸಂಕಷ್ಟಕ್ಕೊಳಗಾಗಿರುವ ರೈತರಿಗೆ ತಕ್ಷಣದ ನೆರವು ನೀಡುವ ಉದ್ದೇಶದಿಂದ ರಾಜ್ಯ ಸರ್ಕಾರ ಮೊದಲ ಹಂತದಲ್ಲಿ ಪ್ರತಿ ರೈತರಿಗೆ 2,500ರಂತೆ ಇನ್‌ಪುಟ್ ಸಬ್ಸಿಡಿ ನೀಡಲು ನಿರ್ಧರಿಸಿದೆ. ಸುಮಾರು 45ರಿಂದ 50 ಲಕ್ಷ ರೈತರಿಗೆ ಈ ನೆರವು ತಲುಪಲಿದ್ದು, ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಸುಮಾರು 1,250 ಕೋಟಿ ವೆಚ್ಚವಾಗಲಿದೆ. ಕೇಂದ್ರದಿಂದ ಎನ್‌ಡಿಆರ್‌ಎಫ್ ನೆರವು ನಿರೀಕ್ಷಿಸುತ್ತಿದ್ದರೂ, ರೈತರ ಸಂಕಷ್ಟವನ್ನು ಗಮನದಲ್ಲಿಟ್ಟುಕೊಂಡು ನಮ್ಮ ಸರ್ಕಾರ ತಕ್ಷಣವೇ ನೆರವು ನೀಡುತ್ತಿದೆ ಎಂದು



ಉಪಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಾದ ಡಾ. ಜಿ. ಪರಮೇಶ್ವರ ಅವರು ಹೇಳಿದರು.

ಇಂದು ಸದಾಶಿವನಗರದ ತಮ್ಮ ನಿವಾಸದ ಬಳಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ರೈತರಿಗೆ ಈಗಾಗಲೇ ಹಲವು ರೀತಿಯ ನೆರವು ನೀಡುತ್ತಿದೆ. ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡಲು ಸುಮಾರು 22,000 ಕೋಟಿ ವಿದ್ಯುತ್ ಸಬ್ಸಿಡಿ ನೀಡಲಾಗುತ್ತಿದೆ. 1,250 ಕೋಟಿ ಮೊದಲ ಹಂತದ ನೆರವು ಸಣ್ಣ ಮೊತ್ತವಲ್ಲ. ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರದಿಂದ ದೊರೆಯುವ ಪರಿಹಾರದ ಆಧಾರದ ಮೇಲೆ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಬರದಿಂದ ರಾಜ್ಯದಲ್ಲಿ ಉಂಟಾಗಿರುವ ಒಟ್ಟು ನಷ್ಟದ ಪ್ರಮಾಣ ?40,000 ಕೋಟಿಗೂ ಅಧಿಕವಾಗುವ ಸಾಧ್ಯತೆಯಿದೆ. ಈಗಾಗಲೇ ಮೊದಲ ಹಂತದ ಮೆಮೊರಾಂಡಂ ಅನ್ನು ಕೇಂದ್ರ ಸರ್ಕಾರಕ್ಕೆ ಪುಟ 2

## ಮಾಫಿ ಸಾಕ್ಷಿ ಆರೋಪ ಪಟ್ಟಿಯಿಂದ ಪ್ರದೋಷ್ ಹೆಸರು ಡಿಲೀಟ್

ಬೆಂಗಳೂರು,ಸೆ.25- ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪ್ರಕರಣದ 14ನೇ ಆರೋಪಿ (ಎ14) ಪ್ರದೋಷ್ ಮಾಫಿ ಸಾಕ್ಷಿ ಆಗಿ ಪ್ರಾಸಿಕ್ಯೂಷನ್ ಪರ ಸಾಕ್ಷಿಯಾಗಲಿದ್ದಾರೆ.

ಈ ಹಿನ್ನೆಲೆಯಲ್ಲಿ ಚಾರ್ಜ್‌ಶೀಟ್‌ನಿಂದ ಪ್ರದೋಷ್ ಅವರ ಹೆಸರನ್ನು ಡಿಲೀಟ್ ಮಾಡಲಾಗಿದೆ ಎಂದು ತಿಳಿದುಬಂದಿದೆ.

ಪ್ರದೋಷ್ ಅವರನ್ನು ಮಾಫಿ ಸಾಕ್ಷಿಯಾಗಿ ಪರಿಗಣಿಸುವ ಸಂಬಂಧ ನಡೆದ ಕಾನೂನು ಪ್ರಕ್ರಿಯೆಯ ಬಳಿಕ, ಸೆಪ್ಟೆಂಬರ್ 16ರಂದು ನಗರದ 59ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು ಅವರ ಅರ್ಜಿಯನ್ನು ಅಂಗೀಕರಿಸಿತ್ತು. ಬಳಿಕ ಸೆಪ್ಟೆಂಬರ್ 23ರಂದು ಕರ್ನಾಟಕ ಹೈಕೋರ್ಟ್ ಕೂಡ ವಿಚಾರಣಾ ನ್ಯಾಯಾಲಯವು ಪ್ರದೋಷ್ ಅವರನ್ನು ಮಾಫಿ ಸಾಕ್ಷಿಯಾಗಿ ಪರಿಗಣಿಸಿದ ಆದೇಶವನ್ನು ಎತ್ತಿಹಿಡಿದಿದೆ.

**ಪ್ರದೋಷ್ ಆರೋಪಿ ಅಲ್ಲವೇ**

ರೇಣುಕಾಸ್ವಾಮಿ ಕೊಲೆ ಪ್ರಕರಣದ ಚಾರ್ಜ್‌ಶೀಟ್‌ನಲ್ಲಿ ಪ್ರದೋಷ್ ಅವರನ್ನು ಈ ಹಿಂದೆ 14ನೇ ಆರೋಪಿ ಎಂದು ಹೆಸರಿಸಲಾಗಿತ್ತು. ಇದೀಗ ನ್ಯಾಯಾಲಯದ ಆದೇಶದಂತೆ ಅವರು ಪ್ರಾಸಿಕ್ಯೂಷನ್ ಪರ ಸಾಕ್ಷಿಯಾಗಿ ವಿಚಾರಣೆಗೆ ಒಳಪಡಲಿದ್ದಾರೆ. ಹೀಗಾಗಿ ಚಾರ್ಜ್‌ಶೀಟ್‌ನಿಂದ ಅವರ ಹೆಸರನ್ನು ತೆಗೆದು ಹಾಕಲಾಗಿದೆ ಪುಟ 2

## ವಿಧ್ವಂಸಕ ಕೃತ್ಯಕ್ಕೆ ಸಂಚು ಶಂಕಿತ ಉಗ್ರರಿಬ್ಬರ ಸೆರೆ



ಬೆಂಗಳೂರು, ಸೆ.25– ದೇಶದಲ್ಲಿ ವಿಧ್ವಂಸಕ ಕೃತ್ಯ ಹಾಗೂ ಭಯೋತ್ಪಾದನಾ ಚಟುವಟಿಕೆಗಳಿಗೆ ಸಂಚು ರೂಪಿಸಿದ ಇಬ್ಬರು ಶಂಕಿತ ಉಗ್ರರರನ್ನು ಚಿಕ್ಕಬಳ್ಳಾಪುರ ಪೊಲೀಸರು ಬಂಧಿಸಿದ್ದಾರೆ. ಚಿಕ್ಕಬಳ್ಳಾಪುರದ ಬಾಪೂಜಿನಗರದ ಶಬ್ಬೀರ್ ಹಾಗೂ ಉತ್ತರ ಭಾರತ ಮೂಲದ ಸಲ್ಮಾನ್ ಬಂಧಿತ ಶಂಕಿತ ಉಗ್ರರಾಗಿದ್ದು, ಇಬ್ಬರನ್ನು ತೀವ್ರ ವಿಚಾರಣೆ ನಡೆಸಲಾಗಿದೆ ಎಂದು ಚಿಕ್ಕಬಳ್ಳಾಪುರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು ತಿಳಿಸಿದ್ದಾರೆ. ಆರೋಪಿಗಳು ಟೆಲಿಗ್ರಾಂನಲ್ಲಿ ಗುಂಪೊಂದನ್ನು ರಚಿಸಿಕೊಂಡು ಭಯೋತ್ಪಾದನೆ ಹಾಗೂ ವಿಧ್ವಂಸಕ ಕೃತ್ಯಗಳ ಕುರಿತು ಚರ್ಚೆ ನಡೆಸುತ್ತಿದ್ದರು. ಶ್ರೀಮಂತರನ್ನು ಅಪಹರಿಸಿ ಹಣ ಸಂಗ್ರಹಿಸಿ, ಆ ಹಣವನ್ನು ಭಯೋತ್ಪಾದನಾ ಚಟುವಟಿಕೆಗಳಿಗೆ ಪುಟ 2

## ಬೀದಿದೀಪ ನಿರ್ವಹಣೆಯಲ್ಲಿ ಲೋಪ: ಗುತ್ತಿಗೆದಾರರಿಗೆ 13 ಲಕ್ಷ ರೂ. ದಂಡ

ಬೆಂಗಳೂರು, ಸೆ. 25- ನಗರದ ದಕ್ಷಿಣ ಭಾಗದಲ್ಲಿ ಬೀದಿದೀಪಗಳ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ವಹಿಸಿದ ಗುತ್ತಿಗೆದಾರರಿಗೆ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಒಟ್ಟು 13,00,753 ದಂಡ ವಿಧಿಸಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಸಚಿವ ಕೃಷ್ಣ ಭೈರೇಗೌಡ ಅವರ ಆದೇಶದಂತೆ ಹಾಗೂ ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್. ರಮೇಶ್ ಅವರ ನಿರ್ದೇಶನದ ಮೇರೆಗೆ ಪಾಲಿಕೆ ವ್ಯಾಪ್ತಿಯಲ್ಲಿ ರಾತ್ರಿ ವೇಳೆ ಬೀದಿದೀಪಗಳ ತಪಾಸಣೆ ನಡೆಸಲಾಗಿದೆ. ಈ ವೇಳೆ ಹಲವು ಪ್ರಮುಖ ರಸ್ತೆ ಹಾಗೂ ಪ್ರದೇಶಗಳಲ್ಲಿ ಎಲ್‌ಇಡಿ ಬೀದಿದೀಪಗಳು ಕಾರ್ಯನಿರ್ವಹಿಸದಿರುವುದು ಪತ್ತೆಯಾಗಿದೆ.

ಬೀದಿದೀಪಗಳ ಅಳವಡಿಕೆ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ವಿವಿಧ ಗುತ್ತಿಗೆ ಸಂಸ್ಥೆಗಳಿಗೆ ವಹಿಸಲಾಗಿದ್ದು, ಗುತ್ತಿಗೆದಾರರ ಸಿಬ್ಬಂದಿ ನಿಯಮಿತವಾಗಿ ಪರಿಶೀಲನೆ ನಡೆಸಿ ದೋಷಗಳನ್ನು ಸರಿಪಡಿಸದಿರುವುದು ತಪಾಸಣೆಯಲ್ಲಿ ಕಂಡುಬಂದಿದೆ. ಅಲ್ಲದೆ, ಸೆ.1ರಿಂದ 23ರವರೆಗೆ ಸಹಾಯ ಆ?ಯಪ್‌ನಲ್ಲಿ ಸಾರ್ವಜನಿಕರು ದಾಖಲಿಸಿರುವ ದೂರುಗಳನ್ನು ಪರಿಶೀಲಿಸಿದಾಗಲೂ ನಿರ್ವಹಣಾ ಲೋಪದ ಅಂಶಗಳು ಬೆಳಕಿಗೆ ಬಂದಿವೆ.

**ಕತ್ತಲೆ ಪ್ರದೇಶಗಳಿಗೆ ಕಡಿವಾಣ:**

ಬೀದಿದೀಪಗಳು ಕೆಟ್ಟುಹೋಗುವುದರಿಂದ ಪುಟ 2

ಚಿನಿವಾರಪೇಟೆ - ಮುಂಬೈ, ಸೆಪ್ಟೆಂಬರ್ 25: ಚಿನ್ನ: ಅಪರಂಜಿ - 24 ಕ್ಯಾರೆಟ್ 10 ಗ್ರಾಂ | 1,54,420 | 22 ಕ್ಯಾರೆಟ್ - 10 ಗ್ರಾಂ 1,41,550 | ಬೆಳ್ಳಿ: 1 ಕೆ.ಜಿ. - 3,20,000

ಸಂಜೆವಾಣಿ

ಬೆಂಗಳೂರು । ಜಾಹೀರಾತಿಗಾಗಿ ಸಂಪರ್ಕಿಸಿ - 94498 71825
contact@sanjevani.com

(ಒಂದನೇ ಪುಟದಿಂದ)

# ಆಯುಕ್ತರಿಗೂ ಪ್ರಶ್ನೆಗಳ ಸುರಿ ಮಳೆ

ಅಗತ್ಯವಿದ್ದರೆ ಸಂಬಂಧಿತ ನಿಯಮಗಳಲ್ಲೇ ತಿದ್ದುಪಡಿ ಮಾಡಬೇಕು ಎಂದು ವಿವೇಕ್ ಜೋಶಿ ಅಭಿಪ್ರಾಯಪಟ್ಟಿದ್ದರು. ಸಂಧು ಕೂಡ ಇದಕ್ಕೆ ಸಹಮತ ವ್ಯಕ್ತಪಡಿಸಿದ್ದರು ಎಂದು ವರದಿ ತಿಳಿಸಿದೆ.ಆದರೆ,ಆಂತರಿಕ ಆಕ್ಷೇಪಗಳ ನಡುವೆಯೂ ಮೂವರು ಆಯುಕ್ತರು ಹಲವು ಜಂಟಿ ಕಾರ್ಯಕ್ರಮಗಳು ಹಾಗೂ ಮಾಧ್ಯಮಗೋಷ್ಠಿಗಳಲ್ಲಿ ಭಾಗವಹಿಸಿದ್ದರು. 2025ರ ಅಕ್ಟೋಬರ್‌ನಿಂದ 2026ರ ಆಗಸ್ಟ್‌ವರೆಗೆ ಕನಿಷ್ಠ ಐದು ಪ್ರಮುಖ ಜಂಟಿ ಬ್ರೀಫಿಂಗ್‌ಗಳಲ್ಲಿ ಮೂವರು ಹಾಜರಾಗಿದ್ದರು ಎನ್ನಲಾಗಿದೆ. ತಮ್ಮ ಆಕ್ಷೇಪಗಳನ್ನು ಸಾರ್ವಜನಿಕವಾಗಿ ಏಕೆ ಪ್ರಸ್ತಾಪಿಸಲಿಲ್ಲ ಎಂಬ ಪ್ರಶ್ನೆಯೂ ಈಗ ಮುನ್ನೆಲೆಗೆ ಬಂದಿದೆ.

ಇಬ್ಬರು ಆಯುಕ್ತರು ಕೆಲವು ವಿಚಾರಗಳಲ್ಲಿ ಕೇಂದ್ರ ಸರ್ಕಾರದ ಕ್ಯಾಬಿನೆಟ್ ಕಾರ್ಯದರ್ಶಿಗೂ ಪತ್ರ ಬರೆದಿದ್ದರು ಎನ್ನಲಾಗಿದೆ. ಚುನಾವಣಾ ಆಯೋಗ ಸ್ವತಂತ್ರ ಸಾಂವಿಧಾನಿಕ ಸಂಸ್ಥೆಯಾಗಿರುವ ಹಿನ್ನೆಲೆಯಲ್ಲಿ, ತಮ್ಮ ಆಕ್ಷೇಪಗಳನ್ನು ಆಯೋಗದ ಅಧಿಕೃತ ವ್ಯವಸ್ಥೆಯ ಮೂಲಕ ಅಥವಾ ರಾಷ್ಟ್ರಪತಿಗೆ ಏಕೆ ಮುಂದುವರಿಸಲಿಲ್ಲ ಎಂಬ ಪ್ರಶ್ನೆಯೂ ಚರ್ಚೆಯಲ್ಲಿದೆ.

ಭಿನ್ನಾಭಿಪ್ರಾಯ ವ್ಯಕ್ತಪಡಿಸುವುದೇ ರಾಜೀನಾಮೆಗೆ ಕಾರಣವಾಗಬೇಕೆಂದಿಲ್ಲ. ಆದರೆ, ತಮ್ಮ ಆಕ್ಷೇಪಗಳನ್ನು ನಿರಂತರವಾಗಿ ನಿರ್ಲಕ್ಷಿಸಲಾಗುತ್ತಿದೆ ಅಥವಾ ಆಯೋಗದ ನಿರ್ಧಾರ ಪ್ರಕ್ರಿಯೆ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ ಎಂದು ಇಬ್ಬರೂ ಭಾವಿಸಿದ್ದರೆ, ಮುಂದಿನ ಸಾಂವಿಧಾನಿಕ ಅಥವಾ ಆಡಳಿತಾತ್ಮಕ ಕ್ರಮಗಳನ್ನು ಏಕೆ ಕೈಗೊಳ್ಳಲಿಲ್ಲ ಎಂಬ ಪ್ರಶ್ನೆ ಉದ್ಭವಿಸಿದೆ.

ಈ ಪ್ರಶ್ನೆಗಳು ಸಿಇಸಿ ಜ್ಞಾನೇಶ್ ಕುಮಾರ್ ಅವರ ಮೇಲಿನ ಹೊಣೆಗಾರಿಕೆಯನ್ನು ಕಡಿಮೆ ಮಾಡುವುದಿಲ್ಲ. ಬದಲಾಗಿ, ಮೂವರು ಆಯುಕ್ತರ ಪಾತ್ರ, ಆಂತರಿಕ ನಿರ್ಧಾರ ಪ್ರಕ್ರಿಯೆ ಹಾಗೂ ಭಿನ್ನಾಭಿಪ್ರಾಯಗಳನ್ನು ಹೇಗೆ ದಾಖಲಿಸಿ ಪರಿಹರಿಸಲಾಯಿತು ಎಂಬ ಬಗ್ಗೆ ಹೆಚ್ಚಿನ ಸ್ಪಷ್ಟತೆ ಅಗತ್ಯವಿದೆ ಎಂಬ ಚರ್ಚೆಗೆ ಕಾರಣವಾಗಿವೆ.

**10 ತಿಂಗಳಲ್ಲಿ ಕನಿಷ್ಠ 14 ಆಕ್ಷೇಪಗಳು.**

- **ಫಾರ್ಮ್–6, ಮತದಾರರ ಪಟ್ಟಿ ಮತ್ತು ದತ್ತಾಂಶ ಕೇಂದ್ರೀಕರಣದ ಬಗ್ಗೆ ಭಿನ್ನಾಭಿಪ್ರಾಯ.**
- **ಇಖಔಗಳ ಕಾನೂನುಬದ್ಧ ಅಧಿಕಾರದ ಬಗ್ಗೆ ಆತಂಕ.**
- **ಆಂತರಿಕ ಭಿನ್ನಾಭಿಪ್ರಾಯಗಳ ನಡುವೆಯೂ ಜಂಟಿ ಮಾಧ್ಯಮಗೋಷ್ಠಿಗಳಲ್ಲಿ ಭಾಗವಹಿಸಿದ್ದರು.**
- **ಕೆಲವು ಆಕ್ಷೇಪಗಳ ಕುರಿತು ಕ್ಯಾಬಿನೆಟ್ ಕಾರ್ಯದರ್ಶಿಗೂ ಪತ್ರ.**
- **ಅಂತಿಮ ನಿರ್ಧಾರದಲ್ಲಿ ಬಹುಮತದ ಅಭಿಪ್ರಾಯ ಮತ್ತು ಕಾನೂನು ಆಧಾರದ ಬಗ್ಗೆ ಸ್ಪಷ್ಟತೆ ಅಗತ್ಯ.**

# ಪ್ರದೋಷ್ ಹೆಸರು ಡಿಲೀಟ್

ಎಂದು ಮೂಲಗಳು ತಿಳಿಸಿವೆ.

ಆದರೆ ಮಾಫಿ ಸಾಕ್ಷಿಯಾಗಿ ಪರಿಗಣಿಸಲ್ಪಟ್ಟಿರುವುದರಿಂದ ಪ್ರದೋಷ್ ತಕ್ಷಣ ಜೈಲಿನಿಂದ ಬಿಡುಗಡೆಯಾಗುತ್ತಾರೆ ಎಂದಲ್ಲ. ವಿಚಾರಣೆಯ ಅವಧಿಯಲ್ಲಿ ಅವರು ಜೈಲಿನಲ್ಲೇ ಇರಬೇಕಾಗುತ್ತದೆ ಎಂದು ತಿಳಿದುಬಂದಿದೆ.

ಅವರು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಮಾಹಿತಿಯನ್ನು ಮರೆಮಾಚಿದರೆ, ಸುಳ್ಳು ಸಾಕ್ಷ್ಯ ನೀಡಿದರೆ ಅಥವಾ ನ್ಯಾಯಾಲಯ ವಿಧಿಸಿರುವ ಷರತ್ತುಗಳನ್ನು ಉಲ್ಲಂಘಿಸಿದರೆ, ಮತ್ತೆ ಆರೋಪಿಯಾಗಿ ವಿಚಾರಣೆ ಎದುರಿಸುವ ಸಾಧ್ಯತೆಯಿದೆ.

**ಜೈಲಿನಲ್ಲಿ ಹೆಚ್ಚಿದ ನಿಗಾ:**

ಮಾಫಿ ಸಾಕ್ಷಿಯಾಗಿರುವ ಹಿನ್ನೆಲೆಯಲ್ಲಿ ಜೈಲಿನಲ್ಲಿ ಪ್ರದೋಷ್ ಅವರ ಭದ್ರತೆ ಹಾಗೂ ಚಟುವಟಿಕೆಗಳ ಮೇಲೆ ಹೆಚ್ಚಿನ ನಿಗಾ ಇರಿಸಲಾಗಿದೆ ಎಂದು ಜೈಲು ಮೂಲಗಳು ತಿಳಿಸಿವೆ.

24ಗಂಟೆಯೂ ಸಿಸಿಟಿವಿ ಕಣ್ಗಾವಲು, ಹೊರಗಿನಿಂದ ಬರುವ ಊಟ, ತಿಂಡಿ ಹಾಗೂ ನೀರಿನ ಪರಿಶೀಲನೆ ಸೇರಿದಂತೆ ಹಲವು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎನ್ನಲಾಗಿದೆ. ಅಲ್ಲದೆ, ಪ್ರದೋಷ್ ಅವರನ್ನು ಭೇಟಿ ಮಾಡಲು ಬರುವ ಪ್ರತಿಯೊಬ್ಬರ ಮಾಹಿತಿಯನ್ನೂ ಸಂಪೂರ್ಣವಾಗಿ ದಾಖಲಿಸಲಾಗುತ್ತಿದೆ.

ಪ್ರಕರಣದ ವಿಚಾರಣೆಯಲ್ಲಿ ಪ್ರದೋಷ್ ಅವರ ಸಾಕ್ಷ್ಯವು ಪ್ರಮುಖವಾಗಿರುವ ಹಿನ್ನೆಲೆಯಲ್ಲಿ, ಜೈಲಿನಲ್ಲಿ ಅವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಅಧಿಕಾರಿಗಳು ಕಟ್ಟುನಿಟ್ಟಿನ ನಿಗಾ ವಹಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

**ಜೈಲಿನಲ್ಲಿ ಬಿಗಿ ಭದ್ರತೆ**

ಕೊಲೆ ಪ್ರಕರಣದಲ್ಲಿ ಮಾಫಿ ಸಾಕ್ಷಿಯಾಗಿರುವ ಪ್ರದೋಷ್‌ಗೆ ಜೈಲಿನಲ್ಲಿ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ಜೈಲಾಧಿಕಾರಿಗಳು ಕಟ್ಟುನಿಟ್ಟಿನ ಭದ್ರತಾ ಕ್ರಮ ಕೈಗೊಂಡಿದ್ದಾರೆ.

ಪ್ರದೋಷ್ ಇರುವ ಸೆಲ್ ಮೇಲೆ 24 ಗಂಟೆಯೂ ಸಿಸಿಟಿವಿ ಕಣ್ಗಾವಲು ಇರಿಸಲಾಗಿದ್ದು, ಅವರ ಚಲನವಲನಗಳ ಮೇಲೆ ನಿರಂತರ ನಿಗಾ ವಹಿಸಲಾಗಿದೆ. ಮಾಫಿ ಸಾಕ್ಷಿಯಾಗಿರುವ ಹಿನ್ನೆಲೆಯಲ್ಲಿ ಅವರ ಸುರಕ್ಷತೆಗೆ ವಿಶೇಷ ಆದ್ಯತೆ ನೀಡಲಾಗಿದೆ ಎಂದು ತಿಳಿದುಬಂದಿದೆ.

ಪ್ರದೋಷ್‌ಗೆ ಹೊರಗಿನಿಂದ ಬರುವ ಊಟ, ತಿಂಡಿ ಹಾಗೂ ನೀರಿನ ಬಗ್ಗೆಯೂ ಅಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ. ಅಲ್ಲದೆ, ಅವರನ್ನು ಭೇಟಿಯಾಗಲು ಜೈಲಿಗೆ ಬರುವ ವ್ಯಕ್ತಿಗಳ ವಿವರಗಳನ್ನು ಸಂಪೂರ್ಣವಾಗಿ ಸಂಗ್ರಹಿಸಿ ಪರಿಶೀಲಿಸಲಾಗುತ್ತಿದೆ.

ಪ್ರದೋಷ್ ಭದ್ರತೆಗೆ ಸಂಬಂಧಿಸಿದಂತೆ ಜೈಲಿನ ಅಧಿಕಾರಿಗಳು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದು, ಜೈಲಿನೊಳಗೆ ಯಾವುದೇ ಅಹಿತಕರ ಘಟನೆ ನಡೆಯದಂತೆ ಹದ್ದಿನ ಕಣ್ಣು ಇರಿಸಲಾಗಿದೆ.

# ನಕಲಿ ಔಷಧ ಮಾರಾಟ

ನಕಲಿ ಔಷಧಗಳು ಪೂರೈಕೆಯಾಗಿರುವ ಮಾಹಿತಿ ಹೊರಬಂದಿದೆ.

ಈ ಜಾಲದ ಹಿಂದೆ ಯಾರಿದ್ದಾರೆ ಔಷಧಗಳು ಎಲ್ಲಿಂದ ಬಂದವು ಯಾರ ಮೂಲಕ ಆಸ್ಪತ್ರೆ, ಮೆಡಿಕಲ್ ಸ್ಟೋರ್‌ಗಳಿಗೆ ತಲುಪಿದವು ಹಣದ ವಹಿವಾಟು ಹೇಗೆ ನಡೆಯಿತು ಎಂಬ ಹಲವು ಪ್ರಶ್ನೆಗಳಿಗೆ SIT ಉತ್ತರ ಹುಡುಕುತ್ತಿದೆ. ಬಿದದಿ ಪ್ರಕರಣದ ತನಿಖೆಗಾಗಿ ಈಗಾಗಲೇ ಆರು ಸದಸ್ಯರ ವಿಶೇಷ ತನಿಖಾ ತಂಡ ರಚಿಸಲಾಗಿದೆ.

**16 ಲೈಸೆನ್ಸ್ ರದ್ದು, 8 ಅಮಾನತು:**

ನಕಲಿ ಔಷಧ ಜಾಲದ ವಿರುದ್ಧ ಈಆಂ ಕೂಡ ಕಠಿಣ ಕ್ರಮ ಕೈಗೊಂಡಿದೆ. 16 ಔಷಧ ಮಾರಾಟ ಹಾಗೂ ವಿತರಣಾ ಸಂಸ್ಥೆಗಳ ಲೈಸೆನ್ಸ್ ರದ್ದುಪಡಿಸಲಾಗಿದ್ದು, 8 ಸಂಸ್ಥೆಗಳ ಲೈಸೆನ್ಸ್ ಅಮಾನತುಗೊಳಿಸಲಾಗಿದೆ. ಅಮಾನತುಗೊಂಡ ಸಂಸ್ಥೆಗಳಲ್ಲಿ ಫೈಜರ್‌ನ ಬೆಂಗಳೂರಿನ ಗ್ರಾಮಾಂತರ ಜಿಲ್ಲೆಯ ಡಿಪೋ ಕೂಡ ಸೇರಿದೆ.

ತನಿಖೆಗೆ ಸಹಕರಿಸದ ಆಸ್ಪತ್ರೆಗಳು, ಔಷಧ ಅಂಗಡಿಗಳು ಹಾಗೂ ಡಿಸ್ಟ್ರಿಬ್ಯೂಟರ್‌ಗಳ ವಿರುದ್ಧವೂ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಲಾಗಿದೆ.

**ಮೂರು ಇಲಾಖೆಗಳ ಸಮನ್ವಯ ತನಿಖೆ:**

ಪೊಲೀಸ್ ಇಲಾಖೆ + ಈಆಂ + ಕಮರ್ಷಿಯಲ್ ಟ್ಯಾಕ್ಸ್ ಇಲಾಖೆ ಸಮನ್ವಯದಲ್ಲಿ ತನಿಖೆ ನಡೆಸಲು ಒತ್ತು ನೀಡಲಾಗಿದೆ. ವಿಶೇಷವಾಗಿ ನಕಲಿ ಔಷಧಗಳ ಪೂರೈಕೆ ಮಾರ್ಗ ಹಾಗೂ ಹಣಕಾಸು ವಹಿವಾಟಿನ ಜಾಲವನ್ನು ಪತ್ತೆಹಚ್ಚಲು ಖಖಖ ಗಮನಹರಿಸಿದೆ.

ನಕಲಿ ಔಷಧ ತಯಾರಿಕೆ ಹಾಗೂ ಮಾರಾಟಕ್ಕೆ ಈಗಿರುವ ಶಿಕ್ಷೆಗಳು ಸಾಲದು; ಜನರ ಜೀವಕ್ಕೆ ನೇರ ಅಪಾಯ ಉಂಟು ಮಾಡುವ ಇಂತಹ ಕೃತ್ಯಗಳನ್ನು ಮತ್ತಷ್ಟು ಕಠಿಣ ಕ್ರಿಮಿನಲ್ ಪ್ರಕರಣಗಳಡಿ ತರಬೇಕೆಂದು ಸಚಿವ ಖಾದರ್ ಹೇಳಿದ್ದಾರೆ.

**ತನಿಖೆಯ ಬಿಗಿ ಜಾಲ**

- **ನಕಲಿ ಔಷಧ ಜಾಲದ ಮೇಲೆ SIT ತನಿಖೆ**
- **ಪೊಲೀಸ್, ಈಆಂ, ಕಮರ್ಷಿಯಲ್ ಟ್ಯಾಕ್ಸ್ ಇಲಾಖೆ ಸಮನ್ವಯ**
- **ಪೂರೈಕೆ ಮಾರ್ಗ ಹಾಗೂ ಹಣಕಾಸು ಜಾಲದ ಮೇಲೆ ಕಣ್ಣು**
- **16 ಔಷಧ ಲೈಸೆನ್ಸ್ ರದ್ದು**
- **8 ಸಂಸ್ಥೆಗಳ ಲೈಸೆನ್ಸ್ ಅಮಾನತು**
- **ತನಿಖೆಗೆ ಮಾಹಿತಿ ನೀಡದವರ ವಿರುದ್ಧವೂ ಕ್ರಮದ ಎಚ್ಚರಿಕೆ**
- **ನಕಲಿ ಔಷಧ ಮಾರಾಟವನ್ನು ಕೊಲೆ ಯತ್ನದಂತಹ ಗಂಭೀರ ಅಪರಾಧದಡಿ ಪರಿಗಣಿಸುವ ಕುರಿತು ಸರ್ಕಾರದ ಚಿಂತನೆ**

ರೋಗಿಯ ಜೀವ ಉಳಿಸಬೇಕಾದ ಔಷಧಿಯನ್ನೇ ನಕಲಿ ಮಾಡಿ ಮಾರಾಟ ಮಾಡುವ ದಂಧೆ ವಿರುದ್ಧ ಸರ್ಕಾರ ಈಗ ಕಠಿಣ ಕಾನೂನು ಕ್ರಮದತ್ತ ಹೆಜ್ಜೆ ಇಡುತ್ತಿದೆ.

ಜಾಲದ ಬೇರು ಎಷ್ಟು ಆಳಕ್ಕೆ ಹೋಗಿದೆ, ಯಾರ್ಯಾರು ಇದರ ಹಿಂದೆ ಇದ್ದಾರೆ ಎಂಬುದನ್ನು ಪತ್ತೆ ಹಚ್ಚಲು SIT ತನಿಖೆ ಮುಂದುವರಿದಿದೆ.

# ಅನ್ನದಾತರಿಗೆ ಸಹಾಯ ಹಸ್ತ: ಡಿಸಿಎಂ

ಮುಂದಿನ ದಿನಗಳಲ್ಲಿ ಇನ್ನಷ್ಟು ಮೆಮೊರಾಂಡಂಗಳನ್ನು ಸಲ್ಲಿಸಲಾಗುವುದು. ಅಂತಿಮವಾಗಿ ಸಂಪೂರ್ಣ ನಷ್ಟದ ಅಂದಾಜು ಸಿದ್ಧಪಡಿಸಿ, ಎನ್‌ಡಿಆರ್‌ಎಫ್ ಮಾರ್ಗಸೂಚಿಗಳನ್ವಯ ರಾಜ್ಯಕ್ಕೆ ಎಷ್ಟು ಪರಿಹಾರ ಬೇಕು ಎಂಬುದನ್ನು ಕೇಂದ್ರಕ್ಕೆ ಸಲ್ಲಿಸಲಾಗುವುದು ಎಂದರು.

ಕೇಂದ್ರ ಸರ್ಕಾರ ರಾಜ್ಯಕ್ಕೆ ನೆರವು ನೀಡುವ ರೀತಿಯ ಆಧಾರದ ಮೇಲೆ ಮುಂದಿನ ಪರಿಹಾರ ಕ್ರಮಗಳನ್ನು ನಿರ್ಧರಿಸಲಾಗುವುದು. ಈ ಹಂತದಲ್ಲಿ ಪರಿಷ್ಕೃತ ಪರಿಹಾರ ಮೊತ್ತದ ಕುರಿತು ಯಾವುದೇ ಬದ್ಧತೆ ನೀಡಲು ಸಾಧ್ಯವಿಲ್ಲ ಎಂದು ಡಾ. ಪರಮೇಶ್ವರ ಸ್ಪಷ್ಟಪಡಿಸಿದರು.

ಕೇಂದ್ರ ಸರ್ಕಾರ ಈಗಾಗಲೇ ಬರ ಪರಿಸ್ಥಿತಿಯ ಅಧ್ಯಯನಕ್ಕಾಗಿ ಐಎಎಸ್ ಅಧಿಕಾರಿಯೊಬ್ಬರನ್ನು ಒಳಗೊಂಡ ತಂಡವನ್ನು ಕಳುಹಿಸುವ ಕುರಿತು ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದೆ. ತಂಡದ ಭೇಟಿ ದಿನಾಂಕ ಇನ್ನೂ ನಿಗದಿಯಾಗಿಲ್ಲ. ಕೇಂದ್ರದ ತಂಡ ರಾಜ್ಯಕ್ಕೆ ಆಗಮಿಸಿ, ತನ್ನ ಮಾರ್ಗಸೂಚಿಗಳ ಪ್ರಕಾರ ಬರ ಪರಿಸ್ಥಿತಿ ಹಾಗೂ ನಷ್ಟವನ್ನು ಮೌಲ್ಯಮಾಪನ ಮಾಡಿದ ಬಳಿಕ ಮುಂದಿನ ಪರಿಹಾರದ ಪ್ರಮಾಣ ಸ್ಪಷ್ಟವಾಗಲಿದೆ ಎಂದರು.

ಬರ ಪರಿಹಾರಕ್ಕೆ ಸಂಬಂಧಿಸಿದಂತೆ ಸರ್ವಪಕ್ಷ ನಿಯೋಗವನ್ನು ದೆಹಲಿಗೆ ಕರೆದೊಯ್ಯುವ ಕುರಿತು ಈಗಾಗಲೇ ವಿಧಾನಸಭೆಯಲ್ಲಿ ಮುಖ್ಯಮಂತ್ರಿಗಳು ಹಾಗೂ ತಾವು ಸ್ಪಷ್ಟಪಡಿಸಿದ್ದೇವೆ. ಸರ್ವಪಕ್ಷ ಸಭೆ ನಡೆಸಿ, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನಿಯೋಗವನ್ನು ದೆಹಲಿಗೆ ಕರೆದೊಯ್ಯಲಾಗುವುದು ಎಂದು ತಿಳಿಸಿದರು.

ಪ್ರಧಾನಮಂತ್ರಿ, ಕೇಂದ್ರ ಗೃಹ ಸಚಿವರು ಹಾಗೂ ಕೇಂದ್ರ ಕೃಷಿ ಸಚಿವರನ್ನು ಭೇಟಿ ಮಾಡಿ ಕರ್ನಾಟಕದ ಬರ ಪರಿಸ್ಥಿತಿ ಹಾಗೂ ರೈತರ ಸಂಕಷ್ಟವನ್ನು ಮನವರಿಕೆ ಮಾಡಿಕೊಡಲಾಗುವುದು. ವಿರೋಧ ಪಕ್ಷದವರು ಬರಲು ಸಿದ್ಧರಿದ್ದರೆ, ಅವರನ್ನು ಸಹ ಜೊತೆಯಲ್ಲಿ ಕರೆದೊಯ್ಯಲು ಸರ್ಕಾರ ಸಿದ್ಧವಾಗಿದೆ. ನಿಯೋಗದ ದೆಹಲಿ ಭೇಟಿಯ ದಿನಾಂಕ ಇನ್ನೂ ನಿಗದಿಯಾಗಿಲ್ಲ ಎಂದು ಮಾಹಿತಿ ನೀಡಿದರು. ರಾಮನಗರದಲ್ಲಿ ವಿಶೇಷಚೇತನರು ಗೌರವಧನ ಹೆಚ್ಚಳಕ್ಕೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಸಂಬಂಧಪಟ್ಟ ಇಲಾಖೆ ಈ ಕುರಿತು ಪ್ರಸ್ತಾವನೆ ಸಿದ್ಧಪಡಿಸಿ ಸಚಿವ ಸಂಪುಟದ ಮುಂದೆ ತರಬೇಕು. ಮುಖ್ಯಮಂತ್ರಿಗಳು ಹಣಕಾಸು ಸಚಿವರು. ಅವರೊಂದಿಗೆ ಚರ್ಚಿಸಿ ಪ್ರಸ್ತಾವನೆ ಸಚಿವ ಸಂಪುಟಕ್ಕೆ ಬಂದಲ್ಲಿ, ಎಲ್ಲರೂ ಸಹಕರಿಸುವುದಾಗಿ ತಿಳಿಸಿದರು.

# ಶಂಕಿತ ಉಗ್ರರಿಬ್ಬರ ಸೆರೆ

ಬಳಸುವ ಬಗ್ಗೆ ಗುಂಪಿನಲ್ಲಿ ಚರ್ಚೆ ನಡೆದಿತ್ತು ಎಂದು ತಿಳಿಸಿದ್ದಾರೆ.

ದೇಶದಲ್ಲಿ ಅರಾಜಕತೆ ಸೃಷ್ಟಿಸುವ ಉದ್ದೇಶದಿಂದ ವಿವಿಧ ರೀತಿಯ ದಾಳಿ ನಡೆಸುವ ಕುರಿತು ಆರೋಪಿಗಳು ಪ್ರತಿದಿನ ಟೆಲಿಗ್ರಾಂ ಗುಂಪಿನಲ್ಲಿ ಚರ್ಚಿಸುತ್ತಿದ್ದರು ಎನ್ನಲಾಗಿದೆ. ಅಲ್ಲದೆ, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವ ಕುರಿತು ಚರ್ಚೆ ನಡೆದಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದೇಶದ ವಿವಿಧ ಭಾಗಗಳ ಹಲವು ಮಂದಿ ಈ ಟೆಲಿಗ್ರಾಂ ಗುಂಪಿನ ಸದಸ್ಯರಾಗಿದ್ದರು ಎನ್ನಲಾಗಿದ್ದು, ಅವರ ಗುರುತು ಹಾಗೂ ಸಂಪರ್ಕದ ಬಗ್ಗೆ ಪೊಲೀಸರು ಮಾಹಿತಿ ಕಲೆಹಾಕುತ್ತಿದ್ದಾರೆ. ಸಂಚಿನ ಹಿಂದೆ ಇನ್ನೂ ಯಾರಾದರೂ ಇದ್ದಾರೆ–ಯೇ ಎಂಬ ಬಗ್ಗೆಯೂ ತನಿಖೆ ಮುಂದುವರಿದಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಚಿಕ್ಕಬಳ್ಳಾಪುರ ನಗರ ಪೊಲೀಸರು ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 113ರ ಅಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಬಂಧಿತ ಆರೋಪಿಗಳನ್ನು ವಿಚಾರಣೆ ನಡೆಸಿ ಪೊಲೀಸರು, ಟೆಲಿಗ್ರಾಂ ಗುಂಪಿನ ಚಟುವಟಿಕೆಗಳು, ಸದಸ್ಯರ ಸಂಪರ್ಕ ಹಾಗೂ ಸಂಚಿನ ಸ್ವರೂಪದ ಕುರಿತು ಹೆಚ್ಚಿನ ಮಾಹಿತಿ ಸಂಗ್ರಹಿಸುತ್ತಿದ್ದಾರೆ.

# ಸಿಇಸಿ ವಿರುದ್ಧ ಸುಪ್ರೀಂನಲ್ಲಿ ಅರ್ಜಿ

ದಂತೆ ದಿ ಇಂಡಿಯನ್ ಎಕ್ಸ್‌ಪ್ರೆಸ್ ನಡೆಸಿದ ತನಿಖಾ ವರದಿಯ ಪ್ರಕಾರ, ಕಳೆದ 10 ತಿಂಗಳಲ್ಲಿ ಚುನಾವಣಾ ಆಯುಕ್ತರಾದ ಸಂಧು ಮತ್ತು ಜೋಶಿ ಅವರು ಮತದಾರರ ಪಟ್ಟಿಗೆ ಸಂಬಂಧಿಸಿದ ನಿರ್ಧಾರಗಳು ಹಾಗೂ ಆದೇಶಗಳ ಕುರಿತು ಕನಿಷ್ಠ 14 ಬಾರಿ ಲಿಖಿತ ಆಕ್ಷೇಪ ದಾಖಲಿಸಿದ್ದರು.

ಹೊಸ ಮತದಾರರ ಸೇರ್ಪಡೆ, ಮತದಾರರ ಹೆಸರು ಅಳಿಸುವುದು ಮತ್ತು ಮರುಸ್ಥಾಪಿಸುವುದು, ಫಾರಂ–6 ಬದಲಾವಣೆ ಹಾಗೂ ಚುನಾವಣಾ ಪಟ್ಟಿಯ ದತ್ತಾಂಶದ ನಿರ್ವಹಣೆ ಸೇರಿದಂತೆ ಹಲವು ವಿಷಯಗಳಲ್ಲಿ ಆಕ್ಷೇಪ ವ್ಯಕ್ತವಾಗಿತ್ತು.

ಮತದಾರರ ಪಟ್ಟಿಯ ದತ್ತಾಂಶವನ್ನು ಕ್ರಮೇಣ ಕೇಂದ್ರೀಕರಿಸಲಾಗುತ್ತಿದೆ ಎಂಬುದರ ಬಗ್ಗೆಯೂ ಇಬ್ಬರು ಆಯುಕ್ತರು ಕಳವಳ ವ್ಯಕ್ತಪಡಿಸಿದ್ದರು. ರಾಜ್ಯ ಮಟ್ಟದ ಚುನಾವಣಾ ಅಧಿಕಾರಿಗಳಿಗೆ ಚುನಾವಣಾ ದತ್ತಾಂಶ ವ್ಯವಸ್ಥೆಗೆ ಸಂಪೂರ್ಣ ಪ್ರವೇಶ ಸಿಗುತ್ತಿಲ್ಲ ಎಂಬ ಪ್ರಶ್ನೆಯನ್ನೂ ಸಂಧು ಎತ್ತಿದ್ದರು. ಮತ್ತೊಂದೆಡೆ, ಜೋಶಿ ಅವರು ಮತದಾರರ ದತ್ತಾಂಶಕ್ಕೆ ಸಂಬಂಧಿಸಿದ ಪ್ರವೇಶ ಮತ್ತು ಬದಲಾವಣೆಗಳ ಕುರಿತು ಪರಿಶೀಲನೆ ನಡೆಸುವ ಅಗತ್ಯವಿದೆ ಎಂದು ಸೂಚಿಸಿದ್ದರು.

2023ರ ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಚುನಾವಣಾ ಆಯುಕ್ತರ (ನೇಮಕ, ಸೇವಾ ಷರತ್ತುಗಳು ಮತ್ತು ಅವಧಿ) ಕಾಯ್ದೆಯ ಸೆಕ್ಷನ್ 18 ಪ್ರಕಾರ, ಚುನಾವಣಾ ಆಯೋಗದ ಕಾರ್ಯಗಳನ್ನು ಸಾಧ್ಯವಾದಷ್ಟು ಸರ್ವಾನುಮತದಿಂದ ನಡೆಸಬೇಕು. ಆಯುಕ್ತರ ನಡುವೆ ಭಿನ್ನಾಭಿಪ್ರಾಯ ಉಂಟಾದರೆ ಬಹುಮತದ ಅಭಿಪ್ರಾಯದಂತೆ ನಿರ್ಧಾರ ಕೈಗೊಳ್ಳಬೇಕು.

ಈ ಹಿನ್ನೆಲೆಯಲ್ಲಿ ಸಿಇಸಿ ಏಕಪಕ್ಷೀಯವಾಗಿ ನಿರ್ಧಾರ ಕೈಗೊಂಡಿ–ದ್ದಾರೆ ಎಂಬ ಆರೋಪಗಳನ್ನು ಅರ್ಜಿಯಲ್ಲಿ ಪ್ರಶ್ನಿಸಲಾಗಿದೆ. ಆದರೆ ಚುನಾವಣಾ ಆಯೋಗವು ಆಂತರಿಕ ಚರ್ಚೆಗಳಲ್ಲಿ ಭಿನ್ನಾಭಿಪ್ರಾಯಗಳು, ಲಿಖಿತ ಅಭಿಪ್ರಾಯಗಳು ಮತ್ತು ಆಕ್ಷೇಪಗಳು ಸಹಜವಾಗಿದ್ದು, ಅಂತಿಮ ನಿರ್ಧಾರಗಳನ್ನು ಆಯೋಗವು ಸರ್ವಾನುಮತದಿಂದಲೇ ಕೈಗೊಂಡಿದೆ ಎಂದು ಸ್ಪಷ್ಟಪಡಿಸಿದೆ.

ಬಿಹಾರದಲ್ಲಿ 2025ರ ಜೂನ್‌ನಲ್ಲಿ ಆರಂಭವಾದ ಪ್ರಕ್ರಿಯೆ ಬಳಿಕ ದೇಶದ ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ ನಡೆದಿದೆ. ಈ ಪ್ರಕ್ರಿಯೆಯಲ್ಲಿ ಕೋಟ್ಯಂತರ ಹೆಸರುಗಳ ಕುರಿತು ಪರಿಶೀಲನೆ, ಸೇರ್ಪಡೆ, ಅಳಿಸುವಿಕೆ ಮತ್ತು ಮರುಸ್ಥಾಪನೆಗೆ ಸಂಬಂಧಿಸಿದ ವಿವಾದಗಳು ಉಂಟಾಗಿವೆ. ಈ ಹಿನ್ನೆಲೆಯಲ್ಲಿ ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ರಾಜಕೀಯ ಪಕ್ಷಗಳಲ್ಲೂ ತೀವ್ರ ಚರ್ಚೆ ನಡೆಯುತ್ತಿದೆ.

- **ಫಾರಂ6ರಲ್ಲಿ ಮಾಡಿರುವ ಬದಲಾವಣೆ ಪ್ರಶ್ನಿಸಿ ಅರ್ಜಿ**
- **ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿದಿದ್ದಾರೆ ಎಂದು ಆರೋಪ**
- **ಮತದಾರರ ಪಟ್ಟಿಯ ದತ್ತಾಂಶವನ್ನು ಕೇಂದ್ರೀಕರಿಸಿದ ಕ್ರಮದ ಬಗ್ಗೆಯೂ ಆಕ್ಷೇಪ**
- **ಎಸ್‌ಐಆರ್ ನಿರ್ಧಾರಗಳಲ್ಲಿ ಇತರ ಆಯುಕ್ತರ ಸಮ್ಮತಿ ಇರಲಿಲ್ಲ ಎಂಬ ಆರೋಪ**
- **ಜನಪ್ರತಿನಿಧಿತ್ವ ಕಾಯ್ದೆಯ ಸೆಕ್ಷನ್ 32ರಡಿ ಕ್ರಮಕ್ಕೆ ಮನವಿ**
- **ಆಯೋಗದ ಕಾರ್ಯವೈಖರಿ ಕುರಿತು ಸ್ವತಂತ್ರ ತನಿಖೆ ನಡೆಸುವಂತೆ ಕೋರಿಕೆ**
- **ಚುನಾವಣಾ ಆಯೋಗದ ಸ್ಪಷ್ಟನೆಗೆ ಒತ್ತಾಯ**
- **ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ರಾಜಕೀಯ ವಿವಾದ ತೀವ್ರ**

# ಬೀದಿದೀಪ ನಿರ್ವಹಣೆಯಲ್ಲಿ ಲೋಪ

ರಸ್ತೆಗಳು ಕತ್ತಲಾಗಿ ಸಾರ್ವಜನಿಕರ ಸುರಕ್ಷತೆ ಹಾಗೂ ಸುಗಮ ಸಂಚಾರಕ್ಕೆ ಸಮಸ್ಯೆಯಾಗುವ ಹಿನ್ನೆಲೆಯಲ್ಲಿ ಪಾಲಿಕೆ ಗುತ್ತಿಗೆ ಒಪ್ಪಂದದ ನಿಯಮಗಳಡಿ ದಂಡ ವಿಧಿಸಿದೆ.

**ದಂಡದ ವಿವರ:**

M/s Effilume Pvt. Ltd. - 3,29,199

M/s Spectrum Tool Engineers Pvt. Ltd. - 9,56,955

M/s Transglobal Power Ltd. - 14,599

ಒಟ್ಟು –13,00,753.

ನಗರದ ವಿವಿಧೆಡೆ ಕಂಡುಬಂದಿರುವ 'ಡಾರ್ಕ್ ಸ್ಪಾಟ್'ಗಳನ್ನು ಕೂಡಲೇ ನಿವಾರಿಸುವಂತೆ ಆಯುಕ್ತ ಕೆ.ಎನ್. ರಮೇಶ್ ಅವರು ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ದೋಷಪೂರಿತ ಎಲ್ಲ ಎಲ್‌ಇಡಿ ಬೀದಿ ದೀಪಗಳನ್ನು ಯುದ್ಧೋಪಾದಿಯಲ್ಲಿ ದುರಸ್ತಿಪಡಿಸಿ, ಸಾರ್ವಜನಿಕರ ದೂರುಗಳಿಗೆ ತ್ವರಿತವಾಗಿ ಸ್ಪಂದಿಸುವಂತೆ ಸೂಚಿಸಲಾಗಿದೆ.

ಕರ್ತವ್ಯದಲ್ಲಿ ನಿರ್ಲಕ್ಷ್ಯ ಮುಂದುವರಿದರೆ ಗುತ್ತಿಗೆದಾರರು ಹಾಗೂ ಸಂಬಂಧಪಟ್ಟವರ ವಿರುದ್ಧ ಮುಂದಿನ ದಿನಗಳಲ್ಲಿ ಮತ್ತಷ್ಟು ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಆಯುಕ್ತರು ಎಚ್ಚರಿಕೆ ನೀಡಿದ್ದಾರೆ.

# ನಾಳೆ ರಾಜ್ಯಾದ್ಯಂತ ಕೈ ಪ್ರತಿಭಟನೆ

ತಪ್ಪು ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್‌ಕುಮಾರ್ ಅಕ್ರಮ ಎಸಗಿದ್ದಾರೆ. ಅವರು ತಕ್ಷಣವೇ ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ ಅವರನ್ನು ಬಂಧಿಸಬೇಕು ಎಂದು ಹರಿಪ್ರಸಾದ್ ಒತ್ತಾಯಿಸಿದರು.

ಮುಖ್ಯ ಆಯುಕ್ತರ ನಡೆಯ ಬಗ್ಗೆ ಕಾಂಗ್ರೆಸ್‌ನ ರಾಹುಲ್‌ಗಾಂಧಿ ಅವರು ಫೆಬ್ರವರಿ 25 ರಂದೇ ಪತ್ರ ಬರೆದಿದ್ದರು. ಆದರೆ ಆಯೋಗ ಆ ಪತ್ರಕ್ಕ ಗೌರವ ಕೊಟ್ಟಿರಲಿಲ್ಲ. ಪ್ರಜಾಪ್ರಭುತ್ವ ಸಂವಿಧಾನ ವಿರೋಧವಾಗಿ ಇವರು ನಡೆದುಕೊಂಡಿದ್ದಾರೆ. ಇದನ್ನು ನಾವು ದೇಶ ದ್ರೋಹ ಎಂದು ಕರೆಯಲೇಬೇಕು ಎಂದರು.

ಬಿಜೆಪಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಎಸ್‌ಐಆರ್ ನಡೆಸಲಾಗಿದೆ. ಈ ಎಸ್‌ಐಆರ್ ಪ್ರಕ್ರಿಯೆಯನ್ನು ರದ್ದುಪಡಿಸಬೇಕು ಎಂದು ಒತ್ತಾಯಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಎಐಸಿಸಿ ಕಾರ್ಯದರ್ಶಿ ಗೋಪಿನಾಥ್ ಪಳಿಯಪ್ಪನವರ್, ಕೇಂದ್ರ ಚುನಾವಣಾ ಆಯೋಗ ಅಕ್ರಮ ಎಸಗಿದೆ. ಮುಖ್ಯ ಆಯುಕ್ತರ ನಡೆಯ ವಿರುದ್ಧ ಇನ್ನಿಬ್ಬರು ಆಯುಕ್ತರು ಧ್ವನಿ ಎತ್ತಿದ್ದಾರೆ. ಎಸ್‌ಐಆರ್‌ನ್ನು ರದ್ದುಪಡಿಸಬೇಕು ಎಂದು ಅವರು ಒತ್ತಾಯಿಸಿದರು.

ರಾಜ್ಯದಲ್ಲೂ ಎಸ್‌ಐಆರ್ ಅಕ್ರಮ ನಡೆದಿದೆ. ಈ ಎಸ್‌ಐಆರ್‌ನ್ನು ರದ್ದುಪಡಿಸುವಂತೆ ಅವರು ಒತ್ತಾಯಿಸಿದರು.




ಬಿಡದಿ ಭೂಸ್ವಾಧೀನದ ವಿರುದ್ಧ ಬೈರಮಂಗಲದಲ್ಲಿ ಅಹೋರಾತ್ರಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ಅನ್ನದಾತರ ಹೋರಾಟಕ್ಕೆ ಬೆಂಬಲ ನೀಡಿರುವ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಇಂದು ಬೈರಮಂಗಲದಕ್ಕೆ ಭೇಟಿ ನೀಡಿ, ರೈತರ ಜೊತೆ ಪ್ರತಿಭಟನೆಯಲ್ಲಿ ಭಾಗಿಯಾದರು.

# ನಾಳೆ ಬೃಹತ್ ಪ್ರತಿಭಟನೆ: ಯುವ ಕಾಂಗ್ರೆಸ್ ಬೆಂಬಲ

ಬೆಂಗಳೂರು,ಸೆ.25–ಚುನಾವಣಾ ಆಯೋಗದ ಕಾರ್ಯವೈಖರಿ ಹಾಗೂ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಕುರಿತು ಗಂಭೀರ ಆರೋಪಗಳು ಕೇಳಿಬಂದಿರುವ ಹಿನ್ನೆಲೆಯಲ್ಲಿ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆ ಹಾಗೂ ಅವರ ವಿರುದ್ಧ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸೆ.26ರಂದು ಆಯೋಜಿಸಿರುವ ಬೃಹತ್ ಪ್ರತಿಭಟನೆಗೆ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ಬೆಂಬಲ ಸೂಚಿಸಿದೆ.

ಎಸ್‌ಐಆರ್ ಪ್ರಕ್ರಿಯೆಯ ವಿವಿಧ ನಿರ್ಧಾರಗಳಿಗೆ ಸಂಬಂಧಿಸಿದಂತೆ ಇಬ್ಬರು ಚುನಾವಣಾ ಆಯುಕ್ತರು ಕಳೆದ 10 ತಿಂಗಳಲ್ಲಿ 14 ಬಾರಿ ಆಕ್ಷೇಪ ವ್ಯಕ್ತಪಡಿಸಿದ್ದರು ಎಂಬ ವರದಿ ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ. ಈ ರೀತಿಯ ಏಕಪಕ್ಷೀಯವಾದ ನಿರ್ಧಾರಗಳು ಪ್ರಜಾಪ್ರಭುತ್ವಕ್ಕೆ ಮಾರಕವಾಗಿವೆ ಆದಕಾರಣ, ಯುವ ಕಾಂಗ್ರೆಸ್ ಕೆಪಿಸಿಸಿ ಜೊತೆಗೂಡಿ ಸೆಪ್ಟೆಂಬರ್ 26ರಂದು ನಗರದ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಲಿದೆ.

ಪ್ರಸ್ತುತ, ಚುನಾವಣಾ ಪ್ರಕ್ರಿಯೆಯ ಪಾರದರ್ಶಕತೆ, ಮತದಾರರ ಹಕ್ಕುಗಳ ರಕ್ಷಣೆ ಹಾಗೂ ಚುನಾವಣಾ ಆಯೋಗದ ವಿಶ್ವಾಸಾರ್ಹತೆಯ ಕುರಿತು ಸ್ವತಂತ್ರ ತನಿಖೆ ಅಗತ್ಯವಾಗಿದೆ. ಈ ವಿಚಾರವಾಗಿ ಕಾಂಗ್ರೆಸ್ ರಾಷ್ಟ್ರಮಟ್ಟದಲ್ಲಿ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆ, ಬಂಧನ ಮತ್ತು ಸ್ವತಂತ್ರ ಪರಿಶೀಲನೆಗೆ ಒತ್ತಾಯಿಸಿದೆ.

ಪ್ರತಿಭಟನೆಯಲ್ಲಿ ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ಎಚ್.ಎಸ್.ಮಂಜುನಾಥ್ ಗೌಡ ಪಾಲ್ಗೊಳ್ಳಲಿದ್ದು, ನೂರಾರು ಯುವ ಕಾಂಗ್ರೆಸ್ ಪದಾಧಿಕಾರಿಗಳು ಭಾಗವಹಿಸಿ ಪ್ರತಿಭಟನೆಗೆ ಬೆಂಬಲ ನೀಡಲಿದ್ದಾರೆ.ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಮೈಸೂರು ಅರಮನೆಯ ಫಿರಂಗಿ ಗಾಡಿಗಳಿಗೆ ಪೂಜೆ

ಮೈಸೂರು.ಸೆ.25– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಅರಮನೆ ಆವರಣದಲ್ಲಿ ಫಿರಂಗಿ ಗಾಡಿಗಳಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಲಾಯಿತು.

ಮೈಸೂರು ನಗರ ಪೊಲೀಸ್ ಇಲಾಖೆಯ ವತಿಯಿಂದ ನಡೆದ ಪೂಜಾ ಕಾರ್ಯಕ್ರಮದಲ್ಲಿ ಪೊಲೀಸ್ ಕಮಿಷನರ್ ಸೀಮಾ ಲಾಟ್ಕರ್, ಡಿಸಿಪಿ ಸುಂದರರಾಜ್ ಹಾಗೂ ಹರ್ಷ ಪ್ರಿಯಂವದಾ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಭಾಗವಹಿಸಿದ್ದರು.

ಜಂಬೂಸವಾರಿ ದಿನದಂದು 21ಬಾರಿ ಭಾರಿ ಫಿರಂಗಿ ಗಾಡಿಗಳ ಮೂಲಕ ಕುಶಾಲತೋಪು ಸಿಡಿಸಲು ನಗರ ಪೊಲೀಸರು ಸಿದ್ಧತೆ ನಡೆಸಿದ್ದಾರೆ. ಈ ಹಿನ್ನೆಲೆಯಲ್ಲಿ ಕುಶಾಲತೋಪು ಸಿಡಿಸುವ ತಾಲೀಮಿಗಾಗಿ ನಗರ ಸಶಸ್ತ್ರ ಮೀಸಲು ಪಡೆಯ ಸಿಬ್ಬಂದಿ ಸಜ್ಜಾಗಿದ್ದು, ಇಂದಿನಿಂದ ತರಬೇತಿ ಆರಂಭಿಸಲಿದ್ದಾರೆ.

ದಸರಾ ಜಂಬೂಸವಾರಿ ವೇಳೆ ನಡೆಯುವ ಕುಶಾಲತೋಪಿನ ಸಿಡಿತಕ್ಕೆ ಸಂಬಂಧಿಸಿದಂತೆ ಅಗತ್ಯ ಮುನ್ನೆಚ್ಚರಿಕೆ ಹಾಗೂ ತರಬೇತಿ ಕ್ರಮಗಳನ್ನು ಪೊಲೀಸ್ ಇಲಾಖೆ ಕೈಗೊಂಡಿದೆ.

# ಅನ್ಯರಾಜ್ಯಗಳಿಗೆ ಇಲ್ಲದ ನಿಯಮ ಕರ್ನಾಟಕಕ್ಕೆ ಏಕೆ: ಖಂಡ್ರೆ ಪ್ರಶ್ನೆ

ಬೆಂಗಳೂರು,ಸೆ.25- ಹದಿನೈದನೇ ಹಣಕಾಸು ಆಯೋಗದ ಶಿಫಾರಸಿನಂತೆ ಅನುದಾನ ಬಿಡುಗಡೆ ಮಾಡುವಾಗ ಅಸ್ಸಾಂ, ಬಿಹಾರ, ಗುಜರಾತ್ ಉತ್ತರಖಂಡ್ ರಾಜ್ಯಗಳಿಗೆ ಇಲ್ಲದ ನಿಯಮವನ್ನು ಕರ್ನಾಟಕಕ್ಕೆ ಮಾತ್ರ ಕೇಂದ್ರ ಅನ್ವಯಿಸುವುದೇಕೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಪ್ರಶ್ನಿಸಿದ್ದಾರೆ.

ರಾಜ್ಯದ ಗ್ರಾಮ ಪಂಚಾಯತಿಗಳಲ್ಲಿ ಹಣದ ಕೊರತೆ ಇದೆಯೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಕೇಂದ್ರ ಸರ್ಕಾರದ ತಾರತಮ್ಯ ನೀತಿಯೇ ಇದಕ್ಕೆ ಕಾರಣ. ರಾಜ್ಯಕ್ಕೆ ನ್ಯಾಯಯುತವಾಗಿ 2025–26ನೇ ಸಾಲಿಗೆ ಬಿಡುಗಡೆ ಮಾಡಬೇಕಾದ 2186.20 ಕೋಟಿ ರೂ. ನೀಡದೆ ಅನ್ಯಾಯ ಎಸಗಿದೆ ಎಂದರು.

ಹಣಕಾಸು ಆಯೋಗದ ಶಿಫಾರಸಿನಂತೆ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗುವ ಅನುದಾನವನ್ನು ಕೇಂದ್ರ ಸರ್ಕಾರ ರಾಜ್ಯಕ್ಕೆ ಕಳಿಸುತ್ತದೆ. ರಾಜ್ಯ ಸರ್ಕಾರ 10 ದಿನಗಳ ಒಳಗಾಗಿ ಗ್ರಾ.ಪಂ.ಗೆ ಬಿಡುಗಡೆ ಮಾಡಬೇಕು. ಇಲ್ಲವೆ ಬಡ್ಡಿ ಸಹಿತ ಪಾವತಿಸಬೇಕು. ಈ ಸ್ವೀಕೃತಿ ವಿವರಗಳನ್ನು ಇ–ಗ್ರಾಮ ಸ್ವರಾಜ್ ಪೋರ್ಟಲ್ ನಲ್ಲಿ ಅಪ್ ಲೋಡ್ ಮಾಡಬೇಕಾಗುತ್ತದೆ.

2024–25ನೇ ಸಾಲಿನಲ್ಲಿ ಗ್ರಾ.ಪಂ.ಗಳಿಗೆ 2133.25 ಕೋಟಿ ಅನುದಾನ ಬಿಡುಗಡೆ ಮಾಡಲಾಗಿತ್ತು. ಇ–ಗ್ರಾಮ್ ಸ್ವರಾಜ್ ಪೋರ್ಟಲ್ ನಲ್ಲಿ 1907 ಕೋಟಿ ಸ್ವೀಕೃತಿ ದಾಖಲಾಗಿದೆ. ವ್ಯತ್ಯಾಸ ಇರುವುದು 225 ಕೋಟಿ ರೂ. ಮಾತ್ರ. ಇದು ಭೌತಿಕವಾಗಿ ಗ್ರಾ.ಪಂ. ತಲುಪಿದೆ. ಕ್ರಿಯಾ ಯೋಜನೆ ತಯಾರಿಸಿ. ಕಾಮಗಾರಿಯೂ ಆಗಿದೆ. ಆದರೆ ತಾಂತ್ರಿಕ ತೊಡಕಿನಿಂದ ಪೋರ್ಟಲ್ ನಲ್ಲಿ ಪ್ರತಿಬಿಂಬಿತವಾಗಿಲ್ಲ. ಇಷ್ಟು ಸಣ್ಣ ಕಾರಣ ಇಟ್ಟುಕೊಂಡು 2186 ಕೋಟಿ ಬಿಡುಗಡೆ ಮಾಡದಿರುವುದು ರಾಜ್ಯಕ್ಕೆ ಮಾಡಿದ ಘೋರ ಅನ್ಯಾಯ ಎಂದರು.

**15ನೇ ಹಣಕಾಸು ಆಯೋಗ ಶಿಫಾರಸು**

ಆದರೆ, ಉತ್ತರ ಖಂಡಕ್ಕೆ 470 ಕೋಟಿ ರೂ. ಬಿಡುಗಡೆ ಮಾಡಿದ್ದಾರೆ. ಪೋರ್ಟಲ್ ನಲ್ಲಿ ಸ್ವೀಕೃತಿ ಶೂನ್ಯ. ಆದರೂ ಅವರಿಗೆ 2025–26ನೇ ಸಾಲಿನಲ್ಲಿ ಪೂರ್ತಿ ಅನುದಾನ ಬಿಡುಗಡೆ ಮಾಡಿದ್ದಾರೆ. ಕೇಂದ್ರ ಸರ್ಕಾರ ಒಂದು ಕಣ್ಣಿಗೆ ಸುಣ್ಣ ಮತ್ತೊಂದು ಕಣ್ಣಿಗೆ ಬೆಣ್ಣೆ ಹಚ್ಚುವ ಕೆಲಸ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗುಜರಾತ್ ಗೆ ಇದೇ ಸಾಲಿನಲ್ಲಿ 2619 ಕೋಟಿ ಬಿಡುಗಡೆ ಮಾಡಿದ್ದಾರೆ. ಪೋರ್ಟಲ್ ನಲ್ಲಿ 2104 ಕೋಟಿ ಸ್ವೀಕೃತಿ ಆಗಿದೆ. ವ್ಯತ್ಯಾಸ 515 ಕೋಟಿ ಇದ್ದರೂ ಅವರಿಗೆ ಪೂರ್ತಿ ಹಣ ಕೊಟ್ಟಿದ್ದಾರೆ. ಅಸ್ಸಾಂ ರಾಜ್ಯಕ್ಕೆ 1315 ಕೋಟಿ ರೂ. ಬಿಡುಗಡೆ ಆಗಿದೆ. ಪೋರ್ಟಲ್ ನಲ್ಲಿ 447 ಕೋಟಿ ರೂ. ಸ್ವೀಕೃತಿ ಇದೆ. ವ್ಯತ್ಯಾಸ 867 ಕೋಟಿ ರೂ. ಇದ್ದರೂ ಅವರಿಗೂ ಪೂರ್ತಿ ಹಣ ಬಿಡುಗಡೆ ಆಗಿದೆ. ಇನ್ನು ಬಿಹಾರ ರಾಜ್ಯಕ್ಕೆ 4109 ಕೋಟಿ ರೂ. ಅನುದಾನ ಬಿಡುಗಡೆ ಆಗಿದೆ. ಪೋರ್ಟಲ್ ನಲ್ಲಿ ಆಗಿರುವ ಸ್ವೀಕೃತಿ 1775 ಕೋಟಿ ರೂ. ಮಾತ್ರ. ವ್ಯತ್ಯಾಸ 2334 ಕೋಟಿ ರೂ. ಇದ್ದರೂ ಅವರಿಗೂ ಪೂರ್ತಿ ಅನುದಾನ ಬಿಡುಗಡೆ ಮಾಡಿದ್ದಾರೆ. ಇದು ತಾರತಮ್ಯ ಅಲ್ಲವೇ.

ತಮಗೆ ಬೇಕಾದ ರಾಜ್ಯಗಳಿಗೆ ನಿಯಮದಿಂದ ವಿನಾಯತಿ ನೀಡಿ, ರಾಜ್ಯಕ್ಕೆ ಈ ರೀತಿ ಅನ್ಯಾಯ ಮಾಡುವುದು ಸರಿಯಲ್ಲ. ರಾಜ್ಯ ಬರಪರಿಸ್ಥಿತಿಯಿಂದ ತತ್ತರಿಸುತ್ತಿರುವಾಗ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡದಿರುವುದು ಅಮಾನವೀಯ. ಇದನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಶೀಘ್ರವೇ ಮನವಿ ಸಲ್ಲಿಸಲಾಗುವುದು ಎಂದೂ ತಿಳಿಸಿದರು.

ಈ ಸಂಬಂಧ ಇಲಾಖೆಯಿಂದ 08.12.2025, 19.01.2026, 25.03.2026, 04.04.2026, 17.04.2026 ರಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಕೂಡ 25.02.2026 ಮತ್ತು 06.04.2026 ಹಾಗೂ ಇತ್ತೀಚೆಗೆ 16.07.2026ರಂದು ಕೇಂದ್ರ ಹಣಕಾಸು ಸಚಿವರಿಗೆ ಮತ್ತು ಸಂಬಂಧಿತ ಸಚಿವರಿಗೆ ಪತ್ರ ಬರೆದು ಮನವಿ ಮಾಡಿದ್ದರೂ ಸ್ಪಂದಿಸಿಲ್ಲ. ತಾವು ಕೂಡ ಎಲ್ಲ ಸಂಸದರಿಗೆ ಪತ್ರ ಬರೆದು ಕೇಂದ್ರ ಸಚಿವರನ್ನು ಭೇಟಿ ಮಾಡಿ ಮನವಿ ಮಾಡಿದ್ದರೂ ಹಣ ಬಿಡುಗಡೆ ಮಾಡಿಲ್ಲ ಎಂದು ಈಶ್ವರ ಖಂಡ್ರೆ ಅಸಮಾಧಾನ ವ್ಯಕ್ತಪಡಿಸಿದರು.

Sanjevani - Printed and Published by B.T.Amuthan on behalf of M/s Karnataka News Publications (P) Ltd. Printed at Dinasudar Printing Division, 11/2, Queen's Road, Bangalore, Karnataka - 560052.
Published at M/s Karnataka News Publications (P) Ltd. 11/2, Queen's Road, Bangalore, Karnataka - 560052. Editor: B.T. Amuthan. RNI No.36667/82

# ಸಂಸದ ರಾಘವೇಂದ್ರ ಹೇಳಿಕೆಗೆ ಬೇಳೂರು ಆಕ್ಷೇಪ

ಶಿವಮೊಗ್ಗ.ಸೆ.25– ಸಚಿವ ಮಧು ಬಂಗಾರಪ್ಪ ವಿರುದ್ಧ ಬಿಜೆಪಿ ಸಂಸದ ಬಿ.ವೈ.ರಾಘವೇಂದ್ರ ಏಕವಚನದಲ್ಲಿ ಮಾತನಾಡಿರುವುದಕ್ಕೆ ಶಾಸಕ ಬೇಳೂರು ಗೋಪಾಲಕೃಷ್ಣ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ರಾಘವೇಂದ್ರ ವೀರಾವೇಶದಿಂದ ಮಾತನಾಡಿದ್ದಾರೆ.ಶಿಕಾರಿಪುರದ ಶೂರರಂತೆ ಮಾತನಾಡುವ ಮುನ್ನ, ಮುಂದಿನ ಚುನಾವಣೆಯಲ್ಲಿ ಶಿಕಾರಿಪುರ ಕ್ಷೇತ್ರದಲ್ಲಿ ಗೆದ್ದು ತೋರಿಸಲಿ ಎಂದು ಸವಾಲು ಹಾಕಿದರು.

ನನಗೆ ಏಕವಚನದಲ್ಲಿ ಮಾತನಾಡಲು ಬಿಟ್ಟರೆ ರಾಘವೇಂದ್ರ ನೀನು ಗಾಳಿಗೆ ತೂರಿ ಹೋಗುತ್ತೀಯ ಎಂದು ಬೇಳೂರು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಗ್ಗೆ ನನಗೆ ಅಪಾರ ಗೌರವವಿದೆ.ಅವರಿಗೆ ನಾನು ಗೌರವ ನೀಡುತ್ತೇನೆ.ಆದರೆ ಪಕ್ಷದ ವಿಚಾರ ಬಂದಾಗ ಅವರ ರಾಜಕೀಯ ನಿಲುವುಗಳ ಕುರಿತು ಮಾತನಾಡುತ್ತೇನೆ.ಎಲ್ಲಿಯೂ ಏಕವಚನ ಬಳಸುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಕುಮಾರ್ ಬಂಗಾರಪ್ಪಗೆ ಶಿಕಾರಿಪುರದಲ್ಲಿ ಬಿಜೆಪಿ ಟಿಕೆಟ್ ನೀಡಿದ್ದರೆ ವಿಜಯೇಂದ್ರ ರಾಜಕೀಯವಾಗಿ ಹಿನ್ನಡೆ ಅನುಭವಿಸುತ್ತಿದ್ದರು ಎಂದು ಬೇಳೂರು ಅಭಿಪ್ರಾಯಪಟ್ಟರು. ಕಾಂಗ್ರೆಸ್ ಯಾರ ವೈಯಕ್ತಿಕ ಸ್ವತ್ತೂ ಅಲ್ಲ. ಪಕ್ಷಕ್ಕೆ ಬರುವ ಎಲ್ಲರನ್ನೂ ಸ್ವಾಗತಿಸಲಾಗುವುದು ಎಂದರು.

ಬಿಜೆಪಿ ಹಮ್ಮಿಕೊಂಡಿರುವ ಬಳ್ಳಾರಿ ಚಲೋಗೆ ಪ್ರತಿಯಾಗಿ ಶಿಕಾರಿಪುರದಲ್ಲೇ ಕಾಂಗ್ರೆಸ್ ವತಿಯಿಂದ ಬೃಹತ್ ಹೋರಾಟ ಆರಂಭಿಸುವ ಕುರಿತು ತೀರ್ಮಾನಿಸಲಾಗಿದೆ.ಶಿಕಾರಿಪುರದಿಂದ ಬೃಹತ್ ಪಾದಯಾತ್ರೆ ನಡೆಸುವ ಬಗ್ಗೆಯೂ ಚರ್ಚೆ ನಡೆಯುತ್ತಿದೆ ಎಂದು ಹೇಳಿದರು.

ಸುಂದರೇಶ್ ಹೇಳಿಕೆಗೂ ಪ್ರತಿಕ್ರಿಯೆ: ಕಾಂಗ್ರೆಸ್ ಮುಖಂಡ ಎಚ್.ಎಸ್.ಸುಂದರೇಶ್ ಅವರ ಇತ್ತೀಚಿನ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಬೇಳೂರು, ಅಧಿಕಾರ ಇಲ್ಲದ ಕಾರಣದಿಂದ ಈ ರೀತಿಯ ಹೇಳಿಕೆ ನೀಡಿರಬಹುದು ಎಂದರು.

ಯಾರೂ ನೇರವಾಗಿ ಪಕ್ಷದ ವಿರುದ್ಧ ಮಾತನಾಡಬಾರದು. ಜಿಲ್ಲಾಧ್ಯಕ್ಷ ಸ್ಥಾನ ಸಿಗುವ ನಿರೀಕ್ಷೆ ಸುಂದರೇಶ್ ಅವರಿಗಿತ್ತು. ಆದರೆ ಸ್ಥಾನ ದೊರೆಯದ ಬೇಸರದಿಂದ ಅವರು ಮಾತನಾಡಿರಬಹುದು ಎಂದು ಬೇಳೂರು ಹೇಳಿದರು.



ಕನ್ನಡ ಸಾಹಿತ್ಯ ಪರಿಷತ್ತು ಚುನಾವಣೆಗೆ ಸಂಬಂಧಿಸಿದ ಜಾಣಗೆರೆ ಬೆಂಬಲಿಗರ ಸಮಾಲೋಚನಾ ಸಭೆಯಲ್ಲಿ ಸಾ.ರಾ. ಗೋವಿಂದು ಮಾತಾಡಿದರು. ಡಾ. ವಸುಂಧರಾ ಭೂಪತಿ, ಜಾಣಗೆರೆ ವೆಂಕಟರಾಮಯ್ಯ, ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಆರ್.ಜಿ. ಹಳ್ಳಿ ನಾಗರಾಜ ಉಪಸ್ಥಿತರಿದ್ದರು.

# ಹರಿಪ್ರಸಾದ್ ಆರೋಪಕ್ಕೆ ಅಭಯ ಪಾಟೀಲ್ ತಿರುಗೇಟು

ಬೆಳಗಾವಿ.ಸೆ.25– ಮತದಾರರ ಪಟ್ಟಿಯಿಂದ 2,500 ಮತಗಳನ್ನು ಅಳಿಸಲು ತಾವು ಪತ್ರ ಬರೆದಿದ್ದಾರೆ ಎಂಬ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಆರೋಪಕ್ಕೆ ಬಿಜೆಪಿ ಶಾಸಕ ಅಭಯ ಪಾಟೀಲ್ ತಿರುಗೇಟು ನೀಡಿದ್ದಾರೆ.

ಬೆಳಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್ ನನ್ನ ಪತ್ರವನ್ನು ಸರಿಯಾಗಿ ಓದಿಲ್ಲ. ಚುನಾವಣಾ ಪ್ರಕ್ರಿಯೆ ಬಗ್ಗೆ ಅವರಿಗೆ ಮಾಹಿತಿ ಇಲ್ಲ ಎಂದು ಆರೋಪಿಸಿದರು

ತಾವು ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರದ ಬಿಎಲ್‌ಒ–1 ಆಗಿ ಪಾಲಿಕೆ ಆಯುಕ್ತರಿಗೆ ಪತ್ರ ಬರೆದಿರುವುದಾಗಿ ಸ್ಪಷ್ಟಪಡಿಸಿದ ಅವರು, ಕ್ಷೇತ್ರದಲ್ಲಿ ನಕಲಿ ಮತದಾರರಿರುವ ಕುರಿತು ಬಿಎಲ್‌ಒ–2 ಮನವಿ

ಸಲ್ಲಿಸಿದ್ದಾರೆ. ಆ ಮನವಿಗಳನ್ನು ಪರಿಶೀಲಿಸಿ, ನಕಲಿ ಮತದಾರರು ಎಂದು ದೃಢಪಟ್ಟಲ್ಲಿ ನಿಯಮಾನುಸಾರ ಅವರ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದುಹಾಕುವಂತೆ ಮನವಿ ಮಾಡಿರುವುದಾಗಿ ತಿಳಿಸಿದರು.

ನಾನು ಶಾಸಕನಾಗಿ ಈ ಪತ್ರ ಬರೆದಿಲ್ಲ.ಬಿಎಲ್‌ಒ–1 ಆಗಿ ಚುನಾವಣಾ ನಿಯಮಗಳ ಅನ್ವಯ ಪತ್ರ ಬರೆದಿದ್ದೇನೆ.ಮೊದಲು ಹರಿಪ್ರಸಾದ್ ಪತ್ರವನ್ನು ಸರಿಯಾಗಿ ಓದಲಿ. ಜೊತೆಗೆ ಹರಿಪ್ರಸಾದ್ ತಮ್ಮ ವಿರುದ್ಧ ಕಾನೂನು ಕ್ರಮದ ಎಚ್ಚರಿಕೆ ನೀಡಿರುವ ಹಿನ್ನೆಲೆಯಲ್ಲಿ,ಕಾನೂನು ಹೋರಾಟ ನಮಗೂ ಗೊತ್ತಿದೆ ಎಂದು ಹೇಳಿದರು.

ಮತದಾರರ ಪಟ್ಟಿಯಲ್ಲಿ ಮೃತಪಟ್ಟವರ ಹೆಸರುಗಳೂ ಇರುವುದಾಗಿ ಆರೋಪಿಸಿದ ಅವರು,ಈ ಕುರಿತು ಸೆಪ್ಟೆಂಬರ್ 29ರಂದು ದೆಹಲಿಗೆ ತೆರಳಿ ಮುಖ್ಯ ಚುನಾವಣಾ ಆಯುಕ್ತರಿಗೆ ದೂರು ಸಲ್ಲಿಸುವುದಾಗಿ ತಿಳಿಸಿದರು.

ನಾನು ಶಾಸಕನಾಗಿ ಅಲ್ಲ,ಬಿಎಲ್‌ಒ–1 ಆಗಿ ದೂರು ನೀಡುತ್ತೇನೆ.ಬೆಳಗಾವಿ ದಕ್ಷಿಣ ಕ್ಷೇತ್ರಕ್ಕೆ ಸಂಬಂಧಿಸಿದ ವಿಚಾರಗಳನ್ನಷ್ಟೇ ಚುನಾವಣಾ ಆಯೋಗದ ಗಮನಕ್ಕೆ ತರುತ್ತೇನೆ ಎಂದು ಹೇಳಿದರು.

# ಉಸಿರುಗಟ್ಟಿಸಿ ಪತ್ನಿ ಕೊಲೆ ಪತಿ ಬಂಧನ



ಬೆಂಗಳೂರು,ಸೆ.25– ಹಣಕಾಸಿನ ವಿಚಾರವಾಗಿ ಜಗಳವಾಡಿದ ಪತ್ನಿಯನ್ನು ಉಸಿರುಗಟ್ಟಿಸಿ ಕೊಲೆಗೈದು ಆಕೆಯ ಶವ ಮೂರು ದಿನ ಮನೆಯಲ್ಲಿಟ್ಟುಕೊಂಡು ಹಾಸಿಗೆಯಲ್ಲಿ ಸುತ್ತಿ ಖಾಲಿ ನಿವೇಶನಕ್ಕೆ ಪತಿ ಎಸೆದಿರುವ ಘಟನೆ ಸಂಪಿಗೆಹಳ್ಳಿಯಲ್ಲಿ ನಡೆದಿದೆ.

ಒಡಿಶಾ ಮೂಲದ ಅನುಸೂಯ (28) ಕೊಲೆಯಾದವರು,ಕೃತ್ಯ ನಡೆಸಿದ ಪತಿ ಸಾಗರ್ ಚಂದ್ರ ರಾವತ್ (32)ನನ್ನು ಸಂಪಿಗೆಹಳ್ಳಿ ಪೊಲೀಸರು ಬಂಧಿಸಿ ವಿಚಾರಣೆ ಕೈಗೊಂಡಿದ್ದಾರೆ.

ಪ್ರೀತಿಸಿ ವಿವಾಹವಾಗಿದ್ದ ಇವರಿಬ್ಬರು ಬೆಂಗಳೂರಿನ ವಿವಿಧ ಹೋಟೆಲ್‌ಗಳಲ್ಲಿ ಇಬ್ಬರೂ ಕೆಲಸ ಮಾಡುತ್ತಿದ್ದರು.ಆ.11ರಂದು ಹಣಕಾಸಿನ ವಿಚಾರವಾಗಿ ದಂಪತಿ ನಡುವೆ ಜಗಳ ನಡೆದಿದ್ದು, ಈ ವೇಳೆ ಸಾಗರ್ ಪತ್ನಿ ಅನುಸೂಯಳನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ್ದಾನೆ.

ಕೊಲೆ ಬಳಿಕ ಮೂರು ದಿನಗಳ ಕಾಲ ಶವವನ್ನು ಮನೆಯಲ್ಲೇ ಇರಿಸಿಕೊಂಡಿದ್ದ ಆರೋಪಿ, ಬಳಿಕ ಶವವನ್ನು ಹಾಸಿಗೆಯಲ್ಲಿ ಸುತ್ತಿ ಸಂಪಿಗೆಹಳ್ಳಿ ಸಮೀಪದ ಎಂ.ಎಸ್. ನಗರ ಅಗ್ರಹಾರ ಲೇಔಟ್‌ನ ಖಾಲಿ ಸೈಟ್‌ನಲ್ಲಿ ಎಸೆದು ಪರಾರಿಯಾಗಿದ್ದಾನೆ.

ಇತ್ತ ಖಾಲಿ ಸೈಟ್ ಸ್ವಚ್ಛಗೊಳಿಸಲು ಮಾಲೀಕರು ಕಾರ್ಮಿಕರನ್ನು ಕಳುಹಿಸಿದ್ದರು. ಈ ವೇಳೆ ಕೊಳೆತ ಸ್ಥಿತಿಯಲ್ಲಿದ್ದ, ನಾಯಿಗಳು ಕಚ್ಚಿ ತಿಂದಿದ್ದ ಅಪರಿಚಿತ ಮಹಿಳೆಯ ಶವ ಪತ್ತೆಯಾಗಿತ್ತು. ಮಾಹಿತಿ ಪಡೆದ ಸಂಪಿಗೆಹಳ್ಳಿ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದರು.

ತನಿಖೆ ವೇಳೆ ಪೊಲೀಸರಿಗೆ ಶವದ ಮೇಲಿದ್ದ ಬಟ್ಟೆಯ ಮಾಲ್‌ವೊಂದರ ಟ್ಯಾಗ್ ಪ್ರಮುಖ ಸುಳಿವು ನೀಡಿದೆ. ಟ್ಯಾಗ್ ಆಧರಿಸಿ ಪೊಲೀಸರು ಬಿಲ್‌ನ ವಿವರಗಳನ್ನು ಪರಿಶೀಲಿಸಿದ್ದು, ಬಳಿಕ ಮೃತ ಮಹಿಳೆಯ ಗುರುತು ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

ಮೃತಳ ಗುರುತು ಪತ್ತೆಯಾದ ಬಳಿಕ ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಿದ ಪೊಲೀಸರು, ಕೊಲೆ ನಡೆದ ಸುಮಾರು 20 ದಿನಗಳ ಬಳಿಕ ಆರೋಪಿ ಪತಿ ಸಾಗರ್ ಚಂದ್ರ ರಾವತ್‌ನನ್ನು ಬಂಧಿಸಿ ಹೆಚ್ಚಿನ ವಿಚಾರಣೆ ನಡೆಸುತ್ತಿದ್ದಾರೆ.



ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು ನಗರದ ಎಫ್‌ಕೆಸಿಸಿಐನ ಸಭಾಂಗಣದಲ್ಲಿ ಇಂದು ಹಮ್ಮಿಕೊಂಡಿದ್ದ 109ನೇ ಸರ್ವಸದಸ್ಯರ ಸಭೆಯನ್ನು ಪ್ರೊ. ಈ. ರಾಧಾಕೃಷ್ಣರವರು ಉದ್ಘಾಟಿಸಿದರು. ಅಧ್ಯಕ್ಷೆ ಉಮಾರೆಡ್ಡಿ, ಚುನಾಯಿತ ಅಧ್ಯಕ್ಷ ಟಿ. ಶ್ರೀರಾಮ್ ಪ್ರಸಾದ್, ಉಪಾಧ್ಯಕ್ಷ ಬಿ.ಪಿ. ಶಶಿಧರ್, ಮಾಜಿ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ ಉಪಸ್ಥಿತರಿದ್ದರು.

# ಬಸ್‌ಗೆ ಬೆಂಕಿ ತಪ್ಪಿದ ಅನಾಹುತ

ಉಡುಪಿ,ಸೆ.25– ನಗರದ ಅಲೆವೂರು– ದೆಂದೂರುಕಟ್ಟೆ ಬಳಿ ಪೆಟ್ರೋಲ್ ಪಂಪ್ ಸಮೀಪ ನಿಲ್ಲಿಸಿದ್ದ ಬಸ್‌ವೊಂದು ಇಂದು ಮುಂಜಾನೆ ಏಕಾಏಕಿ ಹೊತ್ತಿ ಉರಿದ ಘಟನೆ ನಡೆದಿದೆ.

ಬಸ್‌ನಲ್ಲಿ ಬೆಂಕಿ ಕಾಣಿಸಿಕೊಂಡ ತಕ್ಷಣ ಪೆಟ್ರೋಲ್ ಪಂಪ್ ಸಿಬ್ಬಂದಿ ಕಾರ್ಯಪ್ರವೃತ್ತರಾಗಿ ಬೆಂಕಿಯನ್ನು ನಂದಿಸಿದ್ದಾರೆ.ಬಸ್‌ನ ಸಮೀಪದಲ್ಲೇ ಇನ್ನೆರಡು ಬಸ್‌ಗಳು ಹಾಗೂ ಟೆಂಪೋವೊಂದು ನಿಲ್ಲಿಸಲಾಗಿತ್ತು. ಅಲ್ಲದೆ, ಪಕ್ಕದಲ್ಲೇ ಪೆಟ್ರೋಲ್ ಪಂಪ್ ಇದ್ದುದರಿಂದ ಬೆಂಕಿ ಇತರೆ ವಾಹನಗಳಿಗೆ ಅಥವಾ ಪೆಟ್ರೋಲ್ ಪಂಪ್‌ಗೆ ವ್ಯಾಪಿಸಿದ್ದರೆ ಭಾರಿ ಅನಾಹುತ ಸಂಭವಿಸುವ ಸಾಧ್ಯತೆ ಇತ್ತು.

ಆದರೆ, ಸಮಯಕ್ಕೆ ಸರಿಯಾಗಿ ಬೆಂಕಿಯನ್ನು ನಿಯಂತ್ರಿಸಿದ್ದರಿಂದ ಸಂಭವಿಸಬಹುದಾಗಿದ್ದ ದೊಡ್ಡ ಅನಾಹುತವೊಂದು ತಪ್ಪಿದಂತಾಗಿದೆ. ಘಟನೆಯಲ್ಲಿ ಬಸ್‌ಗೆ ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿದೆ ಎಂದು ತಿಳಿದುಬಂದಿದೆ.

ಪೆಟ್ರೋಲ್ ಪಂಪ್ ಮಾಲೀಕರು ಹಾಗೂ ಬಸ್ ಮಾಲೀಕರು ಒಬ್ಬರೇ ಎಂದು ತಿಳಿದುಬಂದಿದ್ದು, ಬೆಂಕಿ ಅವಘಡಕ್ಕೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ.

## ನಾಳೆ ವಾಕತಾನ್

ಬೆಂಗಳೂರು,ಸೆ.25– ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ವಿಶ್ವ ಹಿರಿಯ ನಾಗರಿಕರ ದಿನಾಚರಣೆ–2026ರ ಅಂಗವಾಗಿ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಹಿರಿಯ ನಾಗರಿಕರಿಗಾಗಿ ಸೆಪ್ಟೆಂಬರ್ 26 ರಂದು ಬೆಳಿಗ್ಗೆ 7.30 ಗಂಟೆಗೆ ರಾಜರಾಜೇಶ್ವರಿ ನಗರದ ಬೆಮೂಲ್ ಲೇಔಟ್‌ನ ಕೆಂಪೇಗೌಡ ಕ್ರೀಡಾಂಗಣ, ದಿವಂಗತ ಟಿ.ಎನ್. ಬಾಲಕೃಷ್ಣ ರಂಗಮಂದಿರದ ಹಿಂಭಾಗದಲ್ಲಿ ವಾಕತಾನ್ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ 8.00 ರಿಂದ 8.30ರವರೆಗೆ ಯೋಗಾಸನ ಹಾಗೂ 8.30 ರಿಂದ 9 ಗಂಟೆಯವರೆಗೆ ವಾಕತಾನ್ ನಡೆಯಲಿದೆ,

ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಯುವಕನ ಬ್ಲ್ಯಾಕ್‌ಮೇಲ್ ಗೃಹಿಣಿ ಆತ್ಮಹತ್ಯೆ

ಮೈಸೂರು,ಸೆ.25– ಅಕ್ರಮ ಸಂಬಂಧದ ವಿಚಾರದಲ್ಲಿ ಯುವಕನೊಬ್ಬ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದನೆಂಬ ಆರೋಪದ ಹಿನ್ನೆಲೆಯಲ್ಲಿ ಗೃಹಿಣಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹುಣಸೂರು ತಾಲೂಕಿನ ಲಕ್ಕನಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಲಕ್ಕನಕೊಪ್ಪಲು ಗ್ರಾಮದ ಸಿಂಧೂ(34) ಆತ್ಮಹತ್ಯೆ ಮಾಡಿಕೊಂಡವರು. ಇವರು ಶ್ರೀಕಾಂತ್ ಎಂಬುವವರ ಪತ್ನಿಯಾಗಿದ್ದು, ದಂಪತಿಗೆ ಇಬ್ಬರು ಮಕ್ಕಳಿದ್ದಾರೆ.

ಸಿಂಧೂ ಕ್ರಿಮಿನಾಶಕ ಮಾತ್ರೆ ಸೇವಿಸಿದ್ದ ಹಿನ್ನೆಲೆಯಲ್ಲಿ ತಕ್ಷಣ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ.

ಸಾವಿಗೂ ಮುನ್ನ ಸಿಂಧೂ ನೀಡಿದ ಹೇಳಿಕೆಯಲ್ಲಿ ವಿಕಾಸ್ ಎಂಬಾತನೇ ತನ್ನ ಸಾವಿಗೆ ಕಾರಣ ಎಂದು ತಿಳಿಸಿದ್ದಾರೆ ಎನ್ನಲಾಗಿದೆ. ಈ ಹಿನ್ನೆಲೆಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಸಿಂಧೂ ಅವರ ಮೊಬೈಲ್ ಪರಿಶೀಲನೆ ನಡೆಸಿದಾಗ ವಿಕಾಸ್ ಜೊತೆ ನಿರಂತರವಾಗಿ ವಾಟ್ಸ್‌ಆ?ಯಪ್ ಸಂದೇಶ ಹಾಗೂ ವಿಡಿಯೋ ಕಾಲ್‌ಗಳು ನಡೆದಿರುವುದು ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಂಧೂ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಎಲ್.ಕೆ. ವಿಕಾಸ್, ಆತನ ತಂದೆ ಕುಮಾರ ಹಾಗೂ ತಾಯಿ ವಸಂತ ವಿರುದ್ಧ ಬಿಳಿಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರಕರಣದ ಕುರಿತು ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

# ನಿರೀಕ್ಷಣಾ ಜಾಮೀನು ಕೋರಿ ಪ್ರತಾಪ್ ಕೋರ್ಟ್‌ಗೆ ಮೊರೆ

ಮೈಸೂರು.ಸೆ.25– ಮಾಜಿ ಸಂಸದ ಪ್ರತಾಪ್ ಸಿಂಹ ವಿರುದ್ಧ ಟಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎರಡು ಎಫ್‌ಐಆರ್‌ಗಳಿಗೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ಕೋರಿ ಮೈಸೂರು 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿದೆ.

ಬಿಎನ್‌ಎಸ್‌ಎಸ್ ಸೆಕ್ಷನ್ 482ರ ಅಡಿಯಲ್ಲಿ ಅರ್ಜಿ ಸಲ್ಲಿಸಲಾಗಿದ್ದು, ಬಂಧನದ ಭೀತಿ ಹಿನ್ನೆಲೆಯಲ್ಲಿ ನಿರೀಕ್ಷಣಾ ಜಾಮೀನು ನೀಡುವಂತೆ ಪ್ರತಾಪ್ ಸಿಂಹ ಪರ ವಕೀಲರು ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ. ಈ ಎರಡು ಪ್ರಕರಣಗಳಿಗೆ ಸಂಬಂಧಿಸಿದಂತೆ ಇಂದು ಮೈಸೂರು ಕೋರ್ಟ್ ಆದೇಶ ಪ್ರಕಟಿಸುವ ನಿರೀಕ್ಷೆಯಿದೆ.

ಈ ನಡುವೆ, ಪ್ರತಾಪ್ ಸಿಂಹಗೆ ನಿನ್ನೆ ಕರ್ನಾಟಕ ಹೈಕೋರ್ಟ್‌ನಲ್ಲಿ ಯಾವುದೇ ಮಧ್ಯಂತರ ರಿಲೀಫ್ ದೊರೆತಿಲ್ಲ.ತನಿಖೆಗೆ ಅಡ್ಡಿಯಾಗುವ ರೀತಿಯಲ್ಲಿ ಪೊಲೀಸರಿಂದ ಬಲವಂತದ ಕ್ರಮ ಕೈಗೊಳ್ಳದಂತೆ ನಿರ್ದೇಶನ ನೀಡುವಂತೆ ಮಾಡಿದ್ದ ಮನವಿಯನ್ನು ಹೈಕೋರ್ಟ್ ಪರಿಗಣಿಸಲಿಲ್ಲ.

ಪ್ರಕರಣದ ತನಿಖೆಯನ್ನು ಎದುರಿಸಿ,ಕಾನೂನುಬದ್ಧವಾಗಿ ಜಾಮೀನು ಪಡೆಯುವಂತೆ ಹೈಕೋರ್ಟ್ ಸೂಚಿಸಿರುವ ಹಿನ್ನೆಲೆಯಲ್ಲಿ ಇದೀಗ ಮೈಸೂರು ನ್ಯಾಯಾಲಯದ ಆದೇಶದತ್ತ ಗಮನ ನೆಟ್ಟಿದೆ.

# ಜಿಬಿಎಗೆ ವೈದ್ಯಾಧಿಕಾರಿಗಳ ನಿಯೋಜನೆ ರದ್ಧತಿಗೆ ಪಾಲಿಕೆ ನೌಕರರ ಸಂಘ ಆಗ್ರಹ

ಬೆಂಗಳೂರು: ಸೆ,25– ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ಪಾಲಿಕೆಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವೈದ್ಯಾಧಿಕಾರಿಗಳನ್ನು ಎರವಲು ಸೇವೆ ಆಧಾರದ ಮೇಲೆ ನಿಯೋಜಿಸುತ್ತಿರುವ ಕ್ರಮವನ್ನು ಕೂಡಲೇ ಸ್ಥಗಿತಗೊಳಿಸಬೇಕು ಎಂದು ಜಿಬಿಎ ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಒತ್ತಾಯಿಸಿದೆ.

ಈ ಸಂಬಂಧ ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಅವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಪರ ಕಾರ್ಯದರ್ಶಿಗೆ ಪತ್ರ ಬರೆದು, ನಿಯಮಗಳನ್ನು ಪಾಲಿಸದೆ ವೈದ್ಯಾಧಿಕಾರಿಗಳನ್ನು ನಿಯೋಜಿಸಲಾಗುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಶೇ.75 ಮುಂಬಡ್ತಿಗೆ ಅವಕಾಶ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವೃಂದ ಮತ್ತು ನೇಮಕಾತಿ (ಸಿ ಆಂಡ್ ಆರ್) ನಿಯಮಾವಳಿಯಂತೆ ಜಿಬಿಎ ವ್ಯಾಪ್ತಿಯ ಪಾಲಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳಿಗೆ ಶೇ.75ರ ಅನುಪಾತದಲ್ಲಿ ಮುಂಬಡ್ತಿ ನೀಡಲು ಅವಕಾಶವಿದೆ. ಸೇವಾ ಹಿರಿತನದ ಜತೆಗೆ ಎಂಟಿ ಕಮ್ಯುನಿಟಿ ಮೆಡಿಸಿನ್, ಎಂಪಿಎಚ್ ಅಥವಾ ಡಿಪಿಎಚ್ ಪದವಿ ಹೊಂದಿರುವವರಿಗೆ ನಿಯಮಾನುಸಾರ ಮುಂಬಡ್ತಿ ನೀಡಬಹುದಾಗಿದೆ ಎಂದು ಸಂಘ ತಿಳಿಸಿದೆ.

ಆದರೆ, ಆರೋಗ್ಯ ಇಲಾಖೆಯಿಂದ ಜಿಬಿಎಗೆ ಆರೋಗ್ಯ ವೈದ್ಯಾಧಿಕಾರಿಗಳನ್ನು ನಿಯೋಜಿಸುವ ಸಂಬಂಧ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ನಿರ್ದಿಷ್ಟ ವಿದ್ಯಾರ್ಹತೆ ನಿಗದಿಪಡಿಸಲಾಗಿಲ್ಲ. ಹೀಗಿರುವಾಗ ಯಾವುದೇ ನಿಖರವಾದ ವಿದ್ಯಾರ್ಹತೆ ನಿಗದಿಪಡಿಸದೆ ಶೇ.25ರಷ್ಟು ವೈದ್ಯಾಧಿಕಾರಿಗಳನ್ನು ಎರವಲು ಸೇವೆ ಮೇಲೆ ನಿಯೋಜಿಸಲು ಅವಕಾಶ ಕಲ್ಪಿಸುತ್ತಿರುವುದು ನಿಯಮಬಾಹಿರವಾಗಿದೆ ಎಂದು ಸಂಘ ಆರೋಪಿಸಿದೆ.

**ಸ್ಥಳ ನಿಯುಕ್ತಿಗೆ ಸಮಸ್ಯೆ**

ಆರೋಗ್ಯ ಇಲಾಖೆಯಿಂದ ಶೇ.50ಕ್ಕೂ ಅಧಿಕ ವೈದ್ಯಾಧಿಕಾರಿಗಳನ್ನು ಜಿಬಿಎ ವ್ಯಾಪ್ತಿಗೆ ನಿಯೋಜಿಸಲಾಗುತ್ತಿದೆ. ಇದರಿಂದ ಈಗಾಗಲೇ ಜಿಬಿಎ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆರೋಗ್ಯ ವೈದ್ಯಾಧಿಕಾರಿಗಳಿಗೆ ಸೂಕ್ತ ಸ್ಥಳ ನಿಯುಕ್ತಿ ದೊರೆಯುತ್ತಿಲ್ಲ ಎಂದು ಸಂಘ ದೂರಿದೆ.

ಸ್ಥಳ ನಿಯುಕ್ತಿ ಸಮರ್ಪಕವಾಗಿ ಆಗದ ಹಿನ್ನೆಲೆಯಲ್ಲಿ ವೇತನ ಪಡೆಯುವುದರಿಂದ ಹಿಡಿದು ಕರ್ತವ್ಯ ನಿರ್ವಹಿಸುವವರೆಗೆ ಹಲವು ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಇದರಿಂದ ಆರೋಗ್ಯ ವೈದ್ಯಾಧಿಕಾರಿಗಳಲ್ಲಿ ಅಸಮಾಧಾನ ಮತ್ತು ಬೇಸರ ಉಂಟಾಗಿದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಹೀಗಾಗಿ ಆರೋಗ್ಯ ಇಲಾಖೆಯು ಜಿಬಿಎಗೆ ವೈದ್ಯಾಧಿಕಾರಿಗಳ ಎರವಲು ಸೇವೆ ಮೇಲಿನ ನಿಯೋಜನೆಯನ್ನು ಕೂಡಲೇ ಸ್ಥಗಿತಗೊಳಿಸಬೇಕು. ಮುಂದಿನ ದಿನಗಳಲ್ಲಿ ಸರ್ಕಾರದ ವರ್ಗಾವಣೆ ಮಾರ್ಗಸೂಚಿ ಹಾಗೂ ಎರವಲು ಸೇವೆಗೆ ಸಂಬಂಧಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಎ. ಅಮೃತ್‌ರಾಜ್ ಆಗ್ರಹಿಸಿದ್ದಾರೆ.

# ಸುಲಿಗೆ ಕಳ್ಳತನ ನಾಲ್ವರ ಬಂಧನ

ಬೆಂಗಳೂರು,ಸೆ.25– ಮೋಜುಮಸ್ತಿ ಮಾಡಲಿ ಸುಲಿಗೆ ಹಾಗೂ ಕಳ್ಳತನ ನಡೆಸುತ್ತಿದ್ದ ನಾಲ್ವರನ್ನು,ಹಾರೋಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಮಾದೇಶ್, ಪ್ರಜ್ವಲ್, ಕಾರ್ತಿಕ್ ಹಾಗೂ ಶ್ಯಾಮ್ ಬಂಧಿತ ಆರೋಪಿಗಳು. ಆರೋಪಿಗಳಿಂದ ಸುಮಾರು 20 ಲಕ್ಷರೂ. ಮೌಲ್ಯದ 25 ಮೊಬೈಲ್‌ಗಳು ಹಾಗೂ 7 ಬೈಕ್‌ಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಹಾರೋಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಬಿಹಾರ ಮೂಲದ ವ್ಯಕ್ತಿಯೊಬ್ಬರಿಗೆ ಬೆದರಿಕೆ ಹಾಕಿದ್ದ ಆರೋಪಿಗಳು, ಅವರಿಂದ ಮೊಬೈಲ್‌ಗಳನ್ನು ಸುಲಿಗೆ ಮಾಡಿದ್ದರು. ಇದೇ ರೀತಿಯಾಗಿ ಕಳೆದ ಒಂದೂವರೆ ತಿಂಗಳ ಅವಧಿಯಲ್ಲಿ ವಿವಿಧೆಡೆ ಕಳ್ಳತನ ನಡೆಸಿರುವುದು ಪೊಲೀಸ್ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಕಳ್ಳತನ ಹಾಗೂ ಸುಲಿಗೆಯಿಂದ ಬಂದ ಹಣವನ್ನು ಬಳಸಿಕೊಂಡು ಆರೋಪಿಗಳು ಬೆಂಗಳೂರಿನಲ್ಲಿ ಮೋಜು–ಮಸ್ತಿ ಮಾಡುತ್ತಿದ್ದರು ಎನ್ನಲಾಗಿದೆ.

ಈ ಸಂಬಂಧ ಹಾರೋಹಳ್ಳಿ ಪೊಲೀಸರು ಪ್ರಕರಣ ದಾಖಲಿಸಿ ಬಂಧಿಸಿರುವ ಆರೋಪಿಗಳ ತೀವ್ರ ವಿಚಾರಣೆ ಕೈಗೊಂಡಿದ್ದಾರೆ.

# ಮೇಕೆದಾಟು ಯೋಜನೆ ಜಾರಿಗೆ ಆಗ್ರಹಿಸಿ ಅ.8 ಪ್ರತಿಭಟನೆ



ಬೆಂಗಳೂರು,ಸೆ.25– ಮೇಕೆದಾಟು ಯೋಜನೆ ಮತ್ತು ಕಳಸಾ–ಬಂಡೂರಿ ಯೋಜನೆಯನ್ನು ಕೂಡಲೇ ಪ್ರಾರಂಭಿಸಬೇಕು ಮತ್ತು ಸರ್ಕಾರಿ ಶಾಲೆಗಳನ್ನು ಉಳಿಸುವಂತೆ ಒತ್ತಾಯಿಸಿ, ಕನ್ನಡ ಜಾಗೃತಿ ವೇದಿಕೆ ವತಿಯಿಂದ ಕನ್ನಡಿಗರ ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯ ಮಟ್ಟದ ಬೃಹತ್ ಪ್ರತಿಭಟನೆಯನ್ನು ಅ. 8 ರಂದು ಗುರುವಾರ ಬೆಳಿಗ್ಗೆ 11 ಗಂಟೆಗೆ ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆಯ ರಾಜ್ಯಾಧ್ಯಕ್ಷ ಕೆ. ಮಂಜುನಾಥ ದೇವ ಅವರು ತಿಳಿಸಿದರು.

ನಗರದ ಪ್ರೆಸ್ ಕ್ಲಬ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಖಾಸಗಿ ಕ್ಷೇತ್ರದ ಉದ್ಯಮಗಳಲ್ಲಿ ಕನ್ನಡಿಗರಿಗೆ ಶೇ. 75 ರಷ್ಟು ಉದ್ಯೋಗದಲ್ಲಿ ಮೀಸಲಾತಿ ನೀಡಬೇಕು. ಈ ವರ್ಷ ಮಳೆ ಇಲ್ಲದ ಕಾರಣ ರೈತರಿಗೆ ಎಕರೆಗೆ 25 ಸಾವಿರ ರೂ. ಬೆಳೆ ಪರಿಹಾರ ನೀಡಬೇಕೆಂದು ಒತ್ತಾಯಿಸಿದ ಅವರು ಬೆಳಗಾವಿ ಮಹಾನಗರ ಪಾಲಿಕೆಯನ್ನು ಕರ್ನಾಟಕ ರಾಜ್ಯದ ಅವಿಭಾಜ್ಯ ಅಂಗವೆಂದು ಘೋಷಣೆ ಮಾಡಬೇಕೆಂದು ಒತ್ತಾಯಿಸಿದರು.

ನಾಡದ್ರೋಹಿ ಎಂ.ಇ.ಎಸ್. ಸಂಘಟನೆಯನ್ನು ನಿಷೇಧಿಸಬೇಕು. ಕನ್ನಡ ಕೆಲಸದ ಮತ್ತು ನಾಡಗೀತೆ ಹಾಡಿಸದ ಶಾಲೆಗಳ ಮಾನ್ಯತೆಯನ್ನು ರದ್ದುಪಡಿಸಬೇಕು. ಕನ್ನಡ ನಾಮಫಲಕವನ್ನು ಕಡ್ಡಾಯಗೊಳಿಸಬೇಕು. ಕೇಂದ್ರ ಸರ್ಕಾರದ ಹುದ್ದೆಗಳಲ್ಲಿ ಕನ್ನಡಿಗರಿಗೆ ಆದ್ಯತೆ ನೀಡಬೇಕು. ಸರ್ಕಾರದ ಎಲ್ಲಾ ಯೋಜನೆಗಳ ಗುತ್ತಿಗೆಗಳನ್ನು ಕನ್ನಡಿಗರಿಗೆ ನೀಡಬೇಕು. ರಾಷ್ಟ್ರೀಕೃತ ಬ್ಯಾಂಕುಗಳಿಗೆ ಕನ್ನಡಿಗ ಅಧಿಕಾರಿಗಳನ್ನು ನೇಮಿಸಬೇಕೆಂದು ಆಗ್ರಹಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಹಿರಿಯ ವಕೀಲರಾದ ಕೆ.ಪಿ. ವೆಂಕಟೇಶ್, ರಾಜ್ಯ ಪ್ರಧಾನ ಕಾರ್ಯದರ್ಶಿ ಕವಿತಾಪೇಟೆಮಠ್, ರಾಜ್ಯ ಸಂಘಟನಾ ಕಾರ್ಯದರ್ಶಿ ರಾಮಸ್ವಾಮಿ, ಆನೇಕಲ್ ತಾಲ್ಲೂಕು ಅಧ್ಯಕ್ಷ ಕುಮಾರ್, ಜಿಬಿಎ ಅಧ್ಯಕ್ಷೆ ಶಿಲ್ಪಾ, ರಾಜ್ಯ ಮಹಿಳಾ ಅಧ್ಯಕ್ಷ ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

# ಗವಿಸಿದ್ಧೇಶ್ವರ ಶ್ರೀಗಳಿಂದ ದಸರಾ ಉದ್ಘಾಟನೆ: ಕಲ್ಯಾಣ ಕರ್ನಾಟಕಕ್ಕೆ ಹೆಮ್ಮೆ

ಬೆಂಗಳೂರು.ಸೆ.25– ಈ ಬಾರಿ ಐತಿಹಾಸಿಕ ಮೈಸೂರು ದಸರಾ ಮಹೋತ್ಸವವನ್ನು ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ಉದ್ಘಾಟಿಸಲಿರುವುದು ಇಡೀ ಕೊಪ್ಪಳ ಜಿಲ್ಲೆಗೆ ಹಾಗೂ ಸಮಸ್ತ ಕಲ್ಯಾಣ ಕರ್ನಾಟಕ ಭಾಗಕ್ಕೆ ಅತ್ಯಂತ ಹೆಮ್ಮೆಯ ಸಂಗತಿ ಎಂದು ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ತಿಳಿಸಿದ್ದಾರೆ.



ಈ ಸಂಬಂಧ ಹೇಳಿಕೆ ನೀಡಿರುವ ಅವರು, ಅನ್ನ, ಅಕ್ಷರ, ಆಶ್ರಯವೆಂಬ ತ್ರಿವಿಧ ದಾಸೋಹದ ಮೂಲಕ ಸಮಾಜಕ್ಕೆ ಬೆಳಕಾಗುತ್ತಿರುವ ಕಾಯಕಯೋಗಿಗಳನ್ನು ದಸರಾ ಉದ್ಘಾಟನೆಗೆ ಆಯ್ಕೆ ಮಾಡಿರುವ ರಾಜ್ಯ ಸರ್ಕಾರದ ನಿರ್ಧಾರವನ್ನು ಬಸವರಾಜ ರಾಯರೆಡ್ಡಿ ಸ್ವಾಗತಿಸಿದ್ದಾರೆ.

ನಾಡಿನ ಪರಂಪರೆ ಮತ್ತು ಸಂತರ ನಿಸ್ವಾರ್ಥ ಸೇವೆಯನ್ನು ಗುರುತಿಸಿದ ಮುಖ್ಯಮಂತ್ರಿಗೆ, ಉಪಮುಖ್ಯಮಂತ್ರಿಗೆ ಹಾಗೂ ಸರ್ಕಾರಕ್ಕೆ ಕೊಪ್ಪಳ ಜಿಲ್ಲೆಯ ಜನತೆಯ ಪರವಾಗಿ ತುಂಬು ಹೃದಯದ ಧನ್ಯವಾದಗಳನ್ನು ತಿಳಿಸಿದ್ದಾರೆ.

# ಬೆಂಗಳೂರಿನಲ್ಲಿ ವುಡ್‌ಸೈಡ್ ಎನರ್ಜಿ ನಾವೀನ್ಯತಾ ಕೇಂದ್ರ

ಬೆಂಗಳೂರು:ಸೆ.25– ಆಸ್ಟ್ರೇಲಿಯಾದ ಪ್ರಮುಖ ಇಂಧನ ಕಂಪನಿ ವುಡ್‌ಸೈಡ್ ಎನರ್ಜಿ ಗ್ರೂಪ್ ಲಿಮಿಟೆಡ್ ಬೆಂಗಳೂರಿನಲ್ಲಿ 'ವುಡ್‌ಸೈಡ್ ಗ್ಲೋಬಲ್ ಸೊಲ್ಯೂಷನ್ಸ್' ಹೆಸರಿನ ನಾವೀನ್ಯತಾ ಕೇಂದ್ರ ಸ್ಥಾಪನೆಗೆ ಮುಂದಾಗಿದೆ.

ಕೇಂದ್ರದಲ್ಲಿ ಕೃತಕ ಬುದ್ಧಿಮತ್ತೆ (ಎಐ), ಸೈಬರ್ ಭದ್ರತೆ, ಡೇಟಾ ಸೈನ್ಸ್, ಪ್ರಾಡಕ್ಟ್ ಎಂಜಿನಿಯರಿಂಗ್ ಸೇರಿದಂತೆ ಹಣಕಾಸು ಮತ್ತು ಕಾರ್ಯಾಚರಣಾ ವಿಭಾಗಗಳ ತಜ್ಞರು ಕಾರ್ಯನಿರ್ವಹಿಸಲಿದ್ದಾರೆ. ಜಾಗತಿಕ ಮಟ್ಟದ ತಂತ್ರಜ್ಞಾನ ಪರಿಸರ ಹಾಗೂ ನುರಿತ ಪ್ರತಿಭೆಗಳ ಲಭ್ಯತೆಯಿಂದ ಬೆಂಗಳೂರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಸ್ಥೆ ತಿಳಿಸಿದೆ.

ಕೇಂದ್ರವು ತಂತ್ರಜ್ಞಾನ ಆಧಾರಿತ ನಿರ್ಧಾರ ಕೈಗೊಳ್ಳುವಿಕೆ, ಕಾರ್ಯಕ್ಷಮತೆ ಹೆಚ್ಚಳ ಹಾಗೂ ಜಾಗತಿಕ ಕಾರ್ಯಾಚರಣೆಗಳಲ್ಲಿನ ಸಂಕೀರ್ಣ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ.

ವುಡ್‌ಸೈಡ್ ಉಪಾಧ್ಯಕ್ಷೆ ಹಾಗೂ ಭಾರತದ ಕಂಟ್ರಿ ಮ್ಯಾನೇಜರ್ ಕ್ರಿಸ್ಟಿನ್ ಲಿಯೋ ಮಾತನಾಡಿ, ಜಾಗತಿಕ ಸಹಯೋಗ ಮತ್ತು ಹೊಸ ಕಾರ್ಯವಿಧಾನಗಳ ಮೂಲಕ ಸಂಸ್ಥೆಯ ಬೆಳವಣಿಗೆಗೆ ಬೆಂಗಳೂರು ಪ್ರಮುಖ ಕೇಂದ್ರವಾಗಲಿದೆ ಎಂದರು. ಡಿಜಿಟಲ್ ಸೊಲ್ಯೂಷನ್ಸ್ ಸೆಂಟರ್ ಮುಖ್ಯಸ್ಥ ಸಮೀರ್ ಸಿಂಘಾಲ್, ಪ್ರಮುಖ ತಂತ್ರಜ್ಞಾನ ಕ್ಷೇತ್ರಗಳ ಪ್ರತಿಭಾವಂತ ತಂಡಗಳನ್ನು ಒಂದೇ ವೇದಿಕೆಯಲ್ಲಿ ತರುವ ಉದ್ದೇಶ ಹೊಂದಲಾಗಿದೆ ಎಂದು ತಿಳಿಸಿದರು.

# ಸೆ.27ರಂದು 126ನೇ ಬೆಳಕು ಸಂಸ್ಥೆಯ ಚಿಗುರು ಸಮ್ಮೇಳನ

ಬೆಂಗಳೂರು: ಸೆ.25:– ಬೆಳಕು ಸಾಹಿತ್ಯ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್‌ವತಿಯಿಂದ 126ನೇ ಕಾರ್ಯಕ್ರಮವಾಗಿ 'ಚಿಗುರು ಸಮ್ಮೇಳನ'ವನ್ನು ಸೆಪ್ಟೆಂಬರ್ 27ರಂದು ಭಾನುವಾರ ಬೆಂಗಳೂರಿನ ಚಾಮರಾಜಪೇಟೆಯ ಅಕ್ಕಮಹಾದೇವಿ ಸಭಾಂಗಣದಲ್ಲಿ ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಆಯೋಜಿಸಲಾಗಿದೆ ಎಂದು ಬೆಳಕು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಅಣ್ಣಪ್ಪ ಮೇಟಿಗೌಡ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು.

'ಚಿಗುರು ಸಮ್ಮೇಳನ'ವನ್ನು ಇಂದು ಸಂಜೆ ಪತ್ರಿಕೆಯ ಸಂಪಾದಕರಾದ ಡಾ. ಜಿ.ವೈ. ಪದ್ಮನಾಗರಾಜ್ ಉದ್ಘಾಟಿಸಲಿದ್ದು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ. ಕೃಷ್ಣೇಗೌಡ ಅವರು ಸಮ್ಮೇಳನದ ಅಧ್ಯಕ್ಷತೆ ವಹಿಸಲಿದ್ದಾರೆ.

ಪ್ರಶಸ್ತಿ ಪ್ರದಾನವನ್ನು ಹಿರಿಯ ನಿವೃತ್ತ ಐಎಎಸ್ ಅಧಿಕಾರಿ ಹಾಗೂ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್ ನೆರವೇರಿಸಲಿದ್ದಾರೆ.

ವಾಣಿಜ್ಯ ತೆರಿಗೆಗಳ ಮೇಲ್ಮನೆ ವಿಭಾಗದ ಜಂಟಿ ಆಯುಕ್ತರಾದ ಸುಜಾತ ಕೆ.ಸಿ. ಅವರು ಡಾ. ಬಸಮ್ಮ ಹಿರೇಮಠ ಹಾಗೂ ಸುನಿತಾ ಎಚ್. ಅಂಗಡಿ ಅವರ ಕೃತಿಗಳನ್ನು ಲೋಕಾರ್ಪಣೆಗೊಳಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಚಿತ್ರನಟ, ನಿರ್ದೇಶಕ ಹಾಗೂ ನಿರ್ಮಾಪಕ ಅಭಿಜಿತ್, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಖಜಾಂಚಿಗಳಾದ ಶಿವರುದ್ರಯ್ಯ ವಿ.ವಿ., ಚೈತ್ರ ಹಾಗೂ ಡಾ. ರೂಪಾ ದೇವರಾಜ್ ಭಾಗವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಬೆಳಕು ಸಂಸ್ಥೆಯ ಮಹಿಳಾ ಘಟಕದ ಗೌರವಾಧ್ಯಕ್ಷೆ ಹಾಗೂ ಸಾಹಿತಿ ಡಾ. ನಿರ್ಮಲಾ ಸಿ. ಯಲಿಗಾರ್, ಸಿನಿಮಾ ನಟಿ ಮೀರಾ ಬೆಂಗಳೂರು, ಸುಜಾತಾ ಎಸ್., ಅನಿತಾ ತಾಯಿ, ಚಿತ್ರನಟ ಅಂಕುಶ್, ಏಕಲವ್ಯ,ಜಾಗೃತಿ ಟ್ರಸ್ಟ್ ಅಧ್ಯಕ್ಷರಾದ ಬಿ. ನಾಗೇಶ್, ಡಾ. ಮಲ್ಲಿಕಾ ಎಂ. ಬೆಂಗಳೂರು,




ಅಣ್ಣಪ್ಪ ಅಜ್ಜೇರ, ಬಿ. ಜಯಕುಮಾರ್ ಹಾಗೂ ಕಲ್ಯಾಣಿ ರಾಜ್ ಶಿವಮೊಗ್ಗ,ಎ.ಎಸ್. ಕೆ ಸ್ವಾಮಿ, ಬಾ. ನಂ. ಲೋಕೇಶ್, ಪುಷ್ಪಲಾತಾ ಹೆಗಡೆ, ಗಿರಿಧರ್ ಪೂಜಾರಿ, ಡಾ. ಟಿ.ಸಿ ಚಂದ್ರಪ್ರಕಾಶ್ ತ್ಯಾಗದಕಟ್ಟೆ, ಮಧು ಪಾಂಡ್ಯ ಮಾನ್ವಿ, ಎಚ್ ಭೀಮರಾವ್ ಸೇರಿದಂತೆ ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಸಮ್ಮೇಳನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು, 'ಸವಾಲು–ಜವಾಬು' ವಿಶೇಷ ಗೋಷ್ಠಿ ಹಾಗೂ ಕವಿಗೋಷ್ಠಿ ನಡೆಯಲಿದೆ.

ಇದೇ ಸಂದರ್ಭದಲ್ಲಿ ರಾಷ್ಟ್ರಮಟ್ಟ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದವರಿಗೆ ವಿವಿಧ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗುವುದು.

ಆದರ್ಶ ಮಹಿಳೆ ದಿ. ಶ್ರೀಮತಿ ಕೌಶಲ್ಯ ವೈ. ಕೋರಮಂಗಲ ಅವರ ಸ್ಮರಣಾರ್ಥ ದತ್ತಿ ಪ್ರಶಸ್ತಿ, ಸಾಹಿತಿ ದಿವಂಗತ ಮಹಾಂತಪ್ಪ ಮೇಟಿ ಪ್ರಶಸ್ತಿ ಹಾಗೂ ಆದರ್ಶ ದಂಪತಿ ಪ್ರಶಸ್ತಿ ಸೇರಿದಂತೆ ವಿವಿಧ ಗೌರವಗಳನ್ನು ಸಾಧಕರಿಗೆ ಪ್ರದಾನ ಮಾಡಲಾಗುವುದು ಎಂದು ಅಣ್ಣಪ್ಪ ಮೇಟಿಗೌಡ ತಿಳಿಸಿದ್ದಾರೆ.

ಸಾಹಿತ್ಯಾಸಕ್ತರು, ಕಲಾಭಿಮಾನಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ 126ನೇ ಬೆಳಕು ಕಾರ್ಯಕ್ರಮ 'ಚಿಗುರು ಸಮ್ಮೇಳನ'ವನ್ನು ಯಶಸ್ವಿಗೊಳಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

# ಚೀನಾ–ಅಮೆರಿಕ ಸಂಬಂಧ ಬಲವರ್ಧನೆಗೆ ಜಿನ್ ಪಿಂಗ್ ಕರೆ

ವಾಷಿಂಗ್ಟನ್, ಸೆ.25: ಚೀನಾ ಮತ್ತು ಅಮೆರಿಕ ನಡುವಿನ ದ್ವಿಪಕ್ಷೀಯ ಸಂಬಂಧವನ್ನು ಮತ್ತಷ್ಟು ಬಲಪಡಿಸುವಂತೆ ಚೀನಾ ಅಧ್ಯಕ್ಷ ಷಿ ಜಿನ್ ಪಿಂಗ್ ಕರೆ ನೀಡಿದ್ದಾರೆ. ವಾಷಿಂಗ್ಟನ್‌ನಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಯೋಜಿಸಿದ್ದ ಔತಣಕೂಟದಲ್ಲಿ ಮಾತನಾಡಿದ ಕ್ಸಿ ಜಿನ್‌ಪಿಂಗ್, "ಚೀನಾ–ಅಮೆರಿಕ ಸ್ನೇಹದ ಸುಂದರ ಹೂವುಗಳನ್ನು ಪೋಷಿಸೋಣ" ಎಂದು ಹೇಳಿದ್ದಾರೆ.

ತಮ್ಮ ಅಮೆರಿಕ ಭೇಟಿಯ ಸಂದರ್ಭದಲ್ಲಿ ಆತಿಥ್ಯ ನೀಡಿದ್ದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಪ್ರಥಮ ಮಹಿಳೆ ಮೆಲಾನಿಯಾ ಟ್ರಂಪ್ ಅವರಿಗೆ ಧನ್ಯವಾದ ಸಲ್ಲಿಸಿದ ಕ್ಸಿ ಜಿನ್‌ಪಿಂಗ್, ಹಲವು ವಿಚಾರಗಳಲ್ಲಿ ಟ್ರಂಪ್ ಅವರ ಪ್ರಸ್ತಾಪಕ್ಕೆ ಸಹಮತ ವ್ಯಕ್ತಪಡಿಸಿದ್ದಾರೆ.

"ನಿರಂತರವಾಗಿ ಹರಿಯುವ ನದಿಯಂತೆ ಇತಿಹಾಸವೂ ಎಂದಿಗೂ ನಿಲ್ಲುವುದಿಲ್ಲ. ಉಭಯ ದೇಶಗಳ ಜನರ ನಡುವಿನ ಸ್ನೇಹವು ಉತ್ತಮ ಭವಿಷ್ಯದ ಭರವಸೆಯನ್ನು ಹೊಂದಿರುವ ಮಹತ್ವದ ಕಾರ್ಯವಾಗಿದೆ. ನಾವು ಕೈಜೋಡಿಸಿ, ಪರಸ್ಪರರೊಂದಿಗೆ ಹೆಜ್ಜೆ ಹಾಕುತ್ತಾ ಮುನ್ನಡೆಯೋಣ.

ಒಟ್ಟಾಗಿ ಚೀನಾ–ಅಮೆರಿಕ ಸ್ನೇಹದ ಸುಂದರ ಹೂವುಗಳನ್ನು ಪೋಷಿಸೋಣ. ನಮ್ಮ ಸ್ನೇಹಪರ ಸಂಬಂಧಗಳಲ್ಲಿ ಹೊಸ ಅಧ್ಯಾಯ ಬರೆಯೋಣ" ಎಂದು ಕ್ಸಿ ಜಿನ್‌ಪಿಂಗ್ ಹೇಳಿದ್ದಾರೆ.

ಈ ವರ್ಷದ ಮೇ ತಿಂಗಳಲ್ಲಿ ಡೊನಾಲ್ಡ್ ಟ್ರಂಪ್ ಚೀನಾಗೆ ಭೇಟಿ ನೀಡಿದ್ದನ್ನು ಕ್ಸಿ ಜಿನ್‌ಪಿಂಗ್ ಸ್ಮರಿಸಿದರು. ಎರಡೂ ದೇಶಗಳ ನಡುವಿನ ಸಂಬಂಧವನ್ನು ಕಾರ್ಯತಂತ್ರದ ಸ್ಥಿರತೆಯ ಆಧಾರದ ಮೇಲೆ ರಚನಾತ್ಮಕವಾಗಿ ಬೆಳೆಸಲು ಉಭಯ ನಾಯಕರು ಒಪ್ಪಿಕೊಂಡಿದ್ದರು ಎಂದು ಅವರು ಹೇಳಿದರು.

ಟ್ರಂಪ್ ಅವರ ಆಹ್ವಾನದ ಮೇರೆಗೆ ತಾವು ಅಮೆರಿಕಕ್ಕೆ ಭೇಟಿ ನೀಡಿದ್ದು, ಇದು ಚೀನಾ–ಅಮೆರಿಕ ದ್ವಿಪಕ್ಷೀಯ ಬಾಂಧವ್ಯದ ಪ್ರಮುಖ ಕ್ಷಣವಾಗಿದೆ ಎಂದು ಕ್ಸಿ ಜಿನ್‌ಪಿಂಗ್ ಅಭಿಪ್ರಾಯಪಟ್ಟರು.



## ಸರಳ ಆರೋಗ್ಯ ಸಲಹೆಗಳು

# ಆಯಾಸಕ್ಕೆ ಪರಿಹಾರ

ಈಗಿನ ಕಾಲದಲ್ಲಿ ಯಾರಿಗೆ ನೋಡಿದರು ಸ್ವಲ್ಪ ಕೆಲಸ ಮಾಡುವ ಹಾಗೆ ಇರಲ್ಲ ಆಯಾಸ ಆಗತ್ತೆ ಸುಸ್ತು ಆಗತ್ತೆ. ಹಿಂದಿನ ಕಾಲದವರ ಹಾಗೇ ಅವರು ಮಾಡಿದಷ್ಟು ಕೆಲಸವನ್ನು ನಮಗೆ ಮಾಡೋಕೆ ಆಗಲ್ಲ. ಬಹುಬೇಗ ದೇಹದಲ್ಲಿ ಇರುವ ಶಕ್ತಿಎಲ್ಲವನ್ನು ಕಳೆದುಕೊಂಡು ನಿತ್ರಾಣ ಆಗಿ ಬಿಡ್ತೀವಿ. ಅದಕ್ಕೆ ಆಯಾಸವನ್ನು ಕಳೆದುಕೊಂಡು ಹೊಸಚೈತನ್ಯತುಂಬಿಕೊಳ್ಳಲು ಇಲ್ಲಿದೆ ಸುಲಭವಾದ ಮನೆ ಮದ್ದುಗಳು.



ಕೆಲವರು ಇದ್ದಕ್ಕಿದ್ದ ಹಾಗೆ ನನಗೆ ನಿತ್ರಾಣ, ಆಯಾಸ, ಸುಸ್ತು ಎಂದೆಲ್ಲ ಹೇಳುತ್ತಾ ಇರುತ್ತಾರೆ. ಆಗ ಇಂದುಲೋಟ ಹಾಲಿಗೆ ಒಂದು ಚಮಚ ಗ್ಲುಕೋಸ್ ಹಾಕಿ ಕೊಡಬೇಕು.ಗ್ಲುಕೋಸ್ ಇಲ್ಲದೆ ಇದ್ದರೆ, ಸಕ್ಕರೆ ಅಥವಾ ಬೆಲ್ಲ ಹಾಕಿ ಪಾನಕ ಮಾಡಿ ಕೊಡಬೇಕು. ಮಧುಮೇಹ ರೋಗಿಗಳಲ್ಲಿ ಈ ರೀತಿ ಆಯಾಸ ಆಗುವುದು ರಕ್ತದಲ್ಲಿ ಸಕ್ಕರೆಯ ಅಂಶ ಕಡಿಮೆ ಆಗುವುದು. ಇದನ್ನ ಮನೆಯಲ್ಲಿ ಇದ್ದವರು ಅರ್ಥಮಾಡಿಕೊಂಡು ಆಯಾಸ ಆಗುವವರಿಗೆ ಈ ಉಪಚಾರ ಮಾಡಿ ಕೊಡಬೇಕು.

ಹೊಸದಾಗಿ ತಯಾರಿಸಿದ ಕಬ್ಬಿನ ಹಾಲನ್ನು ಒಂದು ಲೋಟ ಕುಡಿಯಲುಕೊಡಬೇಕು.ಇದರಲ್ಲಿ ಆಮ್ಲಜನಕವನ್ನು ಹೀರುವಗುಣ ಇರುವುದರಿಂದಹೃದಯಾಘಾತದ

ಸಮಯದಲ್ಲಿಯೂ ಹೆಚ್ಚು ಉಪಯೋಗ, ದಾರಿಯಲ್ಲಿ ಆಯಾಸ ಆದಂತೆ ಅನಿಸಿದರೆ ತಕ್ಷಣವೇ ಹಣ್ಣಿನ ಜ್ಯೂಸ್, ಕಬ್ಬಿನ ಹಾಲನ್ನು ಕುಡಿಸಬೇಕು ಹಾಗೂ ಅಲ್ಲೇ ರಸ್ತೆಯಬದಿಯಲ್ಲಿ ವಿಶ್ರಾಂತಿ ತೆಗೆದುಕೊಳ್ಳಲು ಸೂಚಿಸಬೇಕು. ಕಲ್ಲಂಗಡಿ ಹಣ್ಣಿನ ಜ್ಯೂಸ್ ತೆಗೆದುಕೊಳ್ಳುವುದರಿಂದ ಆಯಾಸ ಪರಿಹಾರ ಆಗತ್ತೆ. ಕರಬೂಜದ ಹಣ್ಣಿನರಸವನ್ನು ಸೇವಿಸುವುದರಿಂದರಾಸಾಯನಿಕ ವಸ್ತುಗಳು ತಕ್ಷಣ–ಕ್ಕೆರಕ್ತಕ್ಕೆ ಸೇರಿ ಆಯಾಸವನ್ನು ಪರಿಹಾರ ಮಾಡುತ್ತದೆ. ಮಜ್ಜಿಗೆಗೆ ಉಪ್ಪು ಈರುಳ್ಳಿ ಸೇರಿಸಿ ಕುಡಿದರೆ ಮಾರ್ಗ ಆಯಾಸ ಕಡಿಮೆ ಆಗತ್ತೆ. ಗರಿಕೆ ಹುಲ್ಲಿನ ರಸ ಸೇವಿಸುತ್ತಿದ್ದರೆ ಆಯಾಸ, ದಣಿವು ಕಡಿಮೆ ಆಗುತ್ತದೆ. ಮಾವಿನಹಣ್ಣಿನರಸಕ್ಕೆ ಹಾಲು ಸಕ್ಕರೆ ಸೇರಿಸಿಕುಡಿದರೆ ದಣಿವು ಕಡಿಮೆ ಆಗುತ್ತದೆ.

ಹಸಿಯಾದ ಅಲಸಂದೆ ಕಾಳನ್ನು ಬೆಲ್ಲದ ಜೊತೆ ಸೇವಿಸಿದರೆ ಆಯಾಸ ಪರಿಹಾರ ಆಗುತ್ತದೆ. ಯಾರೇ ಆದರೂಸಹಮನೆಯಲ್ಲಿ ಜೇನು ತುಪ್ಪವನ್ನು ಶೇಖರಿಸಿ ಇಟ್ಟುಕೊಂಡು ಇರುತ್ತಾರೆ.ಒಂದು ಲೋಟನೀರಿಗೆಒಂದುಚಮಚ ಜೇನು ತುಪ್ಪವನ್ನು ಸೇರಿಸಿ ಕುಡಿದರೆ, ದಣಿವು ಬಳಲಿಕೆ ನಿವಾರಣೆ ಆಗುತ್ತದೆ.

# ಇಂದು ವಿಶ್ವ ಔಷಧಿಕಾರರ ದಿನ

ವಿಶ್ವ ಔಷಧಿಕಾರರ ದಿನವನ್ನು ಸೆಪ್ಟೆಂಬರ್ 25ರಂದು ಆಚರಿಸಲಾಗುತ್ತಿದ್ದು ಈ ಬಾರಿಯ ಮುಖ್ಯ ವಿಷಯ ಆರೋಗ್ಯಕರ ಭವಿಷ್ಯಕ್ಕಾಗಿ ಔಷಧಿಕಾರರನ್ನು ಸಬಲೀಕರಣಗೊಳಿಸುವುದು ಎಂಬುದಾಗಿದೆ.ಅಂತರರಾಷ್ಟ್ರೀಯ ಔಷಧೀಯ ಒಕ್ಕೂಟ (ಎಫ್‌ಐಪಿ) ವಿಶ್ವ ಔಷಧಿಕಾರ ದಿನವನ್ನು ಆಚರಿಸಲು ಪ್ರಾರಂಭಿಸಿತು.ಎಫ್‌ಐಪಿ ಎಂಬುದು ಔಷಧಿಕಾರರು ಮತ್ತು ಔಷಧ ವಿಜ್ಞಾನಿಗಳ ರಾಷ್ಟ್ರೀಯ ಸಂಘಗಳ ಜಾಗತಿಕ ಒಕ್ಕೂಟವಾಗಿದೆ.ಔಷಧಿಕಾರರು ಔಷಧ ಮತ್ತು ಔಷಧಗಳಲ್ಲಿ ಪರಿಣಿತರು ಮತ್ತು ಔಷಧಾಲಯ ಕೇಂದ್ರಗಳಲ್ಲಿ ಕೆಲಸ ಮಾಡುತ್ತಾರೆ. ಔಷಧಿಕಾರರು ವೈದ್ಯಕೀಯ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಗಳನ್ನು ನೀಡುತ್ತಾರೆ.ಈ ದಿನವನ್ನು ಆಚರಿಸುವ ಪ್ರಮುಖ ಉದ್ದೇಶವೆಂದರೆ ಔಷಧಾಲಯಕ್ಕೆ ಸಂಬಂಧಿಸಿದ ಜನರ ಶ್ಲಾಘನೀಯ ಕೆಲಸಕ್ಕೆ ಗೌರವ ಮತ್ತು ಕೃತಜ್ಞತೆಯನ್ನು ವ್ಯಕ್ತಪಡಿಸುವುದು ಮತ್ತು ಔಷಧಾಲಯ ವಲಯವನ್ನು ಉತ್ತೇಜಿಸುವುದು.

ಮಹಾದೇವ್ ಲಾಲ್ ಶ್ರಾಫ್ ಅವರನ್ನು ಭಾರತದ ಔಷಧಿಕಾರರ ಪಿತಾಮಹ ಎಂದು ಪರಿಗಣಿಸಲಾಗಿದೆ.ಅವರು ಔಷಧಾಲಯ ಕ್ಷೇತ್ರ–ಕ್ಕೆ ಗಮನಾರ್ಹ ಕೊಡುಗೆಗಳನ್ನು ನೀಡಿದ್ದಾರೆ. ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಮೂರು ವರ್ಷಗಳ ಔಷಧಾಲಯ ಕೋರ್ಸ್ ಪರಿಚಯಿಸಿದ ಮೊದಲ ವ್ಯಕ್ತಿ ಅವರು.

ವಿಕಸನಗೊಳ್ಳುತ್ತಿರುವ ಆರೋಗ್ಯ ಅಗತ್ಯಗಳನ್ನು ಪೂರೈಸಲು ಔಷಧಿಕಾರರಿಗೆ ಅಗತ್ಯವಾದ ಸಾಮರ್ಥ್ಯ ಗುರುತಿಸುವಿಕೆ ಮತ್ತು ಸೂಕ್ತ ಕೆಲಸದ ವಾತಾವರಣವನ್ನು ಒದಗಿಸುವುದು ಈ ಸಬಲೀಕರಣದ ಮುಖ್ಯ ಉದ್ದೇಶವಾಗಿದೆ . ಔಷಧಿಗಳ ಪೂರೈಕೆ ವೈಜ್ಞಾನಿಕ ನಾವೀನ್ಯತೆಗಳು ಹಾಗೂ ರೋಗಿಗಳ ಆರೈಕೆಯ ಸೇತುವೆಯಾಗಿ ಔಷಧಿಕಾರರು ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ತಮ್ಮ ಸಂಪೂರ್ಣ ಪರಿಣತಿಯನ್ನು ಬಳಸಲು ಅವಕಾಶ ನೀಡಿದಾಗ ಆರೋಗ್ಯ ವ್ಯವಸ್ಥೆಯು ಹೆಚ್ಚು ಸುಸ್ಥಿರವಾಗುತ್ತದೆ.

ಆರೋಗ್ಯವ್ಯವಸ್ಥೆಯನ್ನು ಭವಿಷ್ಯಕ್ಕೆ ಸಿದ್ಧಗೊಳಿಸಲು ಔಷಧಿಕಾರರ ವೃತ್ತಿಯನ್ನು ಬಲಪಡಿಸುವುದು ಅತ್ಯಗತ್ಯ ಎಂದು ಸಂಸ್ಥೆಯು ಒತ್ತಿ ಹೇಳಿದೆ. ಪ್ರತಿದಿನ ಜಗತ್ತಿನಾದ್ಯಂತ ಔಷಧಿಕಾರರು ನೀಡುವ ನಿರ್ಣಾಯಕ ಸೇವೆಯನ್ನು ಆಚರಿಸಲು ಈ ದಿನ ಸೂಕ್ತ ವೇದಿಕೆಯಾಗಿದೆ. ಸರ್ಕಾರಗಳು ಮತ್ತು ವಿವಿಧ ಸಂಸ್ಥೆಗಳು ಔಷಧಿಕಾರರಲ್ಲಿ ಹೂಡಿಕೆ ಮಾಡುವುದು ಎಂದರೆ ಅದು ಎಲ್ಲರ ಉತ್ತಮ ಭವಿಷ್ಯಕ್ಕಾಗಿ ಮಾಡುವ ಹೂಡಿಕೆಯಾಗಿದೆ ಎಂದು ಈ ಸಂದರ್ಭದಲ್ಲಿ ನೆನಪಿಸಲಾಗಿದೆ.




ಅಂತರರಾಷ್ಟ್ರೀಯ ಫಾರ್ಮಾಸ್ಯುಟಿಕಲ್ ಫೆಡರೇಶನ್ ಪ್ರಾರಂಭವಾದ ದಿನದ ನೆನಪಿಗಾಗಿ ಈ ಆಚರಣೆಯನ್ನು ಜಾರಿಗೆ ತರಲಾಗಿದ್ದು ಪ್ರತಿ ವರ್ಷವೂ ಹೊಸ ವಿಷಯದೊಂದಿಗೆ ಜಾಗೃತಿ ಮೂಡಿಸಲಾಗುತ್ತದೆ. ಸಂಸ್ಥೆಯು ತಯಾರಿಸುವ ಪ್ರಚಾರ ಸಾಮಗ್ರಿಗಳು ಮತ್ತು ವಿನ್ಯಾಸಗಳನ್ನು ವಾಣಿಜ್ಯ ಉದ್ದೇಶಗಳಿಗಾಗಿ ಬಳಸಬಾರದು ಹಾಗೂ ಅವುಗಳಲ್ಲಿ ಯಾವುದೇ ಬದಲಾವಣೆ ಮಾಡಬಾರದು ಎಂದು ನಿಯಮಗಳನ್ನು ವಿಧಿಸಲಾಗಿದೆ.

ವಿಶ್ವದಾದ್ಯಂತ ಪ್ರತಿಯೊಬ್ಬ ಜನರ ಆರೋಗ್ಯ ಸಂರಕ್ಷಣೆಯಲ್ಲಿ ಫಾರ್ಮಾಸಿಸ್ಟ್‌ಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ.

ವೈದ್ಯರು ಬರೆದುಕೊಡುವ ಔಷಧಿಗಳನ್ನು ಸರಿಯಾದ ಪ್ರಮಾಣದಲ್ಲಿ ರೋಗಿಗಳಿಗೆ ತಲುಪಿಸುವುದು, ಅವುಗಳ ಬಳಕೆಯ ವಿಧಾನವನ್ನು ವಿವರಿಸುವುದು ಮತ್ತು ಅಡ್ಡಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವುದು ಇವರ ಪ್ರಮುಖ ಹೊಣೆಗಾರಿಕೆಯಾಗಿದೆ. ಹೊಸ ಔಷಧಗಳ ಸಂಶೋಧನೆ, ಔಷಧೀಯ ಗುಣಮಟ್ಟ ಪರಿಶೀಲನೆ ಹಾಗೂ ಸಾರ್ವಜನಿಕ ಆರೋಗ್ಯ ಜಾಗೃತಿ ಅಭಿಯಾನಗಳಲ್ಲಿ ಇವರ ಕೊಡುಗೆ ಅಪಾರ. ರೋಗಿ ಮತ್ತು ವೈದ್ಯರ ನಡುವಿನ ಸಂಪರ್ಕ ಕೊಂಡಿಯಾಗಿ ಕಾರ್ಯನಿರ್ವಹಿಸುವ ಫಾರ್ಮಾಸಿಸ್ಟ್‌ಗಳ ನಿಸ್ವಾರ್ಥ ಸೇವೆಯನ್ನು ಸ್ಮರಿಸಿ ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

ಆರೋಗ್ಯ ಇಲಾಖೆಯಲ್ಲಿ ಔಷಧಿಕಾರರು ನಿರ್ಣಾಯಕ ಪಾತ್ರ ವಹಿಸುತ್ತಾರೆ. ಅವರು ಹೊಸ ಔಷಧಿಗಳನ್ನು ಅಭಿವೃದ್ಧಿಪಡಿಸುತ್ತಾರೆ ಮತ್ತು ಸಂಶೋಧಿಸುತ್ತಾರೆ, ವಿವಿಧ ಲಸಿಕೆಗಳನ್ನು ಆವಿಷ್ಕರಿಸುತ್ತಾರೆ ಮತ್ತು ಅವುಗಳನ್ನು ದೊಡ್ಡ ಪ್ರಮಾಣದಲ್ಲಿ ಮಾರಾಟ ಮಾಡುತ್ತಾರೆ. ಅವರು ಹೊಸ ಔಷಧಿಗಳಿಗೆ ತರಬೇತಿ ನೀಡುತ್ತಾರೆ, ಕಂಡುಕೊಳ್ಳುತ್ತಾರೆ ಮತ್ತು ಸಂಶೋಧಿಸುತ್ತಾರೆ. ಔಷಧಿಗಳ ಉತ್ಪಾದನೆ ಮತ್ತು ಸುರಕ್ಷತೆಗೆ ಅವರು ಜವಾಬ್ದಾರರಾಗಿರುತ್ತಾರೆ. ವಿಶ್ವಾದ್ಯಂತ ಔಷಧಿಕಾರರ ಅವಶ್ಯಕತೆ ಬಹಳಷ್ಟಿದೆ. ಯಾವುದೇ ದೇಶದ ಆರೋಗ್ಯ ಇಲಾಖೆಯ ಬೆನ್ನೆಲುಬು ಔಷಧಿಕಾರರು. ಔಷಧಿಕಾರರು ಒಂದು ದೇಶದಲ್ಲಿ ವೈದ್ಯರಷ್ಟೇ ಮುಖ್ಯ. ಮಾತ್ರೆಗಳು, ಕ್ಯಾಪ್ಸುಲ್‌ಗಳು, ಇಂಜೆಕ್ಷನ್‌ಗಳು ಮತ್ತು ಸಿರಪ್‌ಗಳು ಸೇರಿದಂತೆ ಔಷಧಿಗಳ ಬಗ್ಗೆಯೂ ಅವರು ಜ್ಞಾನ ಹೊಂದಿರಬೇಕು.ವೈದ್ಯಕೀಯ ಕ್ಷೇತ್ರದಲ್ಲಿ ಔಷಧಿಕಾರರು ಪ್ರಮುಖ ಪಾತ್ರ ವಹಿಸುತ್ತಾರೆ. ವಿಶೇಷವಾಗಿ ಕೊರೊನಾವೈರಸ್ ಸಾಂಕ್ರಾಮಿಕ ಸಮಯದಲ್ಲಿ ಔಷಧಿಕಾರರು ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಪ್ರಪಂಚದಾದ್ಯಂತದ ಔಷಧಿಕಾರರು, ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು, ಸಾಂಕ್ರಾಮಿಕ ಸಮಯದಲ್ಲಿ ಜೀವಗಳನ್ನು ಉಳಿಸಿದರು. ಇದಕ್ಕಾಗಿ, ಔಷಧಿಕಾರರನ್ನು ಮುಂಚೂಣಿಯ ಕೆಲಸಗಾರರು ಎಂದು ಕರೆಯಲಾಗುತ್ತದೆ, ಮತ್ತು ಲಸಿಕೆ ಅಭಿಯಾನ ಪ್ರಾರಂಭವಾದಾಗ, ಮುಂಚೂಣಿಯ ಕೆಲಸಗಾರರನ್ನು ಮೊದಲು ಲಸಿಕೆ ಹಾಕಲಾಯಿತು. ತುರ್ತು ಸಂದರ್ಭಗಳಲ್ಲಿ ರೋಗಿಗಳಿಗೆ ಔಷಧಿಕಾರರು ದೇವತೆಗಳಂತೆ ಆಗುತ್ತಾರೆ. ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ, ಔಷಧಿಕಾರರು ತುರ್ತು ಸಂದರ್ಭಗಳಲ್ಲಿ ಸೂಕ್ತವಾದ ಔಷಧಿಗಳನ್ನು ನೀಡುವ ಮೂಲಕ ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ತಕ್ಷಣದ ಪರಿಹಾರವನ್ನು ನೀಡುತ್ತಾರೆ. ಇದರ ನಂತರ, ರೋಗಿಯನ್ನು ಆಸ್ಪತ್ರೆಗೆ ಕರೆದೊಯ್ಯಲು ಸೂಚಿಸಲಾಗುತ್ತದೆ.

ಈ ವಿಷಯವು ಔಷಧಿಕಾರರು ಕೇವಲ ವಿತರಕರಲ್ಲ, ಬದಲಾಗಿ ಆರೋಗ್ಯ ವ್ಯವಸ್ಥೆಯ ಪ್ರಮುಖ ಆಧಾರಸ್ತಂಭ ಎಂಬುದನ್ನು ಎತ್ತಿ ತೋರಿಸುತ್ತದೆ. ಅವರು ರೋಗಿಗಳಿಗೆ ಸೂಕ್ತವಾದ ಸಲಹೆಯನ್ನು ನೀಡುತ್ತಾರೆ, ಔಷಧಿಗಳ ಸುರಕ್ಷಿತ ಬಳಕೆಯನ್ನು ಖಚಿತಪಡಿಸುತ್ತಾರೆ ಮತ್ತು ಆರೋಗ್ಯ ಜಾಗೃತಿಯನ್ನು ಹರಡುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ.ಔಷಧಿಕಾರರಾಗಲು, ವಿಜ್ಞಾನ ವಿಭಾಗದಲ್ಲಿ 12 ನೇ ತರಗತಿಯಲ್ಲಿ ಉತ್ತೀರ್ಣರಾಗುವುದು ಅವಶ್ಯಕ.

ಇದರಲ್ಲಿ ಜೀವಶಾಸ್ತ್ರ, ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರದಲ್ಲಿ ಶೇಕಡಾ 50 ರಷ್ಟು ಉತ್ತೀರ್ಣರಾಗಿರಬೇಕು. 12 ನೇ ತರಗತಿಯಲ್ಲಿ ಉತ್ತೀರ್ಣರಾದ ನಂತರ, ರಾಜ್ಯ ಸರ್ಕಾರವು ಒಂದು ನಮೂನೆಯನ್ನು ನೀಡುತ್ತದೆ, ಅದಕ್ಕಾಗಿ ಪರೀಕ್ಷೆಯನ್ನು ನಡೆಸಲಾಗುತ್ತದೆ. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗೆ ಅವನ ಶ್ರೇಣಿಯ ಆಧಾರದ ಮೇಲೆ ಸರ್ಕಾರಿ ಅಥವಾ ಖಾಸಗಿ ಕಾಲೇಜಿನಲ್ಲಿ ಪ್ರವೇಶ ನೀಡಲಾಗುತ್ತದೆ. ಈ ಕೋರ್ಸ್ 4 ವರ್ಷಗಳ ಅವಧಿಯದ್ದಾಗಿದೆ. ಬಿ–ಫಾರ್ಮಾ ಅಧ್ಯಯನವನ್ನು ಪೂರ್ಣಗೊಳಿಸಿದ ನಂತರ, ರಾಜ್ಯ ಸರ್ಕಾರವು ಪ್ರಮಾಣಪತ್ರವನ್ನು ನೀಡುತ್ತದೆ

# ಕನಕಪುರ ರಸ್ತೆಯಲ್ಲಿ ಡಿಸೈನ್‌ಕ್ಯಾಫೆ ಹೊಸ ಎಕ್ಸ್‌ಪೀರಿಯನ್ಸ್ ಸೆಂಟರ್



ಬೆಂಗಳೂರು, ಸೆ.25:– ಗೃಹ ಒಳಾಂಗಣ ವಿನ್ಯಾಸ ಕ್ಷೇತ್ರದ ಡಿಸೈನ್‌ಕ್ಯಾಫೆ ಕನಕಪುರ ರಸ್ತೆಯಲ್ಲಿ 2,750 ಚದರ ಅಡಿ ವಿಸ್ತೀರ್ಣದ ಹೊಸ ಎಕ್ಸ್‌ಪೀರಿಯನ್ಸ್ ಸೆಂಟರ್ ಆರಂಭಿಸಿದೆ. ಇದು ಬೆಂಗಳೂರಿನಲ್ಲಿ ಸಂಸ್ಥೆಯ 5ನೇ ಹಾಗೂ ದೇಶಾದ್ಯಂತ 24ನೇ ಕೇಂದ್ರವಾಗಿದೆ.

ದಕ್ಷಿಣ ಬೆಂಗಳೂರಿನ ವೇಗವಾಗಿ ಬೆಳೆಯುತ್ತಿರುವ ವಸತಿ ಪ್ರದೇಶಗಳ ಮನೆ ಮಾಲೀಕರಿಗೆ ವೈಯಕ್ತಿಕಗೊಳಿಸಿದ ಹಾಗೂ ಎಂಡ್–ಟು–ಎಂಡ್ ಒಳಾಂಗಣ ವಿನ್ಯಾಸ ಸೇವೆಗಳನ್ನು ಹತ್ತಿರಕ್ಕೆ ತರುವುದು ಕೇಂದ್ರದ ಉದ್ದೇಶವಾಗಿದೆ. ಕನಕಪುರ ರಸ್ತೆಯಲ್ಲಿ ಹೊಸ ಅಪಾರ್ಟ್‌ಮೆಂಟ್‌ಗಳು ಮತ್ತು ವಸತಿ ಯೋಜನೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈ ಕೇಂದ್ರವನ್ನು ಆರಂಭಿಸಲಾಗಿದೆ.

ಕೇಂದ್ರದಲ್ಲಿ ಮಾಡ್ಯುಲರ್ ಕಿಚನ್, ವಾರ್ಡ್‌ರೋಬ್, ಲಿವಿಂಗ್ ರೂಮ್ ಮತ್ತು ಬೆಡ್‌ರೂಮ್‌ಗಳ ನೈಜ ಮಾದರಿಗಳನ್ನು ಗ್ರಾಹಕರು ವೀಕ್ಷಿಸಬಹುದಾಗಿದೆ. ವಿವಿಧ ಮೆಟೀರಿಯಲ್‌ಗಳು, ಫಿನಿಷ್‌ಗಳು ಹಾಗೂ ಜಾಗ ಉಳಿತಾಯದ ವಿನ್ಯಾಸ ಪರಿಹಾರಗಳನ್ನು ನೇರವಾಗಿ ಪರಿಶೀಲಿಸಿ ತಮ್ಮ ಮನೆಗೆ ಸೂಕ್ತ ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಡಿಸೈನ್‌ಕ್ಯಾಫೆ ಸಹ–ಸಂಸ್ಥಾಪಕಿ ಹಾಗೂ ಸಿಇಒ ಗೀತಾ ರಮಣನ್ ಮಾತನಾಡಿ, ಕುಟುಂಬದ ಜೀವನಶೈಲಿ, ದಿನನಿತ್ಯದ ಅಗತ್ಯ ಮತ್ತು ಮನೆಯಲ್ಲಿ ಬಳಸುವ ಜಾಗವನ್ನು ಗಮನದಲ್ಲಿಟ್ಟುಕೊಂಡು ವೈಯಕ್ತಿಕ ವಿನ್ಯಾಸ ರೂಪಿಸುವುದು ಸಂಸ್ಥೆಯ ಪ್ರಮುಖ ಉದ್ದೇಶವಾಗಿದೆ ಎಂದರು. ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ನಗರಗಳಲ್ಲಿ ತನ್ನ ಉಪಸ್ಥಿತಿಯನ್ನು ಮತ್ತಷ್ಟು ವಿಸ್ತರಿಸುವ ಕಾರ್ಯತಂತ್ರದ ಭಾಗವಾಗಿ ಕನಕಪುರ ರಸ್ತೆ ಕೇಂದ್ರವನ್ನು ಆರಂಭಿಸಲಾಗಿದೆ ಎಂದು ತಿಳಿಸಿದರು.

ಡಿಸೈನ್‌ಕ್ಯಾಫೆ ಇದುವರೆಗೆ ದೇಶದ ಪ್ರಮುಖ ನಗರಗಳಲ್ಲಿ 15,000ಕ್ಕೂ ಹೆಚ್ಚು ಮನೆಗಳಿಗೆ ಒಳಾಂಗಣ ವಿನ್ಯಾಸ ಪರಿಹಾರಗಳನ್ನು ಒದಗಿಸಿದೆ. ಸಂಸ್ಥೆಯ ಸ್ವಂತ ಉತ್ಪಾದನಾ ಘಟಕಗಳು, ಗುಣಮಟ್ಟ ಪರಿಶೀಲನಾ ವ್ಯವಸ್ಥೆ ಮತ್ತು ದೀರ್ಘಾವಧಿಯ ವಾರಂಟಿ ಸೇವೆಗೆ ಬೆಂಬಲ ನೀಡುತ್ತಿವೆ. ವೈಯಕ್ತೀಕರಣ, ಪಾರದರ್ಶಕ ದರ ನಿಗದಿ, ಗುಣಮಟ್ಟದ ಕರಕುಶಲತೆ ಮತ್ತು ವಿಶ್ವಾಸಾರ್ಹ ಅನುಷ್ಠಾನಕ್ಕೆ ಸಂಸ್ಥೆ ಆದ್ಯತೆ ನೀಡುತ್ತಿದೆ.

# 8 ಲಕ್ಷ ಜೇನುನೊಣಗಳ ಕಳ್ಳತನ

ಕ್ವೀನ್ಸ್‌ಲ್ಯಾಂಡ್,ಸೆ.25:– ಆಸ್ಟ್ರೇಲಿಯಾದ ಉತ್ತರ ಕ್ವೀನ್ಸ್‌ಲ್ಯಾಂಡ್‌ನ ಅಥರ್ಟನ್ ಟೇಬಲ್‌ಲ್ಯಾಂಡ್ಸ್ ಪ್ರದೇಶದಲ್ಲಿ ಸುಮಾರು 8 ಲಕ್ಷಕ್ಕೂ (8,00,000) ಹೆಚ್ಚು ಜೇನುನೊಣಗಳು ಕಳುವಾಗಿರುವ ವಿಚಿತ್ರ ಹಾಗೂ ಆಘಾತಕಾರಿ ಘಟನೆ ನಡೆದಿದೆ. ವಾಣಿಜ್ಯ ಜೇನುಸಾಕಣೆದಾರರಿಗೆ ಸೇರಿದ ಒಟ್ಟು 44 ಜೇನುಗೂಡುಗಳ ಸಮೂಹಗಳಿಂದ ಈ ಜೇನುನೊಣಗಳನ್ನು ಕದಿಯಲಾಗಿದ್ದು, ಇದರಿಂದ ಜೇನುಸಾಕಣೆದಾರರಿಗೆ ಹತ್ತಾರು ಸಾವಿರ ಡಾಲರ್‌ಗಳಷ್ಟು ಭಾರಿ ಆರ್ಥಿಕ ನಷ್ಟ ಉಂಟಾಗಿದೆ.



ಈ ಪ್ರದೇಶದಲ್ಲಿ ಪ್ರಸ್ತುತ ಆವಕಾಡೊ ಹಣ್ಣುಗಳ ಬೆಳೆಯ ಸೀಸನ್ ನಡೆಯುತ್ತಿದ್ದು, ಬೆಳೆಗಳ ಪರಾಗಸ್ಪರ್ಶಕ್ಕಾಗಿ ಜೇನುಗೂಡುಗಳನ್ನು ತೋಟಗಳಲ್ಲಿ ಇಡಲಾಗಿತ್ತು. ಕಳ್ಳರು ಅತ್ಯಂತ ಯೋಜನಾಬದ್ಧವಾಗಿ ಹಾಗೂ ನುರಿತ ತಂತ್ರಜ್ಞಾನ ಬಳಸಿ ಈ ಕೃತ್ಯ ಎಸಗಿದ್ದಾರೆ. ಅವರು ಜೇನುಗೂಡಿನಲ್ಲಿರುವ ಜೇನುತುಪ್ಪವನ್ನು ಮುಟ್ಟದೆ, ಕೇವಲ ಜೇನುನೊಣಗಳು, ಅವುಗಳ ಮರಿಗಳು ಹಾಗೂ ರಾಣಿ ನೊಣಗಳಿದ್ದ 'ಬ್ರೂಡ್ ಬಾಕ್ಸ್' (ಮರಿ ಬೆಳೆಸುವ ಪೆಟ್ಟಿಗೆ) ಚೌಕಟ್ಟುಗಳನ್ನು ಮಾತ್ರ ತಮ್ಮದೇ ಆದ ಪೆಟ್ಟಿಗೆಗಳಿಗೆ ವರ್ಗಾಯಿಸಿಕೊಂಡು ಹೋಗಿದ್ದಾರೆ. ದೂರದಿಂದ ನೋಡಿದಾಗ ಜೇನುಗೂಡುಗಳು ಸುರಕ್ಷಿತವಾಗಿವೆ ಎಂದು ಕಾಣುವಂತೆ ಹಳೆಯ ಪೆಟ್ಟಿಗೆಗಳನ್ನು ಮತ್ತೆ ಜೋಡಿಸಿಟ್ಟು ಪರಾ–ರಿಯಾಗಿದ್ದಾರೆ.

ಜೇನುನೊಣಗಳನ್ನು ಸುರಕ್ಷಿತವಾಗಿ ನಿರ್ವಹಿಸಲು ಮತ್ತು ವರ್ಗಾಯಿಸಲು ವಿಶೇಷ ಉಪಕರಣ ಹಾಗೂ ಅನುಭವದ ಅಗತ್ಯವಿರುವುದರಿಂದ, ಈ ಕಳುವಿನ ಹಿಂದೆ ವಾಣಿಜ್ಯಕವಾಗಿ ಜೇನುಸಾಕಣೆ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಅನುಭವಸ್ಥರೇ ಭಾಗಿಯಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಈ ಪ್ರದೇಶದ ಜೇನುಸಾಕಣೆದಾರರು ಈಗಾಗಲೇ 'ವರೋವಾ ಮೈಟ್' ಎಂಬ ಅಪಾಯಕಾರಿ ಪರಾವಲಂಬಿ ಕೀಟದ ಬಾಧೆಯಿಂದ ಬಳಲುತ್ತಿದ್ದು, ಇದರ ಬೆನ್ನಲ್ಲೇ ಲಕ್ಷಾಂತರ ಜೇನುನೊಣಗಳ ಕಳುವಾಗಿರುವುದು ಅವರಿಗೆ ಬಹುದೊಡ್ಡ ಆಘಾತ ತಂದೊಡ್ಡಿದೆ.

ಈ ಘಟನೆಯಿಂದಾಗಿ ಜೇನುತುಪ್ಪ ಉತ್ಪಾದನೆ ಮಾತ್ರವಲ್ಲದೆ, ತೋಟಗಳಲ್ಲಿ ಪರಾಗಸ್ಪರ್ಶದ ಒಪ್ಪಂದಗಳಿಂದ ಬರುವ ಆದಾಯಕ್ಕೂ ಭಾರಿ ಧಕ್ಕೆಯುಂಟಾಗಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

# ಫಿಬಾ ಏಷ್ಯಾ ಒಕ್ಕೂಟಕ್ಕೆ ಶುಭ ಹಾರೈಕೆ

ಟೋಕಿಯೋ (ಜಪಾನ್).ಸೆ.25:– ಫಿಬಾ ಏಷ್ಯಾ ಅಧ್ಯಕ್ಷ ಡಾ ಕೆ ಗೋವಿಂದರಾಜ್ ಮತ್ತು ಪದಾಧಿಕಾರಿಗಳು ಜಪಾನ್ ನ ನಗೋಯದಲ್ಲಿ ಜಪಾನ್ ನ ಚಕ್ರವರ್ತಿ ನರುಹಿಟೋ ಮತ್ತು ಮಹಾರಾಣಿ ಮಸಾಕೊ ಅವರನ್ನು ಭೇಟಿ ಮಾಡಿದರು.



ಚಕ್ರವರ್ತಿ ನರುಹಿಟೋ ಮತ್ತು ಮಹಾರಾಣಿ ಮಸಾಕೊ ಏಷ್ಯಾ ಖಂಡ ಮತ್ತು ಪ್ರಪಂಚದಲ್ಲಿ ಬಾಸ್ಕೆಟ್ ಬಾಲ್ ಕ್ರೀಡೆಗೆ ಸಿಗುತ್ತಿರುವ ಪ್ರೋತ್ಸಾಹ ಮತ್ತು ಅದರ ಬೆಳವಣಿಗೆ ಬಗ್ಗೆ ಗೋವಿಂದರಾಜ್ ಅವರಿಂದ ಮಾಹಿತಿ ಪಡೆದರು.ಅಲ್ಲದೆ,ಫಿಬಾ ಏಷ್ಯಾ ಒಕ್ಕೂಟಕ್ಕೆ ಅವರು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ತಮಗೆ ಈ ಅಪರೂಪದ, ಸ್ಮರಣೀಯ ಭೇಟಿಯ ಅವಕಾಶ ಕಲ್ಪಿಸಿದ ಚಕ್ರವರ್ತಿ ಮತ್ತು ಮಹಾರಾಣಿಗೆ ಫಿಬಾ ಏಷ್ಯಾ ಪರವಾಗಿ ಗೋವಿಂದರಾಜ್ ಕೃತಜ್ಞತೆ ಸಲ್ಲಿಸಿದರು.



**ಬೆಂಗಳೂರು ಆಕ್ಷನ್ ಟೆಸಾ ಕಂಪನಿ ವತಿಯಿಂದ ಅಂತಾರಾಷ್ಟ್ರೀಯ ಕಾರ್ಪೆಂಟರ್ ದಿನವನ್ನು ನಗರದ ಖಾಸಗಿ ಹೋಟೆಲ್ ನಲ್ಲಿ ಆಚರಿಸಲಾಯಿತು. ಸುಮಾರು 200 ಕಾರ್ಪೆಂಟರ್ ಗಳು ಭಾಗವಹಿಸಿದ್ದರು. ಅವರಿಗೆ ಕಂಪನಿಯ ವತಿಯಿಂದ ಕಾರ್ಪೆಂಟರ್ ಗೆ ಸಿಗುವ ನಾಲ್ಕು ಲಾಭಗಳ ಬಗ್ಗೆ ಮಾಹಿತಿ ನೀಡಲಾಯಿತು. ಕಂಪನಿಯ ಡಿಜಿಎಂ ವೃಷ್ಟಿ ಜೈನ್ ಮತ್ತು ಬ್ರಾಂಚ್ ಮ್ಯಾನೇಜರ್ ಗುರುರಾಜ್ ಮತ್ತು ಮಾರ್ಕೆಟಿಂಗ್ ತಂಡದಿಂದ ಮಾಹಿತಿ ನೀಡಲಾಯಿತು.**

# ಅರಮನೆಯಲ್ಲಿ ಫಿರಂಗಿ ಗಾಡಿಗಳಿಗೆ ಪೂಜೆ



ಮೈಸೂರು, ಸೆ.25: ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ಅಂಬಾವಿಲಾಸ ಅರಮನೆ ಆವರಣದಲ್ಲಿ ಇಂದು ಫಿರಂಗಿ ವಾಹನಗಳ ಪೂಜೆ ವಿಧ್ಯುಕ್ತವಾಗಿ ನೆರವೇರಿತು.

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರ ನೇತೃತ್ವದಲ್ಲಿ ಇಂದು 11 ಫಿರಂಗಿ ಗಾಡಿಗಳಿಗೆ ಪೂಜೆ ಸಲ್ಲಿಸಲಾಯಿತು.

ದಸರಾ ಸಿದ್ಧತೆಗಳ ಪ್ರಮುಖ ಭಾಗವಾಗಿ ಈ ಪೂಜೆಯನ್ನು ಆಯೋಜಿಸಲಾಗಿತ್ತು. ನಿನ್ನೆಯೇ ಫಿರಂಗಿ ಗಾಡಿಗಳನ್ನು ಸ್ವಚ್ಛಗೊಳಿಸಿ ಪೂಜೆಗೆ ಸಜ್ಜುಗೊಳಿಸಲಾಗಿತ್ತು.

ಕುಶಾಲತೋಪು ಸಿಡಿಸುವ ವೇಳೆ ಯಾವುದೇ ಅವಘಡ ಸಂಭವಿಸದಂತೆ ನೋಡಿಕೊಳ್ಳಲು ಪ್ರತಿ ವರ್ಷ ಪೂಜೆ ಸಲ್ಲಿಸುವುದು ಸಂಪ್ರದಾಯವಾಗಿದೆ.

ಜಂಬೂಸವಾರಿ ದಿನದಂದು ಅಂಬಾರಿಯಲ್ಲಿರುವ ಚಾಮುಂಡೇಶ್ವರಿ ಮೂರ್ತಿಗೆ ಪುಷ್ಪಾರ್ಚನೆ ಸಲ್ಲಿಸುವ ಸಂದರ್ಭದಲ್ಲಿ 21 ಕುಶಾಲತೋಪು ಸಿಡಿಸುವುದು ಸಂಪ್ರದಾಯ.

ಇದಕ್ಕಾಗಿ ಆನೆ ಮತ್ತು ಕುದುರೆಗಳಿಗೆ ಸಿಡಿಲಿನ ಶಬ್ದಕ್ಕೆ ಬೆಚ್ಚದಂತೆ ಇರಲು ಪೂರ್ವಭಾವಿ ತಾಲೀಮು ನೀಡಲಾಗುತ್ತದೆ. ಈ ತಾಲೀಮಿನಲ್ಲಿ ಪಡೆಯ 35ಕ್ಕೂ ಹೆಚ್ಚು ಸಿಬ್ಬಂದಿ ಭಾಗವಹಿಸಲಿದ್ದಾರೆ.

ಈ ಪೂಜೆಯೊಂದಿಗೆ ದಸರಾ ಮಹೋತ್ಸವದ ಸಿದ್ಧತೆಗಳಿಗೆ ಅಧಿಕೃತ ಚಾಲನೆ ದೊರೆತಂತಾಗಿದೆ.

# ಟರ್ಟಲ್ ವ್ಯಾಕ್ಸ್‌ನಿಂದ ಭಾರತದಲ್ಲಿ ವಿಸ್ತರಣೆಗೆ ವೇಗ

ಬೆಂಗಳೂರು, ಸೆ.25– ವಾಹನ ಬಾಹ್ಯ ಸೌಂದರ್ಯ ಮತ್ತು ಮೇಲ್ಮೈ ಆರೈಕೆ ಕ್ಷೇತ್ರದ ಟರ್ಟಲ್ ವ್ಯಾಕ್ಸ್ 80ನೇ ವಾರ್ಷಿಕೋತ್ಸವ ಆಚರಿಸುತ್ತಿದ್ದು, ಭಾರತದಲ್ಲಿ ವಿಸ್ತರಣಾ ಯೋಜನೆಗಳಿಗೆ ವೇಗ ನೀಡಿದೆ.

ಕಂಪನಿ ಸಿಇಒ ಲಾರಿ ಕಿಂಗ್ ಭಾರತಕ್ಕೆ ಭೇಟಿ ನೀಡಿ ಭಾರತೀಯ ನಾಯಕತ್ವ, ಚಿಲ್ಲರೆ ಪಾಲುದಾರರು ಹಾಗೂ ಡಿಟೇಲಿಂಗ್ ಉದ್ಯಮದ ಪ್ರಮುಖರೊಂದಿಗೆ ಹೂಡಿಕೆ ಮತ್ತು ವಿಸ್ತರಣೆ ಕುರಿತು ಚರ್ಚಿಸಿದರು.

ಭಾರತದಲ್ಲಿ 100ಕ್ಕೂ ಹೆಚ್ಚು Turtle Wax Car Care Studioಕಾರ್ಯನಿರ್ವಹಿಸುತ್ತಿದ್ದು, ಮುಂದಿನ 12ರಿಂದ 24 ತಿಂಗಳಲ್ಲಿ 50ಕ್ಕೂ ಹೆಚ್ಚು ಹೊಸ ಸ್ಟುಡಿಯೋ ಆರಂಭಿಸಲು ಕಂಪನಿ ಯೋಜಿಸಿದೆ.

ಇದೇ ವೇಳೆ ಗ್ಲಾಸ್, ಪಿಪಿಎಫ್, ಪೇಂಟ್ ಹಾಗೂ ಹೊರಾಂಗಣ ಟ್ರಿಮ್‌ಗಳಿಗೆ ರಕ್ಷಣೆ ನೀಡುವ `Hybrid Solutions® Pure Bead' ಸ್ಪ್ರೇ–ಆನ್ ಕೋಟಿಂಗ್ ಅನ್ನು ಭಾರತದಲ್ಲಿ ಪರಿಚಯಿಸಲಾಯಿತು.

# ಹಿರಿಯರಿಗೆ ಮನೆಗಿಂತ ಸಮಗ್ರ ಆರೈಕೆ ಅಗತ್ಯ: ವರದಿ

ಬೆಂಗಳೂರು, ಸೆ.25: ಹಿರಿಯ ನಾಗರಿಕರಿಗೆ ಕೇವಲ ವಸತಿ ಕಲ್ಪಿಸುವುದಕ್ಕಿಂತ ಆರೋಗ್ಯ, ಆರೈಕೆ, ಪೌಷ್ಟಿಕಾಂಶ, ಸ್ವಾಸ್ಥ್ಯ ಮತ್ತು ಸಾಮಾಜಿಕ ಬದುಕು ಒಳಗೊಂಡ ಸಮಗ್ರ ದೀರ್ಘಾಯುಷ್ಯ ಪರಿಸರ ವ್ಯವಸ್ಥೆ ಅಗತ್ಯ ಎಂದು ಕಾಲಿಯರ್ಸ್ ಇಂಡಿಯಾ?ಪ್ರೈಮಸ್ ಸೀನಿಯರ್ ಲಿವಿಂಗ್ ಜಂಟಿ ವರದಿ ತಿಳಿಸಿದೆ.

'ಭಾರತದಲ್ಲಿ ವಯಸ್ಸಾಗುವಿಕೆ ಮತ್ತು ದೀರ್ಘಾಯುಷ್ಯ ಆರ್ಥಿಕತೆಯ ಭವಿಷ್ಯ 2026' ವರದಿ ಪ್ರಕಾರ, ದೇಶದಲ್ಲಿ 60 ವರ್ಷ ಮೇಲ್ಪಟ್ಟ 7.5 ಕೋಟಿಗೂ ಅಧಿಕ ಜನರಿದ್ದು, ದೀರ್ಘಕಾಲಿಕ ಕಾಯಿಲೆಗಳ ಸವಾಲು ಎದುರಿಸುತ್ತಿದ್ದಾರೆ.

ಹಿರಿಯರ ವಸತಿ ಕ್ಷೇತ್ರವು ಕಟ್ಟಡ ನಿರ್ಮಾಣಕ್ಕೆ ಸೀಮಿತವಾಗದೆ ಸೇವಾ–ಆಧಾರಿತ ಮಾದರಿಗೆ ಬದಲಾಗಬೇಕು. ಆರೋಗ್ಯ ಸೇವೆಗಳ ಲಭ್ಯತೆ, ತರಬೇತಿ ಪಡೆದ ಸಿಬ್ಬಂದಿ, ಪಾರದರ್ಶಕ ಶುಲ್ಕ, ಗುಣಮಟ್ಟದ ಸೇವೆ ಮತ್ತು ತಂತ್ರಜ್ಞಾನಕ್ಕೆ ಆದ್ಯತೆ ನೀಡಬೇಕು ಎಂದು ವರದಿ ಶಿಫಾರಸು ಮಾಡಿದೆ.

ಮುಂದಿನ ದಿನಗಳಲ್ಲಿ ಹಿರಿಯರ ವಸತಿ ಕ್ಷೇತ್ರದ ಬೆಳವಣಿಗೆಗೆ ರಿಯಲ್ ಎಸ್ಟೇಟ್ ಜತೆಗೆ ಕಾರ್ಯಾಚರಣಾ ಗುಣಮಟ್ಟ ಮತ್ತು ವಿಶ್ವಾಸಾರ್ಹತೆ ಪ್ರಮುಖವಾಗಲಿದೆ ಎಂದು ಕಾಲಿಯರ್ಸ್ ಮತ್ತು ಪ್ರೈಮಸ್ ಪ್ರತಿನಿಧಿಗಳು ತಿಳಿಸಿದ್ದಾರೆ.

# ಅ. 2 ಅಶೋಕ್ ಟ್ರಸ್ಟ್‌ನಿಂದ ಉಚಿತ ವೈದ್ಯಕೀಯ ಶಿಬಿರ

ಬೆಂಗಳೂರು, ಸೆ. 25– ನಗರದ ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಜಾಲಹಳ್ಳಿ ಪಶ್ಚಿಮದ ಕಮ್ಮಗೊಂಡನಹಳ್ಳಿಯಲ್ಲಿ ಕೆಬಿಸಿ ಟ್ರಸ್ಟ್ ಹಾಗೂ ಅಶೋಕ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಅಂಡ್ ಕಂಪನೀಸ್ ವತಿಯಿಂದ ಉಚಿತವಾಗಿ 31ನೇ ವರ್ಷದ ಮೆಗಾ ಉಚಿತ ವೈದ್ಯಕೀಯ, ಶಸ್ತ್ರಚಿಕಿತ್ಸಾ ಮತ್ತು ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ.

ಬೆಂಗಳೂರಿನಲ್ಲಿ ಸುದ್ದಿ ಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಕೆ.ಬಿ.ಸಿ. ಟ್ರಸ್ಟ್ ಅಧ್ಯಕ್ಷರು ಹಾಗೂ ಅಶೋಕ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಅಂಡ್ ಕಂಪನೀಸ್ ಅಧ್ಯಕ್ಷರಾದ ಕೆ.ಸಿ. ಅಶೋಕ್ ಈ ಕುರಿತು ಮಾಹಿತಿ ನೀಡಿದರು.

ಕಳೆದ ಮೂರು ದಶಕಗಳಿಗೂ ಹೆಚ್ಚು ಕಾಲ ಸಂಸ್ಥೆಯು ಶಿಕ್ಷಣ, ಆರೋಗ್ಯ ಮತ್ತು ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಜನಸೇವೆಯಲ್ಲಿ ತೊಡಗಿಸಿಕೊಂಡಿದೆ ಎಂದು ತಿಳಿಸಿದ ಅಶೋಕ್, ಇದು 31ನೇ ವರ್ಷದ ಮೆಗಾ ಉಚಿತ ವೈದ್ಯಕೀಯ, ಶಸ್ತ್ರಚಿಕಿತ್ಸಾ ಮತ್ತು ರಕ್ತದಾನ ಶಿಬಿರ ಆಗಿದೆ ಎಂದು ತಿಳಿಸಿದರಲ್ಲದೆ, ಪ್ರತಿ ವರ್ಷ ಮಹಾತ್ಮಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನವಾದ ಅ.2 ರಂದು ಆಯೋಜಿಸಿಕೊಂಡು ಬರಲಾಗುತ್ತಿದೆ ಎಂದು ಹೇಳಿದರು.

ಜಾಲಹಳ್ಳಿ ಪಶ್ಚಿಮ, ಕಮ್ಮಗೊಂಡನಹಳ್ಳಿಯ

ಕೆ ಬಿ ಚಿಕ್ಕ ಮುನಿಯಪ್ಪ ಮುಖ್ಯ ರಸ್ತೆಯಲ್ಲಿರುವ

ಅಶೋಕ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಕ್ಯಾಂಪಸ್ ನಲ್ಲಿ ಶಿಬಿರ ಆಯೋಜಿಸಲಾಗಿದ್ದು, ಬೆಳಿಗ್ಗೆ 9.00 ರಿಂದ ಮಧ್ಯಾಹ್ನ 2.00 ಗಂಟೆಯವರೆಗೆ ನಡೆಯಲಿದೆ.

ಲಭ್ಯವಿರುವ ಪ್ರಮುಖ ಸೇವೆಗಳೆಂದರೆ ಸಾಮಾನ್ಯ ಆರೋಗ್ಯ ತಪಾಸಣೆ, ರಕ್ತದೊತ್ತಡ ಮತ್ತು ರಕ್ತದಲ್ಲಿನ ಸಕ್ಕರೆ ಪರೀಕ್ಷೆ, ಕಣ್ಣಿನ ತಪಾಸಣೆ, ಹಾರ್ಟ್ ಸ್ಕ್ರೀನಿಂಗ್ ಮೂಲಕ ಹೃದಯ ತಪಾಸಣೆ, ಮೂಳೆ ಸಾಂದ್ರತೆ ಪರೀಕ್ಷೆ, ಕಿವಿ, ಮೂಗು ತಪಾಸಣೆ, ದಂತ ಮತ್ತು ಚರ್ಮರೋಗ ತಜ್ಞರ ಸಲಹೆ, ಕ್ಯಾನ್ಸರ್ ಪತ್ತೆ ತಪಾಸಣೆ, ಮೂಕ ಮತ್ತು ಶ್ರವಣ ದೋಷ ತಪಾಸಣೆ, ಶಸ್ತ್ರಚಿಕಿತ್ಸಾ ತಜ್ಞರ ಸಲಹೆ, ಅಂಗವಿಕಲರ ಸಹಾಯಕ ಸಾಧನಗಳ ವಿತರಣೆ,

ಶ್ರವಣ ಸಾಧನಗಳ ವಿತರಣೆ. ಜೊತೆಗೆ ಸ್ವಯಂಪ್ರೇರಿತ ರಕ್ತದಾನ ಶಿಬಿರ ಸಹ ಇರುತ್ತದೆ ಎಂದು ಅಶೋಕ್ ಮಾಹಿತಿ ನೀಡಿದರು.

ಸಚಿವರಾದ ಕೃಷ್ಣಭೈರೇಗೌಡ ,ರಾಮಲಿಂಗಾರೆಡ್ಡಿ, ಪ್ರಿಯಾಂಕ ಖರ್ಗೆ, ಸ್ಥಳೀಯ ಶಾಸಕರು, ಮಾಜಿ ಶಾಸಕರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಅವರು ತಿಳಿಸಿದರು.

# ನಂದನ ಪ್ಯಾಲೇಸ್ ಶಾಖೆ ಆರಂಭ

ಬೆಂಗಳೂರು, ಸೆ. 25– ಆಂಧ್ರ ಶೈಲಿಯ ವೆಜ್ ಅಂಡ್ ನಾನ್ ವೆಜ್ ರೆಸ್ಟೋರೆಂಟ್ ನಂದನ ಪ್ಯಾಲೇಸ್ ತನ್ನ 32ನೇ ಶಾಖೆಯನ್ನು ಬೆನ್ನೇರುಗಟ್ಟ ರೋಡ್ ಅರಕೆರೆ ಬಳಿ ತೆರೆದಿದೆ.

ನಟ ಮತ್ತು ನಿರೂಪಕ ಗೋಲ್ಡನ್ ಸ್ಟಾರ್ ಗಣೇಶ್, ರವರು ಈ ನೂತನ ಶಾಖೆಗೆ ಚಾಲನೆ ನೀಡಿದರು. ಈ ವೇಳೆ ನಂದನ ಪ್ಯಾಲೇಸ್ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಡಾ. ಆರ್. ರವಿಚಂದರ್, ದಿ ಚಾನ್ಸರಿ ಪೆವಿಲಿಯನ್ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಕುಪ್ಪರಾಜು, ಸಂಗೀತಾ ಮೊಬೈಲ್ಸ್ ನಿರ್ದೇಶಕರಾದ ಶ್ರೀ ಸುಭಾಷ್ ಚಂದ್ರ, ಆಕ್ಸ್‌ಫರ್ಡ್ ಎಜುಕೇಷನಲ್ ಇನ್ಸ್ಟಿಟ್ಯೂಷನ್ಸ್ ಅಧ್ಯಕ್ಷರಾದ ಶ್ರೀ ಎಸ್.ಎನ್.ವಿ.ಎಲ್. ನರಸಿಂಹ ರಾಜು, ಮಾಜಿ ಉಪಮೇಯರ್ ಶ್ರೀ ರಾಮ್ಮೋಹನ್ ರಾಜು, ಆದ್ಯಾರ್ ಆನಂದ ಭವನದ ವ್ಯವಸ್ಥಾಪಕ ಶ್ರೀ ವಿಷ್ಣು ಶಂಕರ್ ಹಾಗೂ ಸಂಗೀತಾ ಮೊಬೈಲ್ ಕಂಪನಿಯ ನಿರ್ದೇಶಕರಾದ ಚಂದ್ರಧರ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಈ ವೇಳೆ ಮಾತನಾಡಿದ ನಟ ಮತ್ತು ನಿರೂಪಕ ಗೋಲ್ಡನ್ ಸ್ಟಾರ್ ಗಣೇಶ್; ಆಂಧ್ರಶೈಲಿಯ ಖಾದ್ಯಗಳಲ್ಲಿ ಹೆಚ್ಚು ಹೆಸರುವಾಸಿಯಾಗಿರುವ ನಂದನ ಪ್ಯಾಲೇಸ್; ಬೆಂಗಳೂರು ಮತ್ತು ಚೆನ್ನೈ ನಗರಗಳಲ್ಲಿ ಕಳೆದ ಮೂರು ದಶಕಗಳಿಂದ ಜನರಿಗೆ ರುಚಿಯಾದ ಆಹಾರ ಉಣಬಡಿಸುತ್ತಿದೆ. ಇದೀಗ ತನ್ನ 32ನೇ ಹೊಸ ಶಾಖೆಯನ್ನು ಬನ್ನೇರುಘಟ್ಟ ರಸ್ತೆ, ಅರಕೆರೆ ಬಳಿ ಶಾಖೆ ಆರಂಭಿಸಿದೆ. ಆ ಮೂಲಕ ಬೆಂಗಳೂರು ಬನ್ನೇರುಘಟ್ಟ ಭಾಗದ ಜನರಿಗೆ ಆಂಧ್ರ ಶೈಲಿಯ ನಾನ್ ವೆಜ್ ಖಾದ್ಯಗಳನ್ನು ಸವಿಯುವ ಅವಕಾಶ ಸಿಗಲಿದೆ. ಮುಂದೆ ಮತ್ತಷ್ಟು ಶಾಖೆಗಳನ್ನು ತೆರೆಯಲಿ ಎಂದು ಶುಭ ಹಾರೈಸಿದರು.




ಈ ಕುರಿತು ಮಾತನಾಡಿದ ನಂದನ ಪ್ಯಾಲೇಸ್ ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಡಾ. ಆರ್.ರವಿಚಂದರ್, ಗ್ರಾಹಕರು ನಮ್ಮ ಹೊಟೇಲ್ ಮೇಲಿಟ್ಟಿರುವ ವಿಶ್ವಾಸ ಮತ್ತು ನಂಬಿಕೆಯಿಂದಾಗಿ ನಾವು ಹೊಸ ಶಾಖೆಯನ್ನು ತೆರೆಯಲು ಅನುಕೂಲವಾಗುತ್ತಿದೆ. ಇದು ನಮ್ಮ 32ನೇ ಶಾಖೆಯಾಗಿದೆ. 1989 ರಿಂದ ನಾನು ಈ ಆಹಾರೋದ್ಯಮ ಕ್ಷೇತ್ರದಲ್ಲಿದ್ದೇನೆ. ನಮ್ಮಲ್ಲಿ ಮಟನ್ ಪೆಪ್ಪರ್ ಫ್ರೈ, ಗೀ ರೋಸ್ಟ್, ಫ್ರಾನ್ಸ್ ಫ್ರೈ, ಚಿಕನ್ ಬಿರಿಯಾನಿ ಸೇರಿದಂತೆ ಹಲವಾರು ಖಾದ್ಯಗಳು ಹೆಚ್ಚು ಫೇಮಸ್ ಆಗಿದೆ. ಗ್ರಾಹಕರಿಗೆ ನಾವು ಗುಣಮಟ್ಟವಾದ ರುಚಿಕರವಾದ ಖಾದ್ಯಗಳನ್ನು ನೀಡುತ್ತಿದ್ದೇವೆ. ಗ್ರಾಹಕರ ಬೇಡಿಕೆ ಅನುಗುಣವಾಗಿ ಶಾಖೆಯ ವಿಸ್ತರಣೆ ಮಾಡುತ್ತಿದ್ದೇವೆ ಎಂದರು. ಕುಟುಂಬ ಸಮೇತರಾಗಿ ಆಗಮಿಸಿ ಆಂಧ್ರ ಶೈಲಿಯ ಊಟ ಸವಿಯಬಹುದಾಗಿದೆ ಎಂದರು.

# ಅಮೆರಿಕ–ಚೀನಾ ಬಾಂಧವ್ಯಕ್ಕೆ ಹೊಸ ಅಧ್ಯಾಯ



ವಾಷಿಂಗ್ಟನ್, ಸೆ.25: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಶ್ವೇತಭವನದಲ್ಲಿ ನಡೆದ ರಾಜ್ಯ ಔತಣಕೂಟಕ್ಕೂ ಮುನ್ನ ಸೌಹಾರ್ದಯುತ ಮಾತುಗಳನ್ನು ಹಂಚಿಕೊಂಡಿದ್ದಾರೆ. ಉಭಯ ದೇಶಗಳ ನಡುವಿನ ಸಂಬಂಧದ ಮಹತ್ವ ಹಾಗೂ ಹೆಚ್ಚು ಸ್ಥಿರವಾದ ಬಾಂಧವ್ಯ ನಿರ್ಮಿಸುವ ಆಶಯವನ್ನು ಇಬ್ಬರೂ ನಾಯಕರು ವ್ಯಕ್ತಪಡಿಸಿದ್ದಾರೆ.

ಶ್ವೇತಭವನಕ್ಕೆ ಆಗಮಿಸಿದ ಷಿ ಜಿನ್‌ಪಿಂಗ್ ಮತ್ತು ಅವರ ಪತ್ನಿ ಪೆಂಗ್ ಲಿಯುವಾನ್ ಅವರನ್ನು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಪ್ರಥಮ ಮಹಿಳೆ ಮೆಲಾನಿಯಾ ಟ್ರಂಪ್ ಸ್ವಾಗತಿಸಿದರು. ಬಳಿಕ ಶ್ವೇತಭವನದ ಈಸ್ಟ್ ರೂಮ್‌ನಲ್ಲಿ ನಡೆದ ರಾಜ್ಯ ಔತಣಕೂಟದಲ್ಲಿ ಅಮೆರಿಕದ ಹಿರಿಯ ಅಧಿಕಾರಿಗಳು, ಉದ್ಯಮಿಗಳು ಹಾಗೂ ಪ್ರಮುಖ ತಂತ್ರಜ್ಞಾನ ಕಂಪನಿಗಳ ಮುಖ್ಯಸ್ಥರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಟ್ರಂಪ್, ಅಮೆರಿಕ ಮತ್ತು ಚೀನಾ ವಿಭಿನ್ನ ರಾಜಕೀಯ ವ್ಯವಸ್ಥೆಗಳನ್ನು ಹೊಂದಿದ್ದರೂ ಎರಡೂ ದೇಶಗಳ ಜನರ ನಡುವಿನ ಬಾಂಧವ್ಯ ನಿರಂತರವಾಗಿದೆ ಎಂದು ಹೇಳಿದರು. ಉಭಯ ದೇಶಗಳ ನಡುವಿನ ಸಂಬಂಧವನ್ನು ಮುಂದಿನ ಪೀಳಿಗೆಗಳ ಸಮೃದ್ಧಿ ಮತ್ತು ಭದ್ರತೆಗೆ ಪೂರಕವಾಗುವ ರೀತಿಯಲ್ಲಿ ಬೆಳೆಸಲು ಒಟ್ಟಾಗಿ ಕೆಲಸ ಮಾಡಬಹುದು ಎಂದು ಅವರು ಆಶಯ ವ್ಯಕ್ತಪಡಿಸಿದರು.

ಚೀನಾ ಪ್ರವಾಸದ ವೇಳೆ ದೊರೆತ ಆತಿಥ್ಯವನ್ನು ಸ್ಮರಿಸಿದ ಟ್ರಂಪ್, ಷಿ ಜಿನ್‌ಪಿಂಗ್ ಮತ್ತು ಅವರ ನಿಯೋಗವನ್ನು ಮತ್ತೆ ಅಮೆರಿಕಕ್ಕೆ ಸ್ವಾಗತಿಸಲು ಸಂತಸವಾಗುತ್ತಿದೆ ಎಂದರು.

ಇದೇ ವೇಳೆ ಷಿ ಜಿನ್‌ಪಿಂಗ್ ಅವರು ಅಮೆರಿಕ–ಚೀನಾ ಸಂಬಂಧಕ್ಕೆ ಹೊಸ ಅಧ್ಯಾಯ ಬರೆಯುವ ಆಶಯ ವ್ಯಕ್ತಪಡಿಸಿದರು. ನದಿ ನಿರಂತರವಾಗಿ ಹರಿಯುವಂತೆ ಇತಿಹಾಸವೂ ಮುಂದೆ ಸಾಗುತ್ತದೆ ಎಂದು ರೂಪಕವಾಗಿ ಹೇಳಿದ ಅವರು, ಎರಡೂ ದೇಶಗಳ ಜನರ ಸ್ನೇಹ ಉತ್ತಮ ಭವಿಷ್ಯಕ್ಕೆ ದಾರಿ ಮಾಡಿಕೊಡಲಿದೆ ಎಂದರು. ಪರಸ್ಪರ ಕೈಜೋಡಿಸಿ ಮುನ್ನಡೆಯುವ ಮೂಲಕ ಅಮೆರಿಕ–ಚೀನಾ ಸ್ನೇಹದ ಸುಂದರ ಹೂಗಳನ್ನು ಬೆಳೆಸೋಣ ಎಂದು ಕರೆ ನೀಡಿದರು.

ಟ್ರಂಪ್ ಅವರ ಇತ್ತೀಚಿನ ಚೀನಾ ಭೇಟಿಯನ್ನು ಉಲ್ಲೇಖಿಸಿದ ಷಿ, ಕಾರ್ಯತಂತ್ರದ ಸ್ಥಿರತೆಯನ್ನು ಆಧರಿಸಿದ ರಚನಾತ್ಮಕ ಸಂಬಂಧಕ್ಕಾಗಿ ಒಟ್ಟಾಗಿ ಕೆಲಸ ಮಾಡಲು ಉಭಯ ನಾಯಕರು ಒಪ್ಪಿಕೊಂಡಿರುವುದಾಗಿ ತಿಳಿಸಿದರು.

ಔತಣಕೂಟದಲ್ಲಿ ಆಪಲ್ ಸಿಇಒ ಟಿಮ್ ಕುಕ್, ಓಪನ್‌ಎಐ ಸಿಇಒ ಸ್ಯಾಮ್ ಆಲ್ಟ್‌ಮನ್, ಎನ್‌ವಿಡಿಯಾ ಸಿಇಒ ಜೆನ್ಸನ್ ಹುವಾಂಗ್, ಮೆಟಾ ಸಿಇಒ ಮಾರ್ಕ್ ಜುಕರ್‌ಬರ್ಗ್, ಜೂಮ್ ಸಿಇಒ ಎರಿಕ್ ಯುವಾನ್ ಸೇರಿದಂತೆ ತಂತ್ರಜ್ಞಾನ, ಹಣಕಾಸು ಮತ್ತು ಮಾಧ್ಯಮ ಕ್ಷೇತ್ರದ ಪ್ರಮುಖರು ಉಪಸ್ಥಿತರಿದ್ದರು.

# ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ 'ಆರ್ಟಿಸನ್ಸ್ ಬಜಾರ್' ಉದ್ಘಾಟನೆ; 10 ದಿನಗಳ ಕಲಾ ಮತ್ತು ಕರಕುಶಲ ಸಂಭ್ರಮಕ್ಕೆ ಚಾಲನೆ



ಬೆಂಗಳೂರು, ಸೆ. 25– ಸಾಂಪ್ರದಾಯಿಕ ಕರಕುಶಲ ಕಲೆ, ಜವಳಿ, ಕಲಾಕೃತಿಗಳು ಹಾಗೂ ಕುಶಲಕರ್ಮಿಗಳ ಉತ್ಪನ್ನಗಳನ್ನು ಒಂದೇ ವೇದಿಕೆಯಲ್ಲಿ ಪರಿಚಯಿಸುವ 'ಆರ್ಟಿಸನ್ಸ್ ಬಜಾರ್' 10 ದಿನಗಳ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಇಂದು ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರ ಕೃಪಾ ರಸ್ತೆಯಲ್ಲಿ ಚಾಲನೆ ನೀಡಲಾಯಿತು.

ಸೆಪ್ಟೆಂಬರ್ 25ರಿಂದ ಅಕ್ಟೋಬರ್ 4, 2026ರವರೆಗೆ ನಡೆಯಲಿರುವ ಈ ಮೇಳದಲ್ಲಿ ವಿವಿಧ ರಾಜ್ಯಗಳು ಮತ್ತು ಪ್ರದೇಶಗಳ ಸಾಂಪ್ರದಾಯಿಕ ಕಲೆ ಹಾಗೂ ಕರಕುಶಲ ಪರಂಪರೆಯನ್ನು ಪ್ರತಿಬಿಂಬಿಸುವ ವೈವಿಧ್ಯಮಯ ಉತ್ಪನ್ನಗಳನ್ನು ಪ್ರದರ್ಶಿಸಲಾಗುತ್ತಿದೆ. ಸಾಂಪ್ರದಾಯಿಕ ಕರಕುಶಲ ವಸ್ತುಗಳು, ಜವಳಿ, ಅಲಂಕಾರಿಕ ವಸ್ತುಗಳು, ಕಲಾಕೃತಿಗಳು ಸೇರಿದಂತೆ ಹಲವು ಬಗೆಯ ಕೈಮಗ್ಗ ಹಾಗೂ ಕೈಚಳಕದ ಉತ್ಪನ್ನಗಳು ಇಲ್ಲಿ ಲಭ್ಯವಿವೆ.

ಆರಂಭಿಕ ಕಾರ್ಯಕ್ರಮದಲ್ಲಿ ಲೇಖಕಿ ಹಾಗೂ ಸಂಪಾದಕಿ ಶ್ರೀಮತಿ ಕಿರಣ್ ಪ್ರಸಾದ್ ರಾಜನಹಳ್ಳಿ ಮತ್ತು ನಟಿ, ನಿರ್ಮಾಪಕಿ ಹಾಗೂ ಮಾಡೆಲ್ ಶುಭಾ ಪೂಂಜಾ ಉಪಸ್ಥಿತರಿದ್ದು, ಮೇಳದಲ್ಲಿನ ವಿವಿಧ ಮಳಿಗೆಗಳಿಗೆ ಭೇಟಿ ನೀಡಿ ಕುಶಲಕರ್ಮಿಗಳೊಂದಿಗೆ ಸಂವಾದ ನಡೆಸಿದರು. ಸಾಂಪ್ರದಾಯಿಕ ಕಲೆ ಮತ್ತು ಕರಕುಶಲ ವಸ್ತುಗಳಿಗೆ ದೊರೆಯುತ್ತಿರುವ ವೇದಿಕೆಯನ್ನು ಅವರು ಶ್ಲಾಘಿಸಿದರು.

ಕುಶಲಕರ್ಮಿಗಳು ತಮ್ಮ ಉತ್ಪನ್ನಗಳನ್ನು ನೇರವಾಗಿ ಗ್ರಾಹಕರಿಗೆ ಪರಿಚಯಿಸಲು ಹಾಗೂ ಮಾರಾಟ ಮಾಡಲು ವೇದಿಕೆ ಒದಗಿಸುವುದರ ಜೊತೆಗೆ, ಸಾರ್ವಜನಿಕರಿಗೆ ವೈವಿಧ್ಯಮಯ ಸಾಂಪ್ರದಾಯಿಕ ಉತ್ಪನ್ನಗಳನ್ನು ಪರಿಚಯಿಸುವುದು ಮೇಳದ ಉದ್ದೇಶವಾಗಿದೆ.

ಪ್ರತಿದಿನ ಬೆಳಗ್ಗೆ 11ರಿಂದ ಸಂಜೆ 7ರವರೆಗೆ ಮೇಳ ಸಾರ್ವಜನಿಕರಿಗಾಗಿ ತೆರೆದಿರುತ್ತದೆ. ಪ್ರವೇಶ ಉಚಿತವಾಗಿದ್ದು, ಎಲ್ಲರಿಗೂ ಮುಕ್ತವಾಗಿದೆ.

ಕಲಾಭಿಮಾನಿಗಳು, ಕುಟುಂಬಗಳು, ಶಾಪಿಂಗ್ ಪ್ರಿಯರು ಹಾಗೂ ಸಾರ್ವಜನಿಕರು ಮೇಳಕ್ಕೆ ಭೇಟಿ ನೀಡಿ ಸಾಂಪ್ರದಾಯಿಕ ಕಲೆ, ಕರಕುಶಲ ಉತ್ಪನ್ನಗಳು ಮತ್ತು ಕೈಚಳಕದ ವೈವಿಧ್ಯಮಯ ಸಂಗ್ರಹವನ್ನು ವೀಕ್ಷಿಸುವಂತೆ ಆಯೋಜಕರು ಮನವಿ ಮಾಡಿದ್ದಾರೆ.

**ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರ ಕೃಪಾ ರಸ್ತೆ, ಶಿವಾನಂದ ಸರ್ಕಲ್, ಬೆಂಗಳೂರು ? ದಿನಾಂಕ: ಸೆಪ್ಟೆಂಬರ್ 25ರಿಂದ ಅಕ್ಟೋಬರ್ 4, 2026 ಸಮಯ: ಬೆಳಗ್ಗೆ 11ರಿಂದ ಸಂಜೆ 7ರವರೆಗೆ ಪ್ರವೇಶ: ಉಚಿತ**

# ನೆತನ್ಯಾಹು ಭಾಷಣ: ನಾಲ್ಕು ಮುಸ್ಲಿಂ ರಾಷ್ಟ್ರಗಳಿಂದ ಬಹಿಷ್ಕಾರ ಇಲ್ಲ



ನ್ಯೂಯಾರ್ಕ್, ಸೆ.25: ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 81ನೇ ಅಧಿವೇಶನದಲ್ಲಿ ಭಾಷಣ ಆರಂಭಿಸುತ್ತಿದ್ದಂತೆ ಸುಮಾರು 77 ದೇಶಗಳ ಪ್ರತಿನಿಧಿಗಳು ಸಭಾಂಗಣದಿಂದ ಹೊರನಡೆದರು ಅಥವಾ ಗೈರಾಗಿದ್ದರು. ಗಾಜಾ ಯುದ್ಧ ಹಾಗೂ ಇಸ್ರೇಲ್‌ನ ಪ್ರಾದೇಶಿಕ ಮಿಲಿಟರಿ ಕಾರ್ಯಾಚರಣೆಗಳ ವಿರೋಧವಾಗಿ ಈ ಬೆಳವಣಿಗೆ ನಡೆದಿದೆ.

ಸೌದಿ ಅರೇಬಿಯಾ, ಕತಾರ್, ಈಜಿಪ್ಟ್, ಜೋರ್ಡಾನ್, ಟರ್ಕಿ, ಇರಾನ್, ಪಾಕಿಸ್ತಾನ, ಇಂಡೋನೇಷ್ಯಾ, ಮಲೇಷ್ಯಾ, ಕುವೈತ್, ಓಮನ್ ಸೇರಿದಂತೆ ಹಲವು ಮುಸ್ಲಿಂ ಬಹುಸಂಖ್ಯಾತ ರಾಷ್ಟ್ರಗಳ ಪ್ರತಿನಿಧಿಗಳು ಗೈರಾಗಿದ್ದರು ಅಥವಾ ಸಭಾಂಗಣ ತೊರೆದರು. ಆದರೆ ಯುಎಇ, ಬಹ್ರೇನ್, ಮೊರಾಕ್ಕೊ ಮತ್ತು ಅಜರ್‌ಬೈಜಾನ್ ನೆತನ್ಯಾಹು ಭಾಷಣದ ವೇಳೆ ಸಭಾಂಗಣದಲ್ಲೇ ಉಳಿದ ಪ್ರಮುಖ ಮುಸ್ಲಿಂ ಬಹುಸಂಖ್ಯಾತ ರಾಷ್ಟ್ರಗಳಾಗಿವೆ.

ಯುಎಇ, ಬಹ್ರೇನ್ ಮತ್ತು ಮೊರಾಕ್ಕೊ ಇಸ್ರೇಲ್ ಜತೆ ರಾಜ–ತಾಂತ್ರಿಕ ಸಂಬಂಧ ಹೊಂದಿರುವ ರಾಷ್ಟ್ರಗಳಾಗಿವೆ. 2020ರಲ್ಲಿ ಅಬ್ರಹಾಂ ಒಪ್ಪಂದಗಳ ಪ್ರಕ್ರಿಯೆಯ ಮೂಲಕ ಯುಎಇ ಮತ್ತು ಬಹ್ರೇನ್ ಇಸ್ರೇಲ್ ಜತೆ ಸಂಬಂಧ ಸಾಮಾನ್ಯಗೊಳಿಸಿದವು. ಮೊರಾಕ್ಕೊ ಕೂಡ ಅದೇ ವರ್ಷ ಡಿಸೆಂಬರ್‌ನಲ್ಲಿ ಇಸ್ರೇಲ್ ಜತೆ ಸಂಬಂಧ ಪುನರ್‌ಸ್ಥಾಪಿಸಿತು. ಗಾಜಾ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ಈ ರಾಷ್ಟ್ರಗಳು ಇಸ್ರೇಲ್ ಜತೆ ರಾಜತಾಂತ್ರಿಕ ಸಂಪರ್ಕವನ್ನು ಮುಂದುವರಿಸಿವೆ.

ಅಜರ್‌ಬೈಜಾನ್‌ನ ನಡೆ ವಿಭಿನ್ನವಾಗಿದ್ದು, ಅದು ಅಬ್ರಹಾಂ ಒಪ್ಪಂದದ ಭಾಗವಲ್ಲ. ಬದಲಾಗಿ ಇಸ್ರೇಲ್ ಜತೆ ದೀರ್ಘಕಾಲದ ರಕ್ಷಣಾ, ಭದ್ರತೆ, ಇಂಧನ, ವ್ಯಾಪಾರ ಮತ್ತು ತಂತ್ರಜ್ಞಾನ ಸಹಕಾರ ಹೊಂದಿದೆ. ಅಜರ್‌ಬೈಜಾನ್ ವಿದೇಶಾಂಗ ಸಚಿವಾಲಯವು 2026ರ ಜನವರಿಯಲ್ಲಿ ಉಭಯ ರಾಷ್ಟ್ರಗಳ ಸಂಬಂಧವನ್ನು 'ಕಾರ್ಯತಂತ್ರದ ಪಾಲುದಾರಿಕೆ' ಎಂದು ಬಣ್ಣಿಸಿತ್ತು. ಇಸ್ರೇಲ್‌ಗೆ ಅಜರ್‌ಬೈಜಾನ್ ಪ್ರಮುಖ ಇಂಧನ ಪೂರೈಕೆದಾರರಲ್ಲೊಂದಾಗಿದ್ದು, ರಕ್ಷಣಾ ಕ್ಷೇತ್ರದಲ್ಲೂ ಉಭಯ ರಾಷ್ಟ್ರಗಳ ನಡುವೆ ವ್ಯಾಪಕ ಸಹಕಾರವಿದೆ. ಇರಾನ್ ಜತೆ ಅಜರ್‌ಬೈಜಾನ್‌ನ ಸಂಬಂಧದಲ್ಲಿರುವ ಉದ್ವಿಗ್ನತೆಯೂ ಇಸ್ರೇಲ್ ಜತೆಗಿನ ಈ ಕಾರ್ಯತಂತ್ರದ ಬಾಂಧವ್ಯಕ್ಕೆ ಮತ್ತೊಂದು ಆಯಾಮ ನೀಡಿದೆ.

ನೆತನ್ಯಾಹು ಭಾಷಣ ಆರಂಭಿಸುವ ಮುನ್ನ ಸಭಾಂಗಣ ಖಾಲಿಯಾಗುತ್ತಿರುವುದನ್ನು ಉಲ್ಲೇಖಿಸಿ, ಹೊರಹೋದ ದೇಶಗಳ ಪ್ರತಿನಿಧಿಗಳ ವಿರುದ್ಧ ವ್ಯಂಗ್ಯಭರಿತ ಹೇಳಿಕೆ ನೀಡಿದರು. ನಂತರ ಅವರು ಗಾಜಾ ಮತ್ತು ಇರಾನ್ ಕುರಿತ ಇಸ್ರೇಲ್‌ನ ಕ್ರಮಗಳನ್ನು ಸಮರ್ಥಿಸಿಕೊಂಡರು.



ಜಿಬಿಎ ಬೆಂಗಳೂರು ಕೇಂದ್ರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ನೂತನ ಕಚೇರಿಯನ್ನು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಎಚ್‌ಎಮ್ ರೇವಣ್ಣನವರು ಉದ್ಘಾಟನೆ ಮಾಡಿದರು. ಈ ಸಮಯದಲ್ಲಿ ಜಿಬಿಎ ಅಧ್ಯಕ್ಷರಾದ ಜಿ.ಕೃಷ್ಣಪ್ಪ ಕೇಂದ್ರ ಜಿಲ್ಲಾ ಅಧ್ಯಕ್ಷರಾದ ಸಲ್ಮಾತಾಜ್ ಸದಸ್ಯರಾದ ಕೆಂಪೇಗೌಡ,ಶ್ರೀಧರ್ ನಾಯ್ಡು, ಷಣ್ಮುಗಂ ಸೈಯದ್ ಮಝರ್ ಬಬ್ಲು ಮುಂತಾದವರು ಹಾಜರಿದ್ದರು.

# ಹಿಂದೂ ಮಹಾಸಭಾ ಗಣಪತಿ ಮೆರವಣಿಗೆ ಪೊಲೀಸ್ ಸರ್ಪಗಾವಲು



ಶಿವಮೊಗ್ಗ, ಸೆ. 25–ಶಿವಮೊಗ್ಗ ನಗರದಲ್ಲಿ ಇಂದು ನಡೆಯಲಿರುವ ಹಿಂದೂ ಮಹಾಸಭಾ ಗಣಪತಿಯ ವಿಸರ್ಜನಾ ಪೂರ್ವ ಮೆರವಣಿಗೆಗೆ, ಸಾವಿರಾರು ಪೊಲೀಸರನ್ನು ಭದ್ರತಾ ಕಾರ್ಯಕ್ಕೆ ನಿಯೋಜಿಸಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ಇಲಾಖೆ ತಿಳಿಸಿದೆ.

ಈ ಕುರಿತಂತೆ ಸೆಪ್ಟೆಂಬರ್ 24 ರಂದು ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ಮಾಹಿತಿ ನೀಡಿದೆ. 2 ಜನ ಎಸ್ಪಿ, 5 ಹೆಚ್ಚುವರಿ ಎಸ್ಪಿ, 22 ಡಿವೈಎಸ್ಪಿ, 84 ಸಿಪಿಐ, 289 ಪಿಎಸ್‌ಐ ಆರ್'ಎಸ್‌ಐ, 108 ಎಎಸ್‌ಐ ಎಆರ್'ಎಸ್‌ಐ, 2134 ಹೆಚ್.ಸಿ. ಪಿಸಿ, 600 ಹೋಂ ಗಾರ್ಡ್‌ಗಳನ್ನು ಭದ್ರತಾ ಕಾರ್ಯಕ್ಕೆ ನಿಯೋಜಿಸಲಾಗುತ್ತಿದೆ.

ಇದರ ಜೊತೆಗೆ 12 ಕೆಎಸ್‌ಆರ್'ಪಿ, 10 ಡಿಎಆರ್, 2 ಕ್ಯೂಆರ್'ಟಿ, 1 ಡಿ ಸ್ವ್ಯಾಟ್, 2 ಆರ್'ಎಎಫ್, 1 ಎಸ್'ಎಎಫ್, 1 ಎಎಸ್'ಸಿ ಹಾಗೂ 7 ಅಗ್ನಿಶಾಮಕ ದಳ, 4 ಆಂಬುಲೆನ್ಸ್ ತಂಡ ಮೆರವಣಿಗೆಯ ಭದ್ರತೆಗೆ ಬಳಕೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದೆ.

ಉಳಿದಂತೆ ಮೆರವಣಿಗೆಯ ದೃಶ್ಯಾವಳಿ ಸೆರೆ ಹಿಡಿಯಲು 3500 ವಿಡಿಯೋ ಕ್ಯಾಮರಾ ಹಾಗೂ ಸಿಸಿಟಿವಿ ಮತ್ತು 12 ಡ್ರೋಣ್ ಕ್ಯಾಮರಾಗಳನ್ನು ಬಳಕೆ ಮಾಡಲಾಗುತ್ತಿದೆ ಎಂದು ಪೊಲೀಸ್ ಇಲಾಖೆ ಮಾಹಿತಿ ನೀಡಿದೆ.

# ಕೆಪಿಎಸ್‌ಸಿ ರದ್ದುಪಡಿಸುವುದಲ್ಲ, ಅಕ್ರಮಕ್ಕೆ ಕಾರಣರಾದವರ ವಿರುದ್ಧ ಕ್ರಮ ಕೈಗೊಳ್ಳಿ: ಆಮ್ ಆದ್ಮಿ ಪಾರ್ಟಿ




ಬೆಂಗಳೂರು: ಸೆ.25–ಕರ್ನಾಟಕ ಲೋಕಸೇವಾ ಆಯೋಗ ವನ್ನು ರದ್ದುಪಡಿಸುವ ಸಾಧ್ಯತೆಯನ್ನು ರಾಜ್ಯ ಸರ್ಕಾರ ಪರಿಶೀಲಿಸುತ್ತಿರುವುದನ್ನು ವಿರೋಧಿಸಿ ಆಮ್ ಆದ್ಮಿ ಪಕ್ಷದ ವತಿಯಿಂದ ಇಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಾಯಿತು.

ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ. ಸತೀಶ್ ಕುಮಾರ್ ಮಾತನಾಡಿ,

"ಕೆಪಿಎಸ್‌ಸಿಯಲ್ಲಿ ಅಕ್ರಮಗಳನ್ನು ನಡೆಸಿರುವ ಅದಕ್ಕೆ ಕಾರಣರಾದ ಅಧಿಕಾರಿಗಳು, ಮಧ್ಯವರ್ತಿಗಳು ಮತ್ತು ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಆದರೆ ಇಡೀ ಆಯೋಗವನ್ನೇ ಮುಚ್ಚುವುದು ಸಮಸ್ಯೆಗೆ ಪರಿಹಾರವಲ್ಲ. ಲೋಕ ಸೇವಾ ಆಯೋಗ ಎಂಬ ಸಾಂವಿಧಾನಿಕ ಸಂಸ್ಥೆಯ ಮೂಲಕ ಪಾರದರ್ಶಕವಾಗಿ ಸರ್ಕಾರಿ ನೇಮಕಾತಿ ನಡೆಯಬೇಕು. ಆಯೋಗದ ವ್ಯವಸ್ಥೆಯನ್ನು ಬಲಪಡಿಸುವ ಬದಲು ಅದನ್ನೇ ರದ್ದುಪಡಿಸುವ ಚಿಂತನೆ ರಾಜ್ಯದ ಲಕ್ಷಾಂತರ ಉದ್ಯೋಗಾಕಾಂಕ್ಷಿಗಳಲ್ಲಿ ಆತಂಕ ಮೂಡಿಸಿದೆ."

"ನೇಮಕಾತಿ ಅಕ್ರಮಗಳ ಕುರಿತು ಸಮಗ್ರ, ಸ್ವತಂತ್ರ ಮತ್ತು ಕಾಲಮಿತಿಯ ತನಿಖೆ ನಡೆಸಬೇಕು. ಪರೀಕ್ಷೆ ಬರೆದಿರುವ ಅಭ್ಯರ್ಥಿಗಳ ಭವಿಷ್ಯಕ್ಕೆ ಧಕ್ಕೆ ಆಗದಂತೆ ಈಗಾಗಲೇ ನಡೆಯುತ್ತಿರುವ ನೇಮಕಾತಿ ಪ್ರಕ್ರಿಯೆಗಳ ಬಗ್ಗೆ ಸರ್ಕಾರ ಸ್ಪಷ್ಟವಾದ ಮಾರ್ಗಸೂಚಿ ಪ್ರಕಟಿಸಬೇಕು. ತಪ್ಪಿತಸ್ಥರನ್ನು ರಕ್ಷಿಸುವ ಯಾವುದೇ ಪ್ರಯತ್ನಕ್ಕೂ ಅವಕಾಶ ನೀಡಬಾರದು" ಎಂದು ಸತೀಶ್ ಆಗ್ರಹಿಸಿದರು.

ಪಕ್ಷದ ಪ್ರಚಾರ ಸಮಿತಿ ಉಪಾಧ್ಯಕ್ಷ ಲಕ್ಷ್ಮಿಕಾಂತ್ ರಾವ್ ಮಾತನಾಡಿ,

"ಕೆಪಿಎಸ್‌ಸಿ ಸಂಸ್ಥೆಯನ್ನೇ ಮುಚ್ಚುವುದರಿಂದ ಪರೀಕ್ಷೆಗಳಿಗೆ ವರ್ಷಗಳ ಕಾಲ ಸಿದ್ಧತೆ ಮಾಡಿಕೊಂಡಿರುವ ಯುವಜನರ ಸಮಸ್ಯೆ ಬಗೆಹರಿಯುವುದಿಲ್ಲ. ಸರ್ಕಾರ ತನ್ನ ಆಡಳಿತಾತ್ಮಕ ವೈಫಲ್ಯಕ್ಕೆ ಕೆಪಿಎಸ್ಸಿಯನ್ನೇ ಹೊಣೆ ಮಾಡಿ ಕೈತೊಳೆದುಕೊಳ್ಳುವ ಬದಲು, ನೇಮಕಾತಿ ವ್ಯವಸ್ಥೆಯಲ್ಲಿ ಸಂಪೂರ್ಣ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸಬೇಕು."

"ರಾಜ್ಯದ ಯುವಜನರಿಗೆ ಸರ್ಕಾರಿ ಉದ್ಯೋಗಪಡೆಯುವ ಅವಕಾಶವನ್ನು ಇನ್ನಷ್ಟು ಅನಿಶ್ಚಿತಗೊಳಿಸಬಾರದು. ಕೆಪಿಎಸ್‌ಸಿಯನ್ನು ರದ್ದುಪಡಿಸುವ ಯಾವುದೇ ನಿರ್ಧಾರ ಕೈಗೊಳ್ಳುವ ಮೊದಲು ಉದ್ಯೋಗಾಕಾಂಕ್ಷಿಗಳು, ಶಿಕ್ಷಣ ತಜ್ಞರು, ಕಾನೂನು ತಜ್ಞರು ಹಾಗೂ ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯಬೇಕು. ಅಕ್ರಮದ ವಿರುದ್ಧ ಹೋರಾಟ ಮುಂದುವರಿಯಬೇಕು; ಆದರೆ ಅದರ ಹೆಸರಿನಲ್ಲಿ ಸಾಂವಿಧಾನಿಕ ನೇಮಕಾತಿ ವ್ಯವಸ್ಥೆಯನ್ನೇ ದುರ್ಬಲಗೊಳಿಸಬಾರದು. ಸರ್ಕಾರ ಏನಾದರೂ ಈ ರೀತಿಯ ನಿರ್ಣಯವನ್ನು ತೆಗೆದುಕೊಂಡಲ್ಲಿ ರಾಜ್ಯದ್ಯಂತ ಯುವಜನತೆಯ ಬೃಹತ್ ಆಂದೋಲನವನ್ನೇ ನಡೆಸಲಾಗುವುದು" ಲಕ್ಷ್ಮಿಕಾಂತ್ ರಾವ್ ಸರ್ಕಾರವನ್ನು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಘೋಷಣೆಗಳನ್ನು ಕೂಗುವ ಮೂಲಕ ಕೆಪಿಎಸ್ಸಿ ಮೂಲಕ ಸರ್ಕಾರಿ ಉದ್ಯೋಗ ಪಡೆಯಲು ಸಿದ್ಧತೆ ನಡೆಸುತ್ತಿರುವ ಯುವಜನರ ಪರವಾಗಿ ಧ್ವನಿ ಎತ್ತಲಾಯಿತು.

ಪ್ರತಿಭಟನೆಯಲ್ಲಿ ಪಕ್ಷದ ರಾಜ್ಯ ಖಜಾಂಚಿ ಪ್ರಕಾಶ್ ನೆಡಂಗಡಿ, ನಗರ ಪ್ರಧಾನ ಕಾರ್ಯದರ್ಶಿ ಜಗದೀಶ್ ಚಂದ್ರ, ಡಾ. ದಿನೇಶ್ , ಇರ್ಷಾದ್ ಪಾಷಾ, ಮಣಿಕಂಠ, ನವೀನ್ ಅಯ್ಯರ್, ಪಾಪಣ್ಣ ,ಉಮೇಶ್ ಗೌಡ, ಪುಟ್ಟಣ್ಣ ಗೌಡ ,ದಾಮೋದರ್ ಸೇರಿದಂತೆ ಅನೇಕ ನಾಯಕರುಗಳಾಗು ಕಾರ್ಯಕರ್ತರು ಭಾಗವಹಿಸಿದ್ದರು.




# ರೇಬಿಸ್ ಮುಕ್ತ ದೇಶ ನಿರ್ಮಾಣಕ್ಕೆ ಕರೆ

ಮಧುಗಿರಿ, ಸೆ. 25– 2030ರ ವೇಳೆಗೆ ದೇಶವನ್ನು ರೇಬಿಸ್ ಮುಕ್ತವನ್ನಾಗಿಸುವ ನಿಟ್ಟಿನಲ್ಲಿ ಸರ್ಕಾರದ ಜತೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಪಶು ವೈದ್ಯಾಧಿಕಾರಿ ಶೈಲೇಶ್ ಹೇಳಿದರು.

ತಾಲ್ಲೂಕಿನ ಪುರವರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪಶು ವೈದ್ಯಕೀಯ ಇಲಾಖೆ ವತಿಯಿಂದ ರೇಬಿಸ್ ರೋಗದ ತಡೆಗಟ್ಟುವಿಕೆ ಹಾಗೂ ಅದರ ನಿಯಂತ್ರಣದ ಕುರಿತು ನಡೆದ ಅಭಿಯಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ರೇಬೀಸ್ ಎಂಬುದು ಮಾರಣಾಂತಿಕ ರೋಗವಾಗಿದ್ದು ಇದರ ಬಗ್ಗೆ ಎಲ್ಲ ಮಕ್ಕಳು ತಿಳುವಳಿಕೆ ಹೊಂದುವುದು ಅತ್ಯವಶ್ಯ ಎಂದರು.

ಪ್ರತಿ ವರ್ಷ ಪ್ರಪಂಚದಾದ್ಯಂತ ಪ್ರಾಣಿಜನ್ಯ ರೋಗಗಳಿಂದ 25 ಲಕ್ಷ ಜನರು ಸಾವನ್ನಪ್ಪುತ್ತಿದ್ದಾರೆ. ಬಹುತೇಕ ಪ್ರಾಣಿಜನ್ಯ ಕಾಯಿಲೆಗಳು ಸಾಕು ಪ್ರಾಣಿಗಳಾದ ನಾಯಿ, ಬೆಕ್ಕುಗಳೊಂದಿಗಿನ ಒಡನಾಟದಲ್ಲಿರುವಾಗಲೇ ಉಂಟಾಗುತ್ತಿವೆ. ನಾಯಿ ಕಚ್ಚಿದಾಗ ಕಚ್ಚಿದ ಜಾಗವನ್ನು ನಲ್ಲಿಯಲ್ಲಿ ಬರುವ ರಭಸ ನೀರಿಗೆ 15 ನಿಮಿಷ ಒಡ್ಡಬೇಕು. ನಂತರ ಬಟ್ಟೆ ಸೋಪಿನಲ್ಲಿ ತೊಳೆದು ಗಾಯಕ್ಕೆ ಐಯೋಡಿನ್ ಇಲ್ಲವೇ ಬೆಟಡಿನ್ ನಂಜುನಾಶಕ ಹಚ್ಚಬೇಕು. ಕೂಡಲೇ ಆಸ್ಪತ್ರೆಗೆ ಹೋಗಿ ರೇಬಿಸ್ ವ್ಯಾಕ್ಸಿನ್ ಹಾಕಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕ ವಿರೂಪಾಕ್ಷಯ್ಯ, ಶಿಕ್ಷಕರಾದ ವೆಂಕಟರಮಣಪ್ಪ, ಇಂದ್ರಮ್ಮ, ಗಾಯತ್ರಿ, ಪಾರ್ವತಿ ಮತ್ತಿತರರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳು ರೇಬೀಸ್ ರೋಗ ತಡೆಗಟ್ಟುವ ಅಭಿಯಾನದ ಭಿತ್ತಿಪತ್ರ ಪ್ರದರ್ಶಿಸಿದರು.

# ಬೋರನಕಣಿವೆಯ ವಿದ್ಯಾಸಿರಿ ಶಾಲೆಯ ಮಕ್ಕಳು ಜಿಲ್ಲಾ ಮಟ್ಟಕ್ಕೆ ಆಯ್ಕೆ

ಹುಳಿಯಾರು, ಸೆ. 25– ತಾಲ್ಲೂಕು ಮಟ್ಟದ ಕ್ರೀಡಾಕೂಟದ ಬಾಲಕರ ವಾಲಿಬಾಲ್ ವಿಭಾಗದಲ್ಲಿ ಹೋಬಳಿಯ ಬೋರನಕಣಿವೆ ವಿದ್ಯಾಸಿರಿ ನ್ಯಾಷನಲ್ ಪಬ್ಲಿಕ್ ಸ್ಕೂಲ್ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



ಟೂರ್ನಿಯಲ್ಲಿ ತಂಡದ ನಾಯಕ ಅಸದ್ ಖಾನ್ ನೇತೃತ್ವದಲ್ಲಿ, ಕುಶಾಲ್.ಪಿ, ಶಶಾಂಕ್, ಹರ್ಷ, ಚಿರಾಗ್, ಕೀರ್ತಿ.ಪಿ, ಕುಶಾಲ್ ಡಿ.ಜಿ, ದುಷ್ಯಂತ್, ಅಶ್ವಿಕ್, ವಿಷ್ಣು, ಸಂತೋಷ್ ಹಾಗೂ ಕುಶಾಲ್ ಅತ್ಯುತ್ತಮ ಪ್ರದರ್ಶನ ಪ್ರದರ್ಶಿಸಿ ಶಾಲೆಗೆ ಕೀರ್ತಿ ತಂದಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಶಾಲೆಯ ಮುಖ್ಯ ಶಿಕ್ಷಕಿ ಆಶಾ, ಕಾರ್ಯದರ್ಶಿ ಕುಮಾರ್, ಅಧ್ಯಕ್ಷರಾದ ಕಾಮಕ್ಷಮ್ಮ, ಮಾರ್ಗದರ್ಶಕ ಶಿಕ್ಷಕ ದೀಕ್ಷಿತ್ ಹಾಗೂ ತಂಡದ ಮ್ಯಾನೇಜರ್‌ಗಳಾದ ಭೂತರಾಜು ಮತ್ತು ರೇಖಾ ಅವರು ಹರ್ಷ ವ್ಯಕ್ತಪಡಿಸಿ, ಅಭಿನಂದನೆ ಸಲ್ಲಿಸಿದ್ದಾರೆ. ಅಲ್ಲದೆ, ಮುಂಬರುವ ಜಿಲ್ಲಾ ಮಟ್ಟದ ಕ್ರೀಡಾ ಕೂಟದಲ್ಲೂ ಇದೇ ರೀತಿಯ ಉತ್ತಮ ಪ್ರದರ್ಶನ ನೀಡಿ ಯಶಸ್ಸು ಸಾಧಿಸುವಂತೆ ಶುಭ ಹಾರೈಸಿದ್ದಾರೆ.

# ಆರೀಫ್ ಶಾ ಖಾದ್ರಿ ದರ್ಗಾದಲ್ಲಿ ಜಂಡ ಆಚರಣೆ



ಸಿರಾ, ಸೆ. 25– ಐತಿಹಾಸಿಕ ಆರೀಫ್ ಶಾ ಖಾದ್ರಿ ದರ್ಗಾದ ಉರುಸ್ ಮೈದಾನದಲ್ಲಿ ಜಂಡ ಆಚರಣೆಯನ್ನು ಅದ್ದೂರಿಯಾಗಿ ನೆರವೇರಿಸಲಾಯಿತು.

ಕರ್ನಾಟಕ ಸೇರಿದಂತೆ ಆಂಧ್ರ ಪ್ರದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ದರ್ಗಾದಲ್ಲಿ ಪ್ರಾರ್ಥನೆ ಸಲ್ಲಿಸಿ, ಹರಕೆ ತೀರಿಸಿದರು.

ಜಂಡ ಆಚರಣೆಯ ಹಿನ್ನೆಲೆಯಲ್ಲಿ ದರ್ಗಾ ಆವರಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಭಕ್ತರ ದಂಡೇ ಹರಿದು ಬಂದಿತ್ತು. ಭಕ್ತರ ಅಪಾರ ಸಂಖ್ಯೆಯಿಂದಾಗಿ ನಗರದ ಮಧುಗಿರಿ ರಸ್ತೆಯಲ್ಲಿ ಕಿಲೋಮೀಟರ್‌ಗಟ್ಟಲೆ ಜನಸಂದಣಿ ಕಂಡುಬಂದಿದ್ದು, ಉರುಸ್ ಮೈದಾನವು ಜನರಿಂದ ಕಿಕ್ಕಿರಿದು ತುಂಬಿತ್ತು.

ದೂರದ ಊರುಗಳಿಂದ ಆಗಮಿಸಿದ ಭಕ್ತರು ದರ್ಗಾದಲ್ಲಿ ಪ್ರಾರ್ಥನೆ ಸಲ್ಲಿಸಿ, ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಹರಕೆಗಳನ್ನು ತೀರಿಸಿದರು. ಜಂಡ ಆಚರಣೆಯ ಅಂಗವಾಗಿ ದರ್ಗಾ ಆವರಣದಲ್ಲಿ ಭಕ್ತಿಭಾವದ ವಾತಾವರಣ ಮನೆ ಮಾಡಿತ್ತು. ವಿವಿಧ ಭಾಗಗಳಿಂದ ಆಗಮಿಸಿದ್ದ ಭಕ್ತರು ಧಾರ್ಮಿಕ ಕಾರ್ಯಕ್ರಮದಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು.

ಜಂಡ ಆಚರಣೆಯ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಪೊಲೀಸ್ ಇಲಾಖೆ ವತಿಯಿಂದ ಬಿಗಿ ಬಂದೋ ಬಸ್ತ್ ಕೈಗೊಳ್ಳಲಾಗಿತ್ತು. ಸಿರಾ ಡಿವೈಎಸ್ಪಿ ಬಿ.ಕೆ. ಶೇಖರ್ ಅವರ ನೇತೃತ್ವದಲ್ಲಿ ನಗರ ಸಿಪಿಐ ಪ್ರವೀಣ್‌ಕುಮಾರ್ ಅವರ ಮುಂದಾಳತ್ವದಲ್ಲಿ ಸೂಕ್ತ ಪೊಲೀಸ್ ಭದ್ರತೆ ಒದಗಿಸಲಾಗಿತ್ತು.

ಸಾವಿರಾರು ಭಕ್ತರು ಪಾಲ್ಗೊಂಡಿದ್ದ ಈ ಧಾರ್ಮಿಕ ಕಾರ್ಯಕ್ರಮದಲ್ಲಿ ನಗರದ ವಿವಿಧ ಮಸೀದಿಗಳ ಮುತ್ತವಲ್ಲಿಗಳು, ಮುಜಾವರ್‌ಗಳು, ಧಾರ್ಮಿಕ ಮುಖಂಡರು ಹಾಗೂ ಹಲವು ಗಣ್ಯರು ಉಪಸ್ಥಿತರಿದ್ದರು.

ಐತಿಹಾಸಿಕ ಆರೀಫ್ ಶಾ ಖಾದ್ರಿ ದರ್ಗಾದ ಜಂಡ ಆಚರಣೆ–ಯು ಸಿರಾ ನಗರದ ಧಾರ್ಮಿಕ ಪರಂಪರೆ ಹಾಗೂ ಸೌಹಾರ್ದತೆಯ ವಾತಾವರಣಕ್ಕೆ ಸಾಕ್ಷಿಯಾಯಿತು. ವಿವಿಧ ಭಾಗಗಳಿಂದ ಆಗಮಿಸಿದ ಭಕ್ತರ ಉಪಸ್ಥಿತಿಯಿಂದ ಉರುಸ್ ಮೈದಾನದಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿತ್ತು.

# ವಿದ್ಯಾನಿಧಿ ವಿ-ಮಾಸ್ಟರ್‌ಮೈಂಡ್ ಸ್ಕಾಲರ್‌ಶಿಪ್ ಪರೀಕ್ಷೆ

ತುಮಕೂರು, ಸೆ. 25– ವಿ ಮಾಸ್ಟರ್ ಮೈಂಡ್ ಪರೀಕ್ಷೆಯು 10ನೇ ತರಗತಿ ವಿದ್ಯಾರ್ಥಿಗಳಿಗೆ ವಿಷಯವನ್ನು ಅರ್ಥ ಮಾಡಿಕೊಳ್ಳುವುದರ ಜತೆಗೆ ಮುಂಬರುವ ಬೋರ್ಡ್ ಪರೀಕ್ಷೆಗಳಿಗೆ ಉತ್ತಮ ಸಿದ್ಧತೆ ಮಾಡಿಕೊಳ್ಳಲು ಸಹಕಾರಿಯಾಗಲಿದೆ. ಸ್ಪರ್ಧಾತ್ಮಕ ಪರೀಕ್ಷಾ ವಾತಾವರಣದ ಅನುಭವವು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ಹಾಗೂ ಭವಿಷ್ಯದ ಶೈಕ್ಷಣಿಕ ಸವಾಲುಗಳನ್ನು ಎದುರಿಸಲು ನೆರವಾಗಲಿದೆ ಎಂದು ವಿದ್ಯಾವಾಹಿನಿ ಸಮೂಹ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಎನ್.ಬಿ.ಪ್ರದೀಪ್ ಕುಮಾರ್ ಹೇಳಿದರು.

ನಗರದ ವಿದ್ಯಾನಿಧಿ ಕಾಲೇಜಿನಲ್ಲಿ ವಿದ್ಯಾರ್ಥಿಗಳಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಅವರ ಶೈಕ್ಷಣಿಕ ಸಾಮರ್ಥ್ಯವನ್ನು ಬೆಳೆಸುವ ಉದ್ದೇಶದಿಂದ ನವೆಂಬರ್ 15 ರಂದು ಹಮ್ಮಿಕೊಂಡಿರುವ ವಿ?ಮಾಸ್ಟರ್ ಮೈಂಡ್–26ರ ಬ್ರೋಷರ್ ಅನಾವರಣಗೊಳಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಪ್ರತಿಭೆ ಇದೆ. ಆದರೆ ಆ ಪ್ರತಿಭೆಯನ್ನು ಗುರುತಿಸಲು ಸೂಕ್ತ ಅವಕಾಶ ಅಗತ್ಯ ಎಂಬ ಆಶಯದೊಂದಿಗೆ ಆರಂಭಗೊಂಡ ವಿ?ಮಾಸ್ಟರ್‌ಮೈಂಡ್ ಪರೀಕ್ಷೆ ಇಂದು ರಾಜ್ಯದ ಸಾವಿರಾರು ವಿದ್ಯಾರ್ಥಿಗಳನ್ನು ತಲುಪಿರುವ ಶೈಕ್ಷಣಿಕ ವೇದಿಕೆಯಾಗಿ ಬೆಳೆದಿದೆ. ಈ ಬೆಳವಣಿಗೆಯ ಹಿಂದೆ ಸಂಸ್ಥೆಯ ದೂರದೃಷ್ಟಿ, ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಹಾಗೂ ಶಿಕ್ಷಣ ಕ್ಷೇತ್ರದ ಗಣ್ಯರ ಸಹಕಾರವಿದೆ ಎಂದರು.

ವಿ–ಮಾಸ್ಟರ್ ಮೈಂಡ್‌ನ ಹಿಂದಿನ ವರ್ಷಗಳ ಸಾಧಕರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿಯೂ ಉತ್ತಮ ಫಲಿತಾಂಶ ಗಳಿಸಿರುವುದು ಪರೀ–ಕ್ಷೆಯ ಶೈಕ್ಷಣಿಕ ಮಹತ್ವವನ್ನು ಹೆಚ್ಚಿಸಿದೆ. ಕರ್ನಾಟಕದಾದ್ಯಂತ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಭಾಗವಹಿಸಬಹುದಾಗಿದ್ದು, ರಾಜ್ಯ ಪಠ್ಯಕ್ರಮ, ಸಿಬಿಎಸ್‌ಇ ಹಾಗೂ ಐಸಿಎಸ್‌ಇ ಪಠ್ಯಕ್ರಮಗಳಿಗೆ ಅನುಗುಣವಾಗಿ ಮೂರು ಪ್ರತ್ಯೇಕ ಪ್ರಶ್ನೆ ಪತ್ರಿಕೆಗಳೊಂದಿಗೆ ಪರೀಕ್ಷೆ ನಡೆಸಲಾಗುವುದು ಎಂದರು. ಈ ವರ್ಷ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಮತ್ತಷ್ಟು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಒಟ್ಟು 15 ಲಕ್ಷ ರೂ. ಮೌಲ್ಯದ ವೋಚರ್‌ಗಳನ್ನು ಬಹುಮಾನವಾಗಿ ನೀಡಲಾಗುತ್ತಿದೆ. ಮೊದಲ ಮೂರು ಸ್ಥಾನಗಳ ವಿಜೇತರಿಗೆ ತಲಾ 1 ಲಕ್ಷ ರೂ. ಮೌಲ್ಯದ ವೋಚರ್, ಮುಂದಿನ ಐದು ಸ್ಥಾನಗಳ ವಿಜೇತರಿಗೆ ತಲಾ 50 ಸಾವಿರ ಹಾಗೂ ಮೂರನೇ ಹಂತದ ಐದು ಸ್ಥಾನಗಳ ವಿಜೇತರಿಗೆ ತಲಾ 30 ಸಾವಿರ ರೂ. ಮೌಲ್ಯದ ವೋಚರ್ ನೀಡಲಾಗುವುದು. ಅಲ್ಲದೆ, ಪ್ರತಿ ಶಾಲೆಯ, ಶಾಲಾ ಮಟ್ಟದ ಅಗ್ರಸ್ಥಾನ ಪಡೆದ ವಿದ್ಯಾರ್ಥಿಗಳಿಗೆ 10 ಸಾವಿರ ರೂ. ಮೌಲ್ಯದ ವೋಚರ್ ನೀಡಲಾಗುವುದು ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.



ವಿದ್ಯಾರ್ಥಿಗಳು ವಿದ್ಯಾನಿಧಿಯ ಅಧಿಕೃತ ಕಾಲೇಜು ವೆಬ್‌ಸೈಟ್ ಮೂಲಕ ಸುಲಭವಾಗಿ ನೋಂದಾಯಿಸಿಕೊಳ್ಳಬಹುದಾಗಿದೆ. ನೋಂದಣಿ ಪೂರ್ಣಗೊಂಡ ಬಳಿಕ ವಿದ್ಯಾರ್ಥಿಗಳಿಗೆ ನೋಂದಣಿ ಸಂಖ್ಯೆಯನ್ನು ಎಸ್‌ಎಂಎಸ್ ಹಾಗೂ ವಾಟ್ಸಾಪ್ ಮೂಲಕ ಕಳುಹಿಸಲಾಗುತ್ತದೆ. ಪರೀಕ್ಷೆಯ ಫಲಿತಾಂಶವನ್ನು ವಿದ್ಯಾನಿಧಿಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಆಸಕ್ತ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ಕಾಲೇಜಿನ ಸಂಪರ್ಕ ಸಂಖ್ಯೆ 9844857419, 9380345722, 7019781264ನ್ನು ಸಂಪರ್ಕಿಸಬಹುದಾಗಿದೆ.

# ಸಹಕಾರ ಸಂಘದ ಬಲವರ್ಧನೆಗೆ ಸದಸ್ಯರ ಸಹಕಾರ ಮುಖ್ಯ

ತಿಪಟೂರು, ಸೆ. 25– ನಗರದ ಗುರುಕುಲ ಕಲ್ಯಾಣ ಮಂದಿರದಲ್ಲಿ ನಂದಿನಿ ಹಾಲು ಉತ್ಪಾದಕರ ಸೌಹಾರ್ದ ಸಹಕಾರ ಸಂಘದ 19ನೇ ವರ್ಷದ ಸಾಮಾನ್ಯ ಸಭೆ ನಡೆಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ತ್ರಿಯಂಬಕ ಮಾತನಾಡಿ, ಸಂಘದ ಪ್ರತಿಯೊಬ್ಬ ಸದಸ್ಯರು ಸಂಘದೊಂದಿಗೆ ನಿರಂತರವಾಗಿ ವ್ಯವಹರಿಸುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕಾರ ನೀಡಬೇಕು. ಸದಸ್ಯರು ಸಂಘದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸಂಘವನ್ನು ಮತ್ತಷ್ಟು ಬಲಿಷ್ಟಗೊಳಿಸಲು ಕೈಜೋಡಿಸಬೇಕು, ಸಂಘದ ಷೇರುದಾರರ ಆರ್ಥಿಕ ಅನುಕೂಲಕ್ಕಾಗಿ ಸಾರ್ವಜನಿಕ ಆಸ್ಪತ್ರೆಯ ಪಕ್ಕದಲ್ಲಿ ನಿವೇಶನದಲ್ಲಿ ಕಟ್ಟಡ ಕಾಮಗಾರಿ ನಡೆಯುತ್ತಿದೆ ಎಂದರು.

ಸಂಘದ ವ್ಯವಹಾರವನ್ನು ಹೆಚ್ಚಿಸುವುದರ ಜತೆಗೆ ಸದಸ್ಯರಿಗೆ ಅಗತ್ಯವಾದ ಸೇವೆಗಳನ್ನು ಪರಿಣಾಮಕಾರಿಯಾಗಿ ಒದಗಿಸುವ ಕುರಿತು ಸಲಹೆ–ಸೂಚನೆಗಳನ್ನು ಪಡೆಯಲಾಯಿತು.

ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಎಚ್.ಎಸ್. ಸಿದ್ದರಾಮಯ್ಯ, ದಕ್ಷಿಣಮೂರ್ತಿ ಸೇರಿದಂತೆ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ.ಪಿ.ಕುಸುಮ ಮತ್ತಿತರರು ಉಪಸ್ಥಿತರಿದ್ದರು.

ಸಂಘದ ಸದಸ್ಯರು ಹಾಗೂ ಹಾಲು ಉತ್ಪಾದಕರು ಸಭೆಯಲ್ಲಿ ಭಾಗವಹಿಸಿ ವಿವಿಧ ವಿಷಯಗಳ ಕುರಿತು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.



# ಹುಳಿಯಾರು ಪ.ಪಂ. ಕಸ ವಿಲೇವಾರಿ ಘಟಕಕ್ಕೆ ಭೂಮಿ ಮಂಜೂರು

ಹುಳಿಯಾರು, ಸೆ. 25– ಇಲ್ಲಿನ ಪಟ್ಟಣ ಪಂಚಾಯ್ತಿ ಕಸ ವಿಲೇವಾರಿ ಘಟಕಕ್ಕೆ ಸಮೀಪವಿರುವ ಹೊಸಹಳ್ಳಿ ಕೈಮರ ಬಳಿ ಕೆರೆಸೂರಗೊಂಡನಹಳ್ಳಿ ಸರ್ವೆ ನಂಬರ್ 32 ರಲ್ಲಿ 5.10 ಎಕರೆ ಭೂಮಿ ಮಂಜೂರು ಮಾಡಿ ಮಂಜೂರಾತಿ ಪತ್ರ ಹಸ್ತಾಂತರಿಸಲಾಯಿತು. 5.10 ಎಕರೆ ಜಮೀನಿನಲ್ಲಿ 4 ಎಕರೆ ಪ್ರದೇಶವನ್ನು ಘನತ್ಯಾಜ್ಯ ವಸ್ತು ವಿಲೇವಾರಿ ಘಟಕ ನಿರ್ಮಾಣಕ್ಕೂ ಮತ್ತು 1 ಎಕರೆ 10 ಕುಂಟೆ ಜಮೀನನ್ನು ತ್ಯಾಜ್ಯ ನೀರು ಸಂಸ್ಕರಣೆ ಮಾಡಲು ಮೀಸಲಿಡಲಾಗಿದೆ.

ಹುಳಿಯಾರು ಪಟ್ಟಣ ಪಂಚಾಯ್ತಿ ಅಧ್ಯಕ್ಷೆ ಪ್ರೀತಿ ರಾಘವೇಂದ್ರ ಅವರು ಉಪತಹಶೀಲ್ದಾರ್ ವಿನೂತ ಅವರಿಂದ ಮಂಜೂರಾತಿ ಪತ್ರ ಪಡೆದು ಮಾತನಾಡಿ, ಹುಳಿಯಾರು ಪಂಚಾಯ್ತಿಯ ಕಸ ವಿಲೇವಾರಿ ಘಟಕ ಇಲ್ಲದೆ ನಿತ್ಯ ಸಾವಿರಾರೂ ರೂ. ವೆಚ್ಚ ಮಾಡಿ ಚಿಕ್ಕನಾಯಕನಹಳ್ಳಿ ಘಟಕ–ಕ್ಕೆ ಕಳುಹಿಸಬೇಕಿತ್ತು. ಇದರಿಂದ ಪಂಚಾಯ್ತಿ ನಷ್ಟವೇ ವಿನಃ ಆದಾಯ ಇರಲಿಲ್ಲ. ಈಗ ಭೂಮಿ ಕೊಟ್ಟಿರುವುದರಿಂದ ಹಣ ಮತ್ತು ಪೌರ ಕಾರ್ಮಿಕರ ಸಮಯ ಎರಡೂ ಉಳಿದಿದೆ. ನಮ್ಮ ಕಾಲದಲ್ಲೇ ಮಂಜೂರು ಆಗಿರುವುದು ಅತ್ಯಂತ ಸಂತಸ ತಂದಿದೆ. ಈ ಯೋಜನೆಗೆ ಸಹಕರಿಸಿದ ಶಾಸಕರು, ಜಿಲ್ಲಾಧಿಕಾರಿ, ತಹಶೀಲ್ದಾರ್ ಅವರಿಗೆ ವಿಶೇಷ ಧನ್ಯವಾದಗಳನ್ನು ಮತ್ತು ಕೃತಜ್ಞತೆಗಳನ್ನು ಸಲ್ಲಿಸುವುದಾಗಿ ತಿಳಿಸಿದರು.

ಇಂಜಿನಿಯರ್ ಮಂಜುನಾಥ್ ಮಾತನಾಡಿ,



2018 ರಿಂದಲೂ ಪಟ್ಟಣ ಪಂಚಾಯ್ತಿಗೆ ಘನತ್ಯಾಜ್ಯ ವಿಲೇವಾರಿ ಘಟಕ ನಿರ್ಮಿಸಲು ಸೂಕ್ತ ಜಾಗದ ಕೊರತೆ ಇತ್ತು. ಇದೀಗ ಶಾಸಕರು ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಆಡಳಿತದ ವಿಶೇಷ ಮುತುವರ್ಜಿಯಿಂದ ಜಾಗ ದೊ–ರೆತಿದ್ದು, ಸ್ಥಳೀಯ ಆಡಳಿತಕ್ಕೆ ನೆರವಾಗಿದೆ. ಇಲ್ಲಿ ಪಟ್ಟಣದಲ್ಲಿ ಉತ್ಪತ್ತಿಯಾಗುವ ಕಸವನ್ನು ಆಧುನಿಕ ಯಂತ್ರೋಪಕರಣಗಳನ್ನು ಬಳಸಿ ವೈಜ್ಞಾನಿಕವಾಗಿ ಸಂಸ್ಕರಿಸಲಾಗುತ್ತದೆ. ಇದರ ಮೂಲಕ ಪ್ಲಾಸ್ಟಿಕ್, ಹಸಿ ಕಸ ಹಾಗೂ ಒಣ ಕಸವನ್ನು ಪ್ರತ್ಯೇಕವಾಗಿ ವಿಂಗಡಿಸಿ ಸಂಸ್ಕರಣೆ ಮಾಡಲಾಗುವುದು. ಸಂಸ್ಕರಣೆಯ ಬಳಿಕ ಉತ್ಪತ್ತಿಯಾಗುವ ಗೊಬ್ಬರವನ್ನು ರೈತರಿಗೆ ರಿಯಾಯಿತಿ ದರದಲ್ಲಿ ವಿತರಿಸಲು ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಮಂಜುನಾಥ್, ಪರಿಸರ ಅಧಿಕಾರಿ ಚಂದ್ರಶೇಖರ್ ಮತ್ತಿತರರು ಉಪಸ್ಥಿತರಿದ್ದರು.

# ಹಾಲಿನ ಪ್ರೋತ್ಸಾಹ ಧನ 10 ರೂ.ಗೆ ಹೆಚ್ಚಿಸಲು ಒತ್ತಾಯ




ಚಿಕ್ಕನಾಯಕನಹಳ್ಳಿ, ಸೆ. 25– ಸರ್ಕಾರ ಹಾಲು ಉತ್ಪಾದಕರಿಗೆ ನೀಡುತ್ತಿರುವ ಪ್ರತಿ ಲೀಟರ್‌ಗೆ 5 ರೂ ಪ್ರೋತ್ಸಾಹ ಧನವನ್ನು 10 ರೂ.ಗಳಿಗೆ ಹೆಚ್ಚಿಸುವುದರ ಜತೆಗೆ ಹಾಲಿನ ಖರೀದಿ ದರವನ್ನೂ ಹೆಚ್ಚಿಸಬೇಕು ಎಂದು ತುಮಕೂರು ಹಾಲು ಒಕ್ಕೂಟದ ನಿರ್ದೇಶಕ ಬುಳ್ಳೇನಹಳ್ಳಿ ಶಿವಪ್ರಕಾಶ್ ಆಗ್ರಹಿಸಿದರು.

ತಾಲ್ಲೂಕಿನ ಹೊನ್ನೇಬಾಗಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ನಡೆದ ಗುಂಪು ರಾಸು ವಿಮಾ ಯೋಜನೆಯ ಉದ್ಘಾಟನೆ ಹಾಗೂ ರಾಸುಗಳ ಕಿವಿಗಳಿಗೆ ಓಲೆ ಹಾಕುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಹೈನುಗಾರಿಕೆಯ ನಿರ್ವಹಣಾ ವೆಚ್ಚ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಹಾಲಿನ ದರ ಕಡಿಮೆ ಇದೆ. ಹೀಗಾಗಿ ಹಾಲು ಉತ್ಪಾದಕರಿಗೆ ಸಮರ್ಪಕ ಬೆಲೆ ದೊರೆಯುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು. ಎಂದರು.

ಹಾಲಿನ ದರ ಹಾಗೂ ಪ್ರೋತ್ಸಾಹ ಧನ ಹೆಚ್ಚಳಕ್ಕೆ ಆಗ್ರಹಿಸಿ ರಾಜ್ಯದ 17 ಹಾಲು ಒಕ್ಕೂಟಗಳ ವತಿಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆಗೆ ಕರೆ ನೀಡಲಾಗಿದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನಿಂದ ಸುಮಾರು 1,200 ಹಾಲು ಉತ್ಪಾದಕರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಮುಖ್ಯಮಂತ್ರಿ ಅವರು ಪ್ರತಿಭಟನಾನಿರತ ಹಾಲು ಉತ್ಪಾದಕರೊಂದಿಗೆ ಮಾತುಕತೆ ನಡೆಸಿ ಅವರ ಬೇಡಿಕೆಗಳನ್ನು ಆಲಿಸಬೇಕು ಎಂದು ಒತ್ತಾಯಿಸಿದರು.

ತಾಲ್ಲೂಕಿನಲ್ಲಿ 20 ಸಾವಿರ ರಾಸುಗಳಿಗೆ ಗುಂಪು ವಿಮೆ ಮಾಡಿಸುವ ಗುರಿ ಹೊಂದಲಾಗಿದೆ. ರಾಸುಗಳ ಸಾಮರ್ಥ್ಯಕ್ಕನುಗುಣವಾಗಿ 10 ಸಾವಿರದಿಂದ 75 ಸಾವಿರದವರೆಗೆ ವಿಮಾ ಸೌಲಭ್ಯ ಕಲ್ಪಿಸಲಾಗುತ್ತಿದೆ. ಕಳೆದ ವರ್ಷ 18,632 ರಾಸುಗಳು ವಿಮಾ ಸೌಲಭ್ಯ ಪಡೆದಿದ್ದು, 282 ರಾಸುಗಳು ಮೃತಪಟ್ಟ ಹಿನ್ನೆಲೆಯಲ್ಲಿ ರೈತರಿಗೆ ಸುಮಾರು 1.90 ಕೋಟಿ ರೂ. ಪರಿಹಾರ ನೀಡಲಾಗಿದೆ ಎಂದು ಅವರು ತಿಳಿಸಿದರು.

ಗುಂಪು ರಾಸು ವಿಮಾ ಯೋಜನೆಯಲ್ಲಿ ಹಾಲು ಉತ್ಪಾದಕರು ಶೇ.30ರಷ್ಟು ಮೊತ್ತವನ್ನು ಭರಿಸಿದರೆ, ತುಮಕೂರು ಹಾಲು ಒಕ್ಕೂಟ ಶೇ.50 ಹಾಗೂ ತುಮುಲ್ ಟ್ರಸ್ಟ್ ಶೇ.20ರಷ್ಟು ಮೊತ್ತವನ್ನು ಭರಿಸುತ್ತದೆ. ಕೆಲವು ಆರ್ಥಿಕವಾಗಿ ಸದೃಢವಾಗಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳು ರೈತರ ಶೇ.30ರ ಪಾಲಿನ ವೆಚ್ಚವನ್ನೂ ಭರಿಸುತ್ತಿವೆ ಎಂದರು.

ತುಮುಲ್ ಟ್ರಸ್ಟ್ ಮೂಲಕ ಹಾಲು ಉತ್ಪಾದಕರು ಮೃತಪಟ್ಟಲ್ಲಿ 50 ಸಾವಿರ ನೆರವು, ಹುಲ್ಲಿನ ಬಣವೆಗೆ ಬೆಂಕಿ ಬಿದ್ದರೆ 15 ಸಾವಿರ ಪರಿಹಾರ ನೀಡಲಾಗುತ್ತಿದೆ. ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಗುತ್ತಿದ್ದು, ಜಿಲ್ಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ 10 ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ಹಾಲು ಉತ್ಪಾದಕರಿಗೆ ಶಸ್ತ್ರಚಿಕಿತ್ಸೆ ಅಗತ್ಯವಾದಲ್ಲಿ 25 ಸಾವಿರದವರೆಗೆ ವೈದ್ಯಕೀಯ ವೆಚ್ಚ ಭರಿಸಲಾಗುವುದು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ 2 ಸಾವಿರ ಪ್ರೋತ್ಸಾಹ ಧನ ನೀಡಲಾಗುತ್ತಿದೆ ಎಂದು ಅವರು ವಿವರಿಸಿದರು.

ಕಾರ್ಯಕ್ರಮದಲ್ಲಿ ಹೊನ್ನೇಬಾಗಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಯತೀಶ್, ಕಾರ್ಯದರ್ಶಿ ಬಸವರಾಜು, ತುಮುಲ್ ಪಶುವೈದ್ಯ ಸಿದ್ದುಗೌಡ, ತಾಲ್ಲೂಕು ಮುಖ್ಯಸ್ಥ ಮೋಹನಕುಮಾರ ಮತ್ತಿತರರು ಭಾಗವಹಿಸಿದ್ದರು.

# ಕೃಷಿ ಸಾಲ ಮನ್ನಾಕ್ಕೆ ರಾಜ್ಯ ರೈತ ಸಂಘ ಒತ್ತಾಯ

ಮಧುಗಿರಿ, ಸೆ. 25– ರೈತರ ಕೃಷಿ ಸಾಲ ಸಂಪೂರ್ಣ ಮನ್ನಾ ಮತ್ತು ಬ್ಯಾಂಕ್‌ಗಳು ಮತ್ತು ಮೈಕ್ರೋ ಫೈನಾನ್ಸ್‌ಗಳ ಸಾಲ ವಸೂಲಾತಿಗೆ ತಡೆ ಹಾಕುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಒತ್ತಾಯಿಸುತ್ತದೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜೆ.ಸಿ. ಶಂಕರಪ್ಪ ತಿಳಿಸಿದರು.



ಪಟ್ಟಣದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ನಡೆದ ಪ್ರತಿಭಟನಾ ಮೆರವಣಿಗೆ ನಂತರ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ಕೃಷಿ ಪಂಪ್‌ಸೆಟ್‌ಗಳಿಗೆ ದಿನಕ್ಕೆ 7 ಗಂಟೆ ವಿದ್ಯುತ್ ನೀಡಬೇಕು. ಹೇಮಾವತಿ ಯೋಜನೆಯಿಂದ ಮಧುಗಿರಿ ಮತ್ತು ಕೊರಟಗೆರೆ ತಾಲ್ಲೂಕುಗಳಿಗೆ ತಲಾ 0.5 ಟಿಎಂಸಿ ಯಂತೆ ಕೆರೆಗಳಿಗೆ ನೀರು ಬಿಡಬೇಕು. ಎತ್ತಿನಹೊಳೆ ಯೋಜನೆಯನ್ನು ಒಂದು ತಿಂಗಳೊಳಗೆ ಪೂರ್ಣಗೊಳಿಸಿ ಕೆರೆಗಳಿಗೆ ನೀರು ಹರಿಸಬೇಕು. ಹೋಬಳಿಗೊಂದು ಗೋಶಾಲೆ ತೆರೆಯಬೇಕು. ಮೇವು ಖರೀದಿಸಿ ಜಾನುವಾರುಗಳನ್ನು ಉಳಿಸಿಕೊಡಬೇಕು. ಜಿಲ್ಲೆಯ ಎಲ್ಲ ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿದ್ದು ಬರ ಪರಿಹಾರವಾಗಿ ಎಕರೆಗೆ 20 ಸಾವಿರ ನೀಡಬೇಕು. ಬರಗಾಲದ ಹಿನ್ನೆಲೆಯಲ್ಲಿ ಜನರಿಗೆ ಉಚಿತವಾಗಿ ಅಕ್ಕಿ, ರಾಗಿ ಹಂಚಿಕೆ ಜತೆಗೆ ಗೋಧಿ, ರವೆ, ಅಡುಗೆ ಎಣ್ಣೆ ಮುಂತಾದ ಜೀವನಾವಶ್ಯಕ ವಸ್ತುಗಳನ್ನು ರಿಯಾಯಿತಿ ದರದಲ್ಲಿ ಪೂರೈಸಬೇಕು ಎಂದು ಆಗ್ರಹಿಸಿದರು.

ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಉದ್ಯೋಗ ಖಾತರಿಯನ್ನು ಬಲಪಡಿಸಿ ಗ್ರಾಮೀಣ ಮಟ್ಟದಲ್ಲಿ ಉದ್ಯೋಗ ನೀಡಬೇಕು. ಹಾಲಿನ ದರ ಲೀಟರ್ ಗೆ 50 ರೂ. ನೀಡಬೇಕು. ಹತ್ತಿ ಬೀಜದ ಕಂಪನಿಗಳು ಎರಡು ವರ್ಷಗಳಿಂದ ಉಳಿಸಿಕೊಂಡಿರುವ ರೈತರ ಬಾಕಿ ಹಣವನ್ನು ಕೂಡಲೇ ಪಾವತಿಸಬೇಕು. ಹುಣಸೆ ಅಭಿವೃದ್ಧಿ ಮಂಡಳಿ ರಚಿಸಿ ಹುಣಸೆ ಬೆಳೆಗಾರರನ್ನು ರಕ್ಷಿಸಿ ಸರ್ವರ ಸಮಸ್ಯೆಗೆ ಪರಿಹಾರ ಒದಗಿಸಬೇಕು. ಬೆಳೆ ವಿಮೆ ಹಣವನ್ನು ತುಂಬಿರುವ ಎಲ್ಲ ರೈತರಿಗೆ ವಿಮಾ ಹಣ ಪಾವತಿಸಬೇಕು. ತಾಲ್ಲೂಕಿನಲ್ಲಿ ಅನುಷ್ಠಾನವಾಗಿರುವ ಎತ್ತಿನಹೊಳೆ ಯೋಜನೆಯನ್ನು ದೊಡ್ಡೇರಿ ಹೋಬಳಿಗೂ ವಿಸ್ತರಿಸಿ ಕೆರೆಗಳಿಗೆ ನೀರು ಹರಿಸಬೇಕು ಎಂದು ಒತ್ತಾಯಿಸಿದರು.

ವಕೀಲರ ಸಂಘದ ಅಧ್ಯಕ್ಷ ಶಿವಣ್ಣ ಮಾತನಾಡಿ, ರೈತ ಸಂಘದ ಎಲ್ಲ ಹೋರಾಟಗಳಿಗೆ ವಕೀಲರ ಸಂಘ ಸದಾ ಬೆಂಬಲ ನೀಡುತ್ತದೆ. ಬರಗಾಲದ ಹಿನ್ನೆಲೆಯಲ್ಲಿ ಹೋರಾಟಕ್ಕೆ ಶುಭ ಕೋರಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಗೋವಿಂದರಾಜು, ರಾಜ್ಯ ವಿಭಾಗೀಯ ಸಂಘಟನಾ ಕಾರ್ಯದರ್ಶಿ ದೊಡ್ಡ ಮಾಳಯ್ಯ, ಕಾರ್ಯದರ್ಶಿ ನಾಗರಾಜು, ಮಹಿಳಾ ಅಧ್ಯಕ್ಷರಾದ ಭಾಗ್ಯಮ್ಮ, ನಾಗರತ್ನಮ್ಮ ಡಿ.ಆರ್. ರಾಜಶೇಖರ್, ಉಪವಿಭಾಗದ ಅಧ್ಯಕ್ಷರಾದ ಲಕ್ಷ್ಮಣಗೌಡ, ರಂಗಹನುಮಯ್ಯ, ವಕೀಲರ ಸಂಘದ ಕಾರ್ಯದರ್ಶಿ ನರಸೇಗೌಡ, ಪದಾಧಿಕಾರಿಗಳಾದ ದೇವರಾಜು, ವೀರಕ್ಯಾತಪ್ಪ, ಪಾಂಡುರಂಗಪ್ಪ, ಹೆಚ್.ವಿ. ಮಂಜುನಾಥ್, ಅಶೋಕ್ ಮತ್ತಿತರರು ಭಾಗವಹಿಸಿದ್ದರು.

# ಚಿಪ್‌ಲೆಟ್, ಯುಎಚ್‌ಡಿಐ ತಂತ್ರಜ್ಞಾನಕ್ಕೆ ಒತ್ತು ಅಗತ್ಯ



ಬೆಂಗಳೂರು,ಸೆ.25–ಅತ್ಯಾಧುನಿಕ ಮೈಕ್ರೋಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ ಜಾಗತಿಕ ಸ್ಪರ್ಧೆಗೆ ಇಳಿಯಲು ಭಾರತವು ಅಲ್ಟ್ರಾ–ಹೈ ಡೆನ್ಸಿಟಿ ಇಂಟಿಗ್ರೇಷನ್ (ಯುಎಚ್‌ಡಿಐ) ಹಾಗೂ ಚಿಪ್‌ಲೆಟ್ ತಂತ್ರಜ್ಞಾನಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಇಟಲಿಯ ಬೆಂಗಳೂರಿನ ಕಾನ್ಸುಲೇಟ್ ಜನರಲ್‌ನ ವೈಜ್ಞಾನಿಕ ಅಟ್ಯಾಚೆ ಹಾಗೂ ರೋಮ್ ಟೋರ್ ವರ್ಗಾಟಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ಮಾರ್ಕೊ ರೆ ಹೇಳಿದರು.

ನಿಟ್ಟೆ ಮೀನಾಕ್ಷಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (ಎನ್‌ಎಂಐಟಿ) ಎಐಸಿಟಿಇ ಪ್ರಾಯೋಜಿತ ಎರಡು ದಿನಗಳ ನಾಲ್ಕನೇ ಆವೃತ್ತಿಯ 'ಇಂಟರ್‌ನ್ಯಾಷನಲ್ ಕಾನ್ಫರೆನ್ಸ್ ಆನ್ ನೆಟ್‌ವರ್ಕ್ಸ್, ಮಲ್ಟಿಮೀಡಿಯಾ ಆ?ಯಂಡ್ ಇನ್‌ಫರ್ಮೇಷನ್ ಟೆಕ್ನಾಲಜಿ–ಎನ್‌ಎಂಐಟಿಕಾನ್–2026' ಉದ್ಘಾಟಿಸಿ ಅವರು ಮಾತನಾಡಿದರು.

ಮೈಕ್ರೋಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಆಸಕ್ತಿ ಹೆಚ್ಚಿಸಲು ಆಧುನಿಕ ಸಾಧನಗಳ ಹಿಂದಿರುವ ಎಂಜಿನಿಯರಿಂಗ್ ಸೃಜನಶೀಲತೆಯನ್ನು ಪರಿಚಯಿಸಬೇಕು ಎಂದರು.

ಆಸ್ಟ್ರೇಲಿಯಾದ ಆರ್‌ಎಂಐಟಿ ವಿಶ್ವವಿದ್ಯಾಲಯದ ಹಿರಿಯ ಉಪನ್ಯಾಸಕಿ ಡಾ. ಮಲ್ಕಾ ಎನ್. ಹಾಲ್ಗಮುಗೆಯು ಮಾತನಾಡಿ, ವಿದ್ಯಾರ್ಥಿಗಳು ಐಇಇಇ ಸೇರಿದಂತೆ ವಿವಿಧ ಸ್ವಯಂಸೇವಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಸೈಬರ್ ಸುರಕ್ಷತೆ ಇಂದಿನ ಪ್ರಮುಖ ಸವಾಲಾಗಿದೆ ಎಂದರು.

ಐಇಇಇ ಬೆಂಗಳೂರು ವಿಭಾಗ ಹಾಗೂ ಕಮ್ಯುನಿಕೇಷನ್ಸ್ ಸೊಸೈಟಿ ಸಹಯೋಗದಲ್ಲಿ ನಡೆದ ಸಮ್ಮೇಳನಕ್ಕೆ 2,284 ಸಂಶೋಧನಾ ಪ್ರಬಂಧಗಳು ಸಲ್ಲಿಕೆಯಾಗಿದ್ದು, 94 ಪ್ರಬಂಧಗಳನ್ನು ಆಯ್ಕೆಮಾಡಲಾಗಿದೆ. 11 ಗೋಷ್ಠಿಗಳಲ್ಲಿ ಅವು ಮಂಡನೆಯಾಗಲಿವೆ.

ನಿಟ್ಟೆ ಎಜುಕೇಷನ್ ಟ್ರಸ್ಟ್‌ನ ಟ್ರಸ್ಟಿ ರೋಹಿತ್ ಪುಂಜಾ, ನಿಟ್ಟೆ ವಿಶ್ವವಿದ್ಯಾಲಯದ ಉಪಾಧ್ಯಕ್ಷ ಡಾ. ಸಂದೀಪ್ ಶಾಸ್ತ್ರಿ, ಎನ್‌ಎಂಐಟಿ ಪ್ರಾಂಶುಪಾಲ ಡಾ. ಎಚ್.ಸಿ. ನಾಗರಾಜ್ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

# ಬಸ್ ಪ್ರಯಾಣ ದರ ಏರಿಕೆಗೆ ಚಿಂತನೆ: ಭೈರತಿ ಸುರೇಶ್

ಬೆಂಗಳೂರು: ಸೆ,25–ರಾಜ್ಯದ ಜನರಿಗೆ ಮತ್ತೊಂದು ದರ ಏರಿಕೆಯ ಬಿಸಿ ತಟ್ಟುವ ಸಾಧ್ಯತೆ ಎದುರಾಗಿದೆ. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸಿರುವ ಜನರಿಗೆ, ಬಸ್ ಪ್ರಯಾಣ ದರವೂ ಹೆಚ್ಚಾಗುವ ಆತಂಕ ಎದುರಾಗಿದೆ. ರಾಜ್ಯದ ನಾಲ್ಕು ಸಾರಿಗೆ ನಿಗಮಗಳು ಎದುರಿಸುತ್ತಿರುವ ಭಾರೀ ಆರ್ಥಿಕ ನಷ್ಟವನ್ನು ಸರಿದೂಗಿಸಲು ಬಸ್ ಪ್ರಯಾಣ ದರ ಪರಿಷ್ಕರಣೆ ಕುರಿತು ಸರ್ಕಾರ ಚಿಂತನೆ ನಡೆಸುತ್ತಿದೆ ಎಂದು ಸಾರಿಗೆ ಸಚಿವ ಭೈರತಿ ಸುರೇಶ್ ವಿಧಾನಪರಿಷತ್‌ನಲ್ಲಿ ತಿಳಿಸಿದ್ದಾರೆ.

ರಾಜ್ಯದ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಕೆ–ಕೆಆರ್‌ಟಿಸಿ ಹಾಗೂ ಎನ್‌ಡಬ್ಲ್ಯೂಕೆಆರ್‌ಟಿಸಿ ನಿಗಮಗಳು ಆರ್ಥಿಕ ಸಂಕಷ್ಟ ಎದುರಿಸುತ್ತಿವೆ. ನಾಲ್ಕೂ ನಿಗಮಗಳಿಗೆ ವಾರ್ಷಿಕ ಸುಮಾರು 8,000 ಕೋಟಿ ನಷ್ಟ ಉಂಟಾಗುತ್ತಿದೆ ಎಂದು ಸಚಿವರು ಸದನದಲ್ಲಿ ಮಾಹಿತಿ ನೀಡಿದ್ದಾರೆ.

**ಇಂಧನ, ವೇತನ, ನಿರ್ವಹಣಾ ವೆಚ್ಚ ಹೆಚ್ಚಳ**

ಡೀಸೆಲ್ ಹಾಗೂ ಇತರೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಗೆ ಅನುಗುಣವಾಗಿ ಬಸ್ ಪ್ರಯಾಣ ದರವನ್ನು ಪರಿಷ್ಕರಿಸಲಾಗಿಲ್ಲ. ಮತ್ತೊಂದೆಡೆ, ಸಿಬ್ಬಂದಿ ವೇತನ, ಬಸ್‌ಗಳ ನಿರ್ವಹಣೆ ಸೇರಿದಂತೆ ಕಾರ್ಯಾಚರಣಾ ವೆಚ್ಚ ನಿರಂತರವಾಗಿ ಹೆಚ್ಚಾಗುತ್ತಿದೆ. ಹೀಗಾಗಿ ನಿಗಮಗಳ ಆರ್ಥಿಕ ಸ್ಥಿತಿ ಮತ್ತಷ್ಟು ದುರ್ಬಲವಾಗುತ್ತಿದೆ ಎಂದು ಸಾರಿಗೆ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ನಿಗಮಗಳ ನಷ್ಟದ ಹಿನ್ನೆಲೆಯಲ್ಲಿ ಪ್ರಯಾಣ ದರ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ದರ ಪರಿಷ್ಕರಣೆಗೆ ಸಂಬಂಧಿಸಿದಂತೆ ಸಾರಿಗೆ ಇಲಾಖೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮನವೊಲಿಸಲು ಪ್ರಯತ್ನಿಸುತ್ತಿದೆ ಎಂದು ಸಚಿವರು ತಿಳಿಸಿದ್ದಾರೆ. ನಿಗಮಗಳ ಉಳಿವು ಮತ್ತು ಪ್ರಯಾಣಿಕರಿಗೆ ಉತ್ತಮ ಸೇವೆ ಒದಗಿಸುವ ಅಗತ್ಯವನ್ನು ಗಮನದಲ್ಲಿಟ್ಟುಕೊಂಡು ದರ ಪರಿಷ್ಕರಣೆ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

**8,095 ಕೋಟಿ ಬಾಕಿ ಹೊಣೆಗಾರಿಕೆ:**

ಸೆಪ್ಟೆಂಬರ್ 2026ರ ವರದಿ ಪ್ರಕಾರ ನಾಲ್ಕು ಸಾರಿಗೆ ನಿಗಮಗಳ ಒಟ್ಟು ಬಾಕಿ ಹೊಣೆಗಾರಿಕೆ 8,095.5 ಕೋಟಿ ಇದೆ. ಇದರ ಜತೆಗೆ ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಪ್ರಯಾಣ ಒದಗಿಸಿದ ವೆಚ್ಚದಲ್ಲಿ ರಾಜ್ಯ ಸರ್ಕಾರದಿಂದ ಸಾರಿಗೆ ನಿಗಮಗಳಿಗೆ 5,650.95 ಕೋಟಿ ಬಾಕಿ ಇದೆ ಎಂದು ತಿಳಿಸಲಾಗಿದೆ.

ಈ ಎಲ್ಲ ಆರ್ಥಿಕ ಒತ್ತಡಗಳ ಹಿನ್ನೆಲೆಯಲ್ಲಿ ನಿಗಮಗಳ ಆದಾಯ ಹೆಚ್ಚಿಸುವುದು ಸರ್ಕಾರದ ಮುಂದಿರುವ ಪ್ರಮುಖ ಸವಾಲಾಗಿದೆ. ಅದರ ಭಾಗವಾಗಿ ಪ್ರಯಾಣ ದರ ಪರಿಷ್ಕರಣೆಯ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

**ಸಾರ್ವಜನಿಕರಿಂದ ಸಲಹೆ, ಆಕ್ಷೇಪಣೆ ಆಹ್ವಾನ**

ಈಗಾಗಲೇ ರಾಜ್ಯದ ನಾಲ್ಕು ಸಾರಿಗೆ ನಿಗಮಗಳು ಬಸ್ ಪ್ರಯಾಣ ದರ ಪರಿಷ್ಕರಣೆಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಸಲಹೆ ಹಾಗೂ ಆಕ್ಷೇಪಣೆಗಳನ್ನು ಆಹ್ವಾನಿಸಿವೆ. ಇಂಧನ ಬೆಲೆ, ಸಿಬ್ಬಂದಿ ವೇತನ ಮತ್ತು ನಿರ್ವಹಣಾ ವೆಚ್ಚ ಹೆಚ್ಚಳವನ್ನು ದರ ಪರಿಷ್ಕರಣೆಗೆ ಪ್ರಮುಖ ಕಾರಣಗಳಾಗಿ ನಿಗಮಗಳು ಉಲ್ಲೇಖಿಸಿವೆ.

ಆದರೆ, ಪ್ರಯಾಣ ದರ ಹೆಚ್ಚಳ ಮಾಡಿದರೆ ಸರ್ಕಾರದ ವಿರುದ್ಧ ಪ್ರತಿಪಕ್ಷಗಳಿಂದ ತೀವ್ರ ವಿರೋಧ ವ್ಯಕ್ತವಾಗುವ ಸಾಧ್ಯತೆ ಇದೆ. ಜನವರಿ 2025ರಲ್ಲೇ ಬಸ್ ಪ್ರಯಾಣ ದರವನ್ನು ಶೇ.15ರಷ್ಟು ಹೆಚ್ಚಿಸಲಾಗಿತ್ತು. ಇದೀಗ ಮತ್ತೆ ದರ ಏರಿಕೆಯ ಚರ್ಚೆ ಆರಂಭವಾಗಿರುವುದು ಪ್ರಯಾಣಿಕರಲ್ಲಿ ಆತಂಕ ಮೂಡಿಸಿದೆ.

ಸದ್ಯ ದರ ಪರಿಷ್ಕರಣೆ ಕುರಿತು ಮಾತ್ರ ಚರ್ಚೆ ನಡೆಯುತ್ತಿದ್ದು, ಎಷ್ಟು ಪ್ರಮಾಣದಲ್ಲಿ ದರ ಹೆಚ್ಚಳ ಮಾಡಬೇಕು ಎಂಬುದಾಗಲಿ ಅಥವಾ ಅಂತಿಮ ದರವಾಗಲಿ ಸರ್ಕಾರ ಇನ್ನೂ ಪ್ರಕಟಿಸಿಲ್ಲ. ಮುಖ್ಯಮಂತ್ರಿ ಮಟ್ಟದಲ್ಲಿ ಅಂತಿಮ ನಿರ್ಧಾರ ಕೈಗೊಂಡ ಬಳಿಕವಷ್ಟೇ ದರ ಏರಿಕೆಯ ಸ್ಪಷ್ಟ ಚಿತ್ರಣ ಹೊರಬೀಳಲಿದೆ.

# ಬೆಂಗಳೂರು ಉತ್ತರ ಜಿಲ್ಲಾ ಜೆಡಿಎಸ್ ಮಹಿಳಾ ವಿಭಾಗದ ಸಭೆ



ಬೆಂಗಳೂರು,ಸೆ25–ಜನತಾದಳ (ಜಾತ್ಯತೀತ) ಪಕ್ಷದ ಮಹಿಳಾ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವುದು ಹಾಗೂ ಇದೇ ಸೆ. 28ರಂದು ಕನಕಪುರದಿಂದ ರಾಜ್ಯ ಯುವ ಘಟಕದ ಅಧ್ಯಕ್ಷರಾದ ನಿಖಿಲ್ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಆರಂಭವಾಗಲಿರುವ 'ಸ್ವಾಭಿಮಾನಿ ಯಾತ್ರೆ'ಯನ್ನು ಯಶಸ್ವಿಗೊಳಿಸುವ ಕುರಿತು* ಇಂದು ಜೆಪಿ ಭವನದ ಪಕ್ಷದ ಕಚೇರಿಯಲ್ಲಿ ಮಹತ್ವದ ಸಭೆ ನಡೆಯಿತು.

ಮಾಜಿ ಶಾಸಕರು ಹಾಗೂ ಗ್ರೇಟರ್ ಬೆಂಗಳೂರು ಜನತಾದಳ (ಜಾತ್ಯತೀತ) ಪಕ್ಷದ ಅಧ್ಯಕ್ಷರಾದ ಹೆಚ್.ಎಂ. ರಮೇಶ್ ಗೌಡ್ರು* ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ, ಮಾಜಿ ಶಾಸಕರು ಹಾಗೂ ಬೆಂಗಳೂರು ಉತ್ತರ ಜಿಲ್ಲಾ ಅಧ್ಯಕ್ಷರಾದ ಇ. ಕೃಷ್ಣಪ್ಪ, ಮಾಜಿ ಸಚಿವರಾದ ಲೀಲಾದೇವಿ ಆರ್. ಪ್ರಸಾದ್, ಮಾಜಿ ಶಾಸಕರಾದ ಆರ್. ಅಖಂಡ ಶ್ರೀನಿವಾಸಮೂರ್ತಿ, ಗ್ರೇಟರ್ ಬೆಂಗಳೂರು ಮಹಿಳಾ ವಿಭಾಗದ ಅಧ್ಯಕ್ಷರಾದ ಶೈಲಾ ಸಂತೋಜಿ ರಾವ್, ಬೆಂಗಳೂರು ಉತ್ತರ ಜಿಲ್ಲಾ ಮಹಿಳಾ ಅಧ್ಯಕ್ಷರಾದ ಎಂ. ಕವಿತಾ ರೆಡ್ಡಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಕನ್ಯಾಕುಮಾರಿ, ಗ್ರೇಟರ್ ಬೆಂಗಳೂರು ಮಹಾಪ್ರಧಾನ ಕಾರ್ಯದರ್ಶಿ ಎಸ್. ರಮೇಶ್, ವಿಧಾನಸಭಾ ಕ್ಷೇತ್ರ ಅಧ್ಯಕ್ಷರಾದ ಎ.ವಿ. ವೇಣುಗೋಪಾಲ್, ಆರ್. ಚೆನ್ನಕೇಶವಮೂರ್ತಿ, ಎಂ. ಮುನಿಸ್ವಾಮಿ, ಧನಂಜಯ್ ಲಕ್ಷ್ಮಿಕಾಂತ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ವ್ಯಾಪ್ತಿಯ *ಮಹಿಳಾ ಪದಾಧಿಕಾರಿಗಳು ಹಾಗೂ ವಿಧಾನಸಭಾ ಕ್ಷೇತ್ರ ಅಧ್ಯಕ್ಷರಿಗೆ ನೇಮಕಾತಿ ಆದೇಶ ಪತ್ರಗಳನ್ನು ವಿತರಿಸಲಾಯಿತು.

ಸಭೆಯಲ್ಲಿ ನೂರಾರು ಸಂಖ್ಯೆಯಲ್ಲಿ ಮಹಿಳಾ ವಿಭಾಗದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಮಹಿಳಾ ಮುಖಂಡರು ಭಾಗವಹಿಸಿ, ಸಂಘಟನೆಯ ಬಲವರ್ಧನೆ ಮತ್ತು ಮುಂಬರುವ 'ಸ್ವಾಭಿಮಾನಿ ಯಾತ್ರೆಯ ಯಶಸ್ಸಿಗಾಗಿ' ಅಗತ್ಯ ಸಿದ್ಧತೆಗಳ ಕುರಿತು ಚರ್ಚಿಸಿದರು.



ಬೆಂಗಳೂರು ನಗರವನ್ನು ಸ್ವಚ್ಛವಾಗಿಡಲು ಪ್ರತಿದಿನವೂ ಶ್ರಮಿಸುವ ಪೌರಕಾರ್ಮಿಕ ತಾಯಂದಿರಿಗೆ ಪೌರಕಾರ್ಮಿಕರ ದಿನದ ಪ್ರಯುಕ್ತ ಆರ್.ಟಿ. ನಗರ ಬ್ಲಾಕ್ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಎಂ. ನಂದೀಶ್ ಕುಮಾರ್ ರವರು ಪೌರಕಾರ್ಮಿಕ ಮಹಿಳೆಯರಿಗೆ ಅರಿಶಿಣ, ಕುಂಕುಮ ನೀಡಿ ಗೌರವಿಸಿದರು.

# ಆಕ್ಟೀವ್ ಕರ್ನಾಟಕ ಎಂಬ ಹೊಸ ಕ್ರೀಡೆ, ಪ್ರವಾಸೋದ್ಯಮ ಯೋಜನೆ: ಜಾರ್ಜ್



ಬೆಂಗಳೂರು, ಸೆ. 25 : ರಾಜ್ಯದ ಕ್ರೀಡಾ ಕಾರ್ಯಕ್ರಮಗಳನ್ನು ಪ್ರವಾಸೋದ್ಯಮದೊಂದಿಗೆ ಜೋಡಿಸಿ ಹೊಸ ಪ್ರವಾಸಿ ಅನುಭವ ಮತ್ತು ಸ್ಥಳೀಯ ಆರ್ಥಿಕ ಅವಕಾಶಗಳನ್ನು ಸೃಷ್ಟಿಸುವ ಉದ್ದೇಶದಿಂದ ಕರ್ನಾಟಕ ಪ್ರವಾಸೋದ್ಯಮ ಇಲಾಖೆ ಆಕ್ಟೀವ್ ಕರ್ನಾಟಕ ಎಂಬ ಹೊಸ ಕ್ರೀಡೆ ಮತ್ತು ಸಾಹಸ ಪ್ರವಾಸೋದ್ಯಮ ಯೋಜನೆಗೆ ವಿಶ್ವ ಪ್ರವಾಸೋದ್ಯಮ ದಿನದಂದು ಚಾಲನೆ ನೀಡಲಿದೆ ಎಂದು ಇಂಧನ ಹಾಗೂ ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ತಿಳಿಸಿದ್ದಾರೆ.

ಯೋಜನೆಯ ಮೊದಲ ಹಂತವಾಗಿ ಪ್ರಮುಖ ಕ್ರೀಡಾ ಕಾರ್ಯಕ್ರಮ ಆಯೋಜಕರೊಂದಿಗೆ ಪ್ರವಾಸೋದ್ಯಮ ಇಲಾಖೆ ಒಪ್ಪಂದಕ್ಕೆ ಸಹಿ ಹಾಕಲಿದ್ದು, ರಾಜ್ಯದಲ್ಲಿ ನಡೆಯುವ ಮ್ಯಾರಥಾನ್, ಸೈಕ್ಲಿಂಗ್, ಟ್ರಯಥ್ಲಾನ್ ಸೇರಿದಂತೆ ಪ್ರಮುಖ ಕ್ರೀಡೆಗಳನ್ನು ಸಂಬಂಧಿತ ಪ್ರವಾಸಿ ತಾಣಗಳೊಂದಿಗೆ ಜೋಡಿಸಲು ಉದ್ದೇಶಿಸಲಾಗಿದೆ.

"ಕ್ರೀಡಾ ಕಾರ್ಯಕ್ರಮಕ್ಕೆ ಬರುವವರು ಕೇವಲ ಸ್ಪರ್ಧಾಳುಗಳಾಗಿ ಹಿಂದಿರುಗಬಾರದು. ಅವರೊಂದಿಗೆ ಬರುವ ಕುಟುಂಬ ಮತ್ತು ಸ್ನೇಹಿತರೂ ಕರ್ನಾಟಕವನ್ನು ಅನುಭವಿಸುವ ಪ್ರವಾಸಿಗರಾಗಬೇಕು. ಕ್ರೀಡೆಗಾಗಿ ಬನ್ನಿ ಕರ್ನಾಟಕದಲ್ಲಿ ವಾಸ್ತವ್ಯ ಹೂಡಿ ಎಂಬುದು ಈ ಉಪಕ್ರಮದ ಮೂಲ ಆಶಯ," ಎಂದು ಕೆ.ಜೆ. ಜಾರ್ಜ್ ಹೇಳಿದರು.

ಬೆಂಗಳೂರು, ಮೈಸೂರು, ಕರಾವಳಿ ಮತ್ತು ಇತರೆ ತಾಣಗಳಲ್ಲಿ ನಡೆಯುವ ಕ್ರೀಡಾ ಕಾರ್ಯಕ್ರಮಗಳೊಂದಿಗೆ 2–3 ದಿನಗಳ ಪ್ರವಾಸಿ ವಾಸ್ತವ್ಯ, ಸ್ಥಳೀಯ ಆಹಾರ, ಪರಂಪರೆ, ಸಂಸ್ಕೃತಿ ಮತ್ತು ಪ್ರವಾಸಿ ಅನುಭವಗಳನ್ನು ಜೋಡಿಸುವ ಯೋಜನೆ ರೂಪಿಸಲಾಗುತ್ತಿದೆ.

ಮುಂದಿನ ಹಂತದಲ್ಲಿ ಸರ್ಫಿಂಗ್, ಕಯಾಕಿಂಗ್, ವಾಟರ್ ಸ್ಪೋರ್ಟ್ಸ್, ಟ್ರೇಲ್ ರನ್ನಿಂಗ್, ಸೈಕ್ಲಿಂಗ್ ಮತ್ತು ಇತರೆ ಸಾಹಸ ಕ್ರೀಡೆಗಳನ್ನು ಒಳಗೊಂಡ ರಾಜ್ಯವ್ಯಾಪಿ ಕ್ರೀಡೆ ಮತ್ತು ಸಾಹಸ ಪ್ರವಾಸೋದ್ಯಮವನ್ನು ರೂಪಿಸುವ ಉದ್ದೇಶವಿದೆ.

ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಡಾ. ರಾಮ್ ಪ್ರಸಾತ್ ಮನೋಹರ್, ಐಎಎಸ್ ಮಾತನಾಡಿ, "ಪ್ರತಿಯೊಂದು ಪ್ರಮುಖ ಕ್ರೀಡಾ ಕಾರ್ಯಕ್ರಮವನ್ನೂ ಅದರ ಆಕ್ಟೀವ್ ಕರ್ನಾಟಕವನ್ನು ಪ್ರವಾಸಿ ತಾಣಗಳ ಅನುಭವ ಜೊತೆ ಜೋಡಿಸುವುದು ನಮ್ಮ ಉದ್ದೇಶ. ಇದರಿಂದ ಪ್ರವಾಸಿಗರ ವಾಸ್ತವ್ಯ ಅವಧಿ ಹೆಚ್ಚಿಸುವುದರ ಜೊತೆಗೆ ಹೋಟೆಲ್, ಹೋಂಸ್ಟೇ, ಸ್ಥಳೀಯ ಸಾರಿಗೆ, ಆಹಾರ, ಮಾರ್ಗದರ್ಶಕರು ಮತ್ತು ಸಣ್ಣ ಉದ್ಯಮಗಳಿಗೆ ನೇರ ಆರ್ಥಿಕ ಅವಕಾಶ ಸೃಷ್ಟಿಸಬಹುದು," ಎಂದು ಹೇಳಿದರು.

'ಂಟಿಣುತಿಜ ಏಚಿಡಿಟಿಚಿಣಚಿ–ಇಚಿ' ಅನ್ನು ಹಂತ ಹಂತವಾಗಿ ರಾಜ್ಯದ ವಿವಿಧ ತಾಣಗಳಿಗೆ ವಿಸ್ತರಿಸಿ, ಕರ್ನಾಟಕವನ್ನು ಕ್ರೀಡೆ ಮತ್ತು ಸಾಹಸ ಪ್ರವಾಸೋದ್ಯಮದ ಪ್ರಮುಖ ತಾಣವಾಗಿ ರೂಪಿಸುವುದು ಇಲಾಖೆಯ ಗುರಿಯಾಗಿದೆ.

ಮೊದಲ ಹಂತವಾಗಿ ಎನ್‌ಇಬಿ ಸ್ಪೋರ್ಟ್ಸ್ ಸಂಸ್ಥೆಯ ಜೊತೆಗೆ ಪ್ರವಾಸೋದ್ಯಮ ಇಲಾಖೆ ಒಪ್ಪಂದ ಮಾಡಿಕೊಳ್ಳಲಿದೆ. ಈ ಸಂಸ್ಥೆಯ ಜೊತೆಗೂಡಿ ಮ್ಯಾರಥಾನ್, ಸೈಕ್ಲಾಥಾನ್ ಹಾಗೂ ಟ್ರಯಥ್ಲಾನ್ ಚಟುವಟಿಕೆಗಳನ್ನು ಇವರ ಜೊತೆ–ಗೂಡಿ ಕಾರ್ಯಕ್ರಮಗಳನ್ನು ಆಯೋಜಿಸಲಿದೆ.



ಕರ್ನಾಟಕ ಪ್ರದೇಶ ಜನತಾದಳ(ಎಸ್) ರಾಜ್ಯಪ್ರಧಾನಕಾರ್ಯದರ್ಶಿಯನ್ನಾಗಿ ವಾಸುದೇವ ಅವರನ್ನು ಶಾಸಕ ಸಿ.ಎನ್.ಬಾಲಕೃಷ್ಣ ಅವರ ಶಿಫಾರಸ್ಸಿನ ಮೇರೆಗೆ ಜೆಡಿಎಸ್ ರಾಜ್ಯಾಧ್ಯಕ್ಷ ಹೆಚ್.ಡಿ. ಕುಮಾರಸ್ವಾಮಿರವರು ನೇಮಕ ಮಾಡಿದ್ದಾರೆ.

# ಗುಂಜೂರು ಗ್ರಾಮದಲ್ಲಿ ನಕಲಿ ದಾಖಲೆ ಸೃಷ್ಟಿಸಿ ಜಮೀನು ವಂಚನೆ ಆರೋಪ



ಕೆ.ಆರ್.ಪುರ,ಸೆ25–ಕುಲಕಸುಬು ಅಧಾರಿತ ಹಿಂದುಳಿದ ಮಡಿವಾಳ ಸಮುದಾಯದ ವಾರಸುದಾರರಿಗೆ ಸೇರಿರುವ ಗುಂಜೂರು ಸ.ನಂ.287/2, ರಲ್ಲಿ 1.11 ಎಕರೆ ಜಮೀನನ್ನು ಸ್ಥಳೀಯ ಪ್ರಭಾವಿ ಮುಖಂಡ ಮೋಸ ಮಾಡಿ ಜಮೀನನ್ನು ಕಬಳಿಸಿದ್ದಾರೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಜಿಲ್ಲಾ ಸಂಘಟನಾ ಸಂಚಾಲಕ ಗುಂಜೂರುಪಾಳ್ಯ ಗೋವಿಂದ್ ಕುಮಾರ್ ಆರೋಪಿಸಿದ್ದಾರೆ.

ಮಹದೇವಪುರ ಕ್ಷೇತ್ರದ ಗುಂಜೂರಿನಲ್ಲಿ ಹಲವು ವರ್ಷಗಳಿಂದ ಕುಲಕಸುಬು ಅಧಾರಿತ ಮಡಿವಾಳ ಸಮಾಜದ ಮುನಿಶಾಮಿ ಬಿನ್ ತಾಯಪ್ಪರವರು ಬಟ್ಟೆಗಳನ್ನು ತೊಳೆದು ಕೆಲಸ ಮಾಡುತ್ತಿದ್ದರು. 6–12–1984ರಂದು ಮುನಿಶಾಮಪ್ಪ ನಿಧನರಾದ ಹಿಂದೆ ಅವರ ಹೆಂಡತಿ ಗಂಗಮ್ಮ ಸಹ ನಿಧನರಾಗುತ್ತಾರೆ. ವಾರಸುದಾರರಾದ ಅಣ್ಣಯ್ಯಪ್ಪ, ಶ್ರೀನಿವಾಸ್, ಯಲ್ಲಪ್ಪ, ಚಾಮುಂಡೇಶ್ವರಿ, ಯಲ್ಲಮ್ಮ, ಮುನಿವೆಂಕಟಮ್ಮ ಅವರುಗಳ ಹೆಸರುಗಳಿಗೆ ಪೌತಿ ಖಾತೆ ಮಾಡಿಸಲು ಅರ್ಜಿ ಸಲ್ಲಿಸಿರುವ ಸಮಯದಲ್ಲಿ ಕಂದಾಯ ಅಧಿಕಾರಿಗಳು ಹಣದ ಆಸೆಗೆ ಸ್ಥಳೀಯ ಪ್ರಭಾವಿ ವ್ಯಕ್ತಿಯ ಜೊತೆ ಕೈಜೋಡಿಸಿ ಮಡಿವಾಳ ಸಮಾಜದವರ ಜಮೀನನ್ನು ದಲಿತ ಜನಾಂಗಕ್ಕೆ ಸೇರಿದ ಯಲ್ಲಪ್ಪ ಹಾಗು ಅವರ ಕುಟುಂಬದವರಿಗೆ ನಕಲಿ ದಾಖಲೆ ಸೃಷ್ಟಿಸಿ ನೊಂದಣಿ ಮಾಡಿಸಿದ್ದಾರೆ ಎಂದು ದೂರಿದರು.

ಗುಂಜೂರು ಸ.ನಂ 287/3 ರಲ್ಲಿ 2.11 ಎಕರೆ ಅಲ್ಲದೆ ಪಕ್ಕದ ಗ್ರಾಮದ ಕಾಚಮಾರನಹಳ್ಳಿ ಸ.ನಂ70/3 ರಲ್ಲಿ 39 ಗುಂಟೆ, 70/ 5 ರಲ್ಲಿ 10 ಗುಂಟೆ ಜಮೀನುಗಳಿಗೆ ಸಹ ನಕಲಿ ವಂಶ ವೃಕ್ಷ ಸೃಷ್ಟಿ ಮಾಡಿ ಅಭಿವೆಂಚರ್ಸ್ ಕಂಪನಿಯ ಎಂ.ಡಿ. ನಾಗರಾಜ್ ರೆಡ್ಡಿ ಎಂಬ ಬಿಲ್ಡರ್ ಗೆ ಜೆ.ಡಿ ಮಾಡಿಕೊಟ್ಟಿರುತ್ತಾರೆ ಎಂದು ಆಪಾದಿಸಿದರು.

ಈ ಬಗ್ಗೆ ಮಡಿವಾಳ ಸಮಾಜಕ್ಕೆ ಸೇರಿರುವ ವ್ಯಕ್ತಿಗಳು ಪೌತಿ ಖಾತೆ ಮಾಡುವ ದಾಖಲೆ ಪರಿಶೀಲಿಸಿದ ವೇಳೆ ಮೋಸ ಮಾಡಿರುವುದು ಗೊತ್ತಾಗಿದೆ. ಮಡಿವಾಳ ಸಮುದಾಯಕ್ಕೆ ಸೇರಿರುವ ಬಡವರಿಗೆ ಜಮೀನು ಬಿಟ್ಟುಕೊಡದಿದ್ದರೆ ಇವರ ವಿರುದ್ಧ ಗೃಹ ಸಚಿವರಿಗೆ, ಲೋಕಾಯುಕ್ತರಿಗೆ, ಹಾಗು ಕಂದಾಯ ಇಲಾಖೆ ಉನ್ನತ ಅಧಿಕಾರಿಗಳಿಗೆ ದೂರು ಸಲ್ಲಿಸುವುದು ಅಲ್ಲದೆ ಈ ಕೃತ್ಯದಲ್ಲಿ ಭಾಗಿಯಾದವರಿಗೆ ಕಾನೂನು ರೀತಿ ಶಿಕ್ಷೆ ವಿಧಿಸುವುದಲ್ಲದೆ ಮಂಪರು ಪರೀಕ್ಷೆಗೆ ಒಳಪಡಿಸಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಡಿ.ಎಸ್.ಎಸ್.ಅಂಬೇಡ್ಕರ್ ವಾದ ರಾಜ್ಯ ಸಮಿತಿ ಸದಸ್ಯರಾದ ಮಣಿಪಾಲ್ ರಾಜಪ್ಪ, ಜಮೀನು ಮಾಲಿಕರಾದ ದೋಭಿ ಚಿಕ್ಕ ಮುನಿಯಪ್ಪ ನ ಮಕ್ಕಳು ಕಾಕಿ ವೆಂಕಟಪ್ಪ, ಚನ್ನಪ್ಪ ನ ಮಕ್ಕಳಾದ ಕೋಟೆಪ್ಪ ,ಚಂದ್ರಪ್ಪ, ನಾರಾಯಣಸ್ವಾಮಿ ಬರಮಿ, ಮಂಜುನಾಥ್ ನಂದೀಶ, ಪಾಪಣ್ಣ, ರಾಧಮ್ಮ,, ಮಣಿ, ಮಂಜು, ವರ್ತೂರು ಯಲ್ಲಪ್ಪ ಹಾಗು ಮತ್ತಿತರಿದ್ದರು.

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ–ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

## LOST

I, K.K.Peter S/o K.P.Kunju Vareed, R/at No.4, 6th Cross, Amrutha Nagar, Near Amrutha Engineering College, Bangalore South, Karnataka-560099. have lost the original Manual Khata Certificate of plot bearing Site No.128, carved out of Sy.No.114, situated in Resdential Layout known as Green Cascade, Raysandra Village, Sarjapura Hobli Anekal Taluk, Bengaluru, bearing No. BDA/ROE/128/RAYSANDRA/2012-13, dated 20-10-2012, issued by the Bangalore Devlopment Authority(BDA).

**Registered Police Complaint No.2445692/2026, dated 25-09-2026**

**Finder's Please Contact K.K.PETER Mob : 9880617261**

## CHANGE OF NAME

I, **MEENA MUTHU,** aged about 48 years, W/o Navaneet Mutha, R/at No. 3038, 8th Main, 80 Feet Road, Indiranagar, HAL 2nd Stage, Bangalore-560038. have changed my name to **MEENA,** vide Affidavit dated 25-09-2026. Sworn before Notary **SHIVAKUMARA.M.N,** Bengaluru.

## CHANGE OF NAME

I, **NARAYANA REDDY SREE NIVASA REDDY,** R/at No. 59/4, 21st 'A' Main, 15th 'B' Cross, Vangalahalli, HSR Layout, 1st Sector, Bangalore-560102. have changed my name to **NARAYANA REDDY SRINIVASA REDDY,** vide Affidavit dated 23-09-2026. Sworn before Notary **K.V.MANI,** Bengaluru.

## CHANGE OF NAME

I, **MALLIKARJUNA.S** S/o **SOMALINGA GUNAKI,** Aged about 26 years, R/at No.14, National Park Road, Near Hanuman Temple, Sampige halli, Bannerghatta Post Jigani Hobli, Anekal Taluk, Bangalore-560083. have change my name form **MALLIKARJUNA S GUNAKI** to **MALLIKARJUNA.S,** Vide Affidavit dated 19-09-2026, Sworn before Notary **MUNI SWAMY. T,** Bengaluru.



ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಅಬ್ದುಲ್ ವಾಜಿದ್‌ರವರು ಆಟೋ ಚಾಲಕರಿಗೆ ಸಮವಸ್ತ್ರ ವಿತರಿಸುವ ಮೂಲಕ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡರು. ಹಲವಾರು ಮುಖಂಡರು ಭಾಗವಹಿಸಿ ಶುಭಾಶಯ ಕೋರಿದರು.

# ಕಾಂಗ್ರೆಸ್‌ಗೆ ಮರಳಿದ ರಾಘವೇಂದ್ರ ಪಟೇಲ್



ಕೆ.ಆರ್.ಪುರ,ಸೆ.25–ಕೆ.ಆರ್.ಪುರ ಕ್ಷೇತ್ರದ ಕೊತ್ತನೂರಿನ ಬಿಜೆಪಿ ಮುಖಂಡ ರಾಘವೇಂದ್ರ ಪಟೇಲ್ ಅವರು ಸಚಿವರಾದ ಬೈರತಿ ಸುರೇಶ್ ಅವರ ಸಮ್ಮುಖದಲ್ಲಿ ಪೂರ್ವ ಜಿಲ್ಲಾ ಅಧ್ಯಕ್ಷ ಡಿ.ಕೆ.ಮೋಹನ್ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗುವ ಮೂಲಕ ಕಾಂಗ್ರೆಸ್ ಪಕ್ಷಕ್ಕೆ ಮರಳಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಬೈರತಿ ಸುರೇಶ್ ಅವರು ಮುಂದಿನ ಚುನಾವಣೆಯಲ್ಲಿ ಕೆ.ಆರ್.ಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಶಾಸಕರಾಗಿ ಆಯ್ಕೆಯಾಗುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕ್ಷೇತ್ರದ ಮುಖಂಡರಾದ ರಾಘವೇಂದ್ರ ಪಟೇಲ್ ಸೇರಿದಂತೆ ಹಲವು ಮುಖಂಡರು ಮಾತೃ ಪಕ್ಷಕ್ಕೆ ಮರಳಿದ್ದು, ಪಕ್ಷಕ್ಕೆ ಆನೆಬಲ ಬಂದಿದೆ ಎಂದು ನುಡಿದರು.

**SOUTH INDIAN Bank**
**BANASHANKARI BRANCH:**
# 569, Ground Floor, C.R. Complex, 30th Main Road, Near Devegowda Petrol Bunk, Banagirinagara, Banashankari 3rd Stage,
**Bangalore 560 085. Ph: 080-26797634**
Email:br0517@sib.co.in, www.southindianbank.com
**Date: 24-09-2026**

## NOTICE

This is to inform the following customers that their gold loan accounts with **Banashankari Branch** have been classified as overdue, and no repayment or response has been received despite repeated reminders.

As per the terms and conditions agreed upon at the time of availing the loan, and in accordance with the relevant regulatory guidelines, the Bank holds the right to initiate auction proceedings for recovery of the outstanding dues.

Customers are hereby advised to repay the full overdue amount and applicable charges **within 30 days** from the date of this notice. Failure to do so will result in auctioning of the pledged gold jewellery, ornaments and coins, without any further individual notice.

Details of the auction (including date, time and venue) will be published separately in accordance with regulatory norms at branch premises.

For any clarification or repayment arrangement, customers are requested to immediately visit the branch where the loan was availed. List of Overdue Accounts:

| A/c No. | Name | | Gross Weight (In gms) |
|---|---|---|---|
| 0517653000041010 | SHARANABASAVA | | 42.4 |
| **Date** | **Loan Amount** | **Balance Outstanding (as on 01.09.2026)** | **Due Date** |
| 26-09-2025 | 2,75,000/- | 2,94,748.14 | 03-08-2026 |

**Note :** This notice serves as a final reminder. The bank shall not be held liable for any claims arising post-auction once the stipulated time frame has lapsed.

Corporate Office Regd. Office : SIB House, T B Road, Mission Quarters, Thrissur, Kerala – 001
Ph : + 91-487-2420020, Fax : + 91-487-2420020,
E-Mail : sibcorporate@sib.co.in,
Website : www.southindianbank.com
Corporate Identity #: L65191KL1929PLC001017

## PUBLIC NOTICE

It is hereby notified that, my clients have agreed to purchase the Schedule property from its owners (1) **Smt.N.Kavitha** W/o late B.P.Muralikrishna and her children, (2) **Smt.Munirathna** W/o late Muniraju.R and her son Sri.M.Rajesh, (3)**Smt.Sujatha.R** W/o late Umesh Kumar.B.P, (4)**Smt.Sujatha.R** W/o Sri.Prasanth Kumar.Y.A, (5)**Smt.Jayamma** W/o late N.Venkata Muniyappa and her children **Smt.Vijaylakshmi.V, Sri.V.Govindaraju, Sri.V.Umesh, Smt.V.Shobha, Smt.Krishnakumari.V and Smt.Nethravathi,** (6)**Sri.N.Kupendrappa.N** S/o late Nanjundappa, (7)**Sri.N.Krishnappa** S/o late Nanjundappa, (8)**Smt.Gowramma** W/o late N.Yashodhara and her children **Sri.Sunil Kumar.Y and Smt.Mamatha.Y,** **(8)Sri.N.Prakash** S/o late B.Nanjundappa, **(9)Sri.N.Muniraju** S/o late Najundappa, **(10)Sri.Vinay Kumar.C** S/o late Chaluvaraju.N and **(11)Sri.C.Neeraj** S/o late Chaluvaraju.N.

Apart from the said owners, if any other person/s have any manner of claim or interest or demand over the Schedule property or any part thereof by way of sale, lease, mortgage, gift, lien, charge, trust, maintenance, easement, pre-emption or otherwise howsoever, they are hereby requested to file their objection/s (along with the photocopies of the documents on which they are relying), with the undersigned within **14 days** from the date of publication of this notice. Objection/s received thereafter will not be binding on my clients.

**SCHEDULE**

All that piece and parcel of the vacant residential property bearing Municipal No.184 (E.PID No.2674691681) & 187/1-1, (E-PID No.9101673342), together measuring East to West 30ft and North to South 120ft, in all measuring 3600 Sq.ft., situated at Albert Victoria Road, 1st Main Road, Chamarajpet, Bangalore and bounded on:

East by : Property of Adaraj Gopal Krishnaiah
West by : Property of Mariyamma and Somashekar Reddy
North by : Conservancy
South by : 1st Main Road

Sd/- S.F.Goutam Chand, Advocate
**Goutam Associates**
No.60, 2nd Floor, Kanakapura Road,
Basavanagudi, Bangalore-560004

# ಕಳಪೆ ಶೂ-ಸಾಕ್ಸ್ ವಿತರಣೆ ಆರೋಪ ಸುಳ್ಳು

## -ಮಧು ಬಂಗಾರಪ್ಪ

ಬೆಂಗಳೂರು.ಸೆ.25– ಸರ್ಕಾರಿ ಶಾಲಾ ಮಕ್ಕಳಿಗೆ ವಿತರಿಸಲಾಗುತ್ತಿರುವ ಶೂ–ಸಾಕ್ಸ್‌ಗಳು ಕಳಪೆ ಗುಣಮಟ್ಟದ್ದಾಗಿವೆ ಎಂಬ ಆರೋಪವನ್ನು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಳ್ಳಿಹಾಕಿದ್ದು, ಕೆಲವೆಡೆ ಕಂಡುಬಂದಿರುವ ಸಮಸ್ಯೆ ಗುಣಮಟ್ಟಕ್ಕೆ ಸಂಬಂಧಿಸಿದ್ದಲ್ಲ, ಶೂಗಳ ಗಾತ್ರಕ್ಕೆ ಸಂಬಂಧಿಸಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶೂಗಳ ಗುಣಮಟ್ಟ ಕಳಪೆಯಾಗಿದೆ ಎಂದು ಆರೋಪಿಸಿ ಪ್ರಸಾರವಾಗಿದ್ದ ಫೋಟೋಗಳನ್ನು ಪರಿಶೀಲಿಸಲಾಗಿದ್ದು, ಅವು ಕಳೆದ ವರ್ಷದ ಶೂಗಳ ಫೋಟೋಗಳಾಗಿವೆ ಎಂದು ಸಚಿವರು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ (ಸಿಇಒ) ಸ್ಥಳಕ್ಕೆ ತೆರಳಿ ಶೂಗಳ ಗುಣಮಟ್ಟ ಪರಿಶೀಲಿಸುವಂತೆ ಸೂಚಿಸಲಾಗಿದೆ ಎಂದರು.

ಈ ಬಾರಿ ರಾಜ್ಯ ಮಟ್ಟದಲ್ಲಿ ಮೊದಲ ಬಾರಿಗೆ ಮಕ್ಕಳಿಗೆ ಶೂಗಳನ್ನು ವಿತರಿಸಲಾಗುತ್ತಿದ್ದು, ಉತ್ಪಾದನೆ ಮತ್ತು ಸಾಗಣೆಯಲ್ಲಿ ವಿಳಂಬವಾಗಿದೆ.

ಸುಮಾರು 12 ಲಕ್ಷ ಶೂಗಳ ಸಾಗಣೆಗೆ ಸಂಬಂಧಿಸಿದಂತೆ ವಿಳಂಬವಾಗಿದ್ದು, ಉತ್ಪಾದನಾ ಹಂತದಲ್ಲೂ ಸುಮಾರು ಎರಡೂವರೆ ಲಕ್ಷ ಶೂಗಳು ಇದ್ದವು. ಜುಲೈನಲ್ಲಿ ತಾವು ಸಚಿವರಾಗಿ ಅಧಿಕಾರ ವಹಿಸಿಕೊಂಡ ಬಳಿಕ ವಿತರಣಾ ಪ್ರಕ್ರಿಯೆಯನ್ನು ಚುರುಕುಗೊಳಿಸಲಾಗಿದ್ದು, ಬಹುತೇಕ ಕಡೆ ವಿತರಣೆ ಪೂರ್ಣಗೊಂಡಿದೆ ಎಂದು ಹೇಳಿದರು.

ಕೆಲವು ಪ್ರದೇಶಗಳಲ್ಲಿ ಮಕ್ಕಳಿಗೆ ನೀಡಲಾದ ಶೂಗಳು ಬಿಗಿಯಾಗಿವೆ ಎಂಬ ದೂರುಗಳು ಬಂದಿವೆ. ಮಕ್ಕಳ ಕಾಲಿನ ಗಾತ್ರಕ್ಕೆ ಅನುಗುಣವಾಗಿ ಸರಿಯಾದ ಗಾತ್ರ ದೊರೆಯದಿರುವುದರಿಂದ ಈ ಸಮಸ್ಯೆ ಉಂಟಾಗಿದೆ.

ಇಂತಹ ಪ್ರಕರಣಗಳಲ್ಲಿ ಶೂಗಳನ್ನು ತಕ್ಷಣ ಬದಲಾಯಿಸುವ ವ್ಯವಸ್ಥೆ ಮಾಡಲಾಗಿದೆ ಎಂದು ಸಚಿವರು ತಿಳಿಸಿದರು.

ಶೂಗಳ ಗುಣಮಟ್ಟದ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ.ಸಮಸ್ಯೆ ಗುಣಮಟ್ಟದಲ್ಲಲ್ಲ,ಗಾತ್ರದಲ್ಲಿದೆ. ಗುಣಮಟ್ಟದಲ್ಲಿ ದೋಷ ಕಂಡುಬಂದರೆ, ಟೆ–ಂಡರ್ ಮೂಲಕ ಶೂ ಪೂರೈಸಿದ ಸಂಸ್ಥೆಯ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಸಂಪೂರ್ಣ ಅಧಿಕಾರವಿದೆ ಎಂದು ಹೇಳಿದರು.

ಸರ್ಕಾರದ ವಿರುದ್ಧ ವಿರೋಧ ಪಕ್ಷಗಳು ಟೀಕೆ ಮಾಡುವುದು ಸಹಜ. ಆದರೆ ಮಕ್ಕಳಿಗಾಗಿ ಖರ್ಚು ಮಾಡುತ್ತಿರುವ ತೆರಿಗೆದಾರರ ಹಣವನ್ನು ನಿಯಮಾನುಸಾರವೇ ಬಳಸಲಾಗುತ್ತಿದೆ ಎಂದು ಸಚಿವರು ಸ್ಪಷ್ಟಪಡಿಸಿದರು.

# ಸಿಕ್ಕಿಂನಲ್ಲಿ ಭೂಕುಸಿತ 128 ಮನೆಗಳಿಗೆ ಹಾನಿ



ಗ್ಯಾಲ್ಶಿಂಗ್,ಸೆ.25–ಸಿಕ್ಕಿಂನ ಗ್ಯಾಲ್ಶಿಂಗ್ ಜಿಲ್ಲೆಯ ರಿಂಬಿ ಗ್ರಾಮದಲ್ಲಿ ಸುರಿದ ಭಾರಿ ಮಳೆಯಿಂದಾಗಿ ಭೀಕರ ಭೂಕುಸಿತ ಉಂಟಾಗಿದೆ. ಬೆಟ್ಟದ ಮೇಲಿಂದ ಮಣ್ಣು ಮತ್ತು ಕಲ್ಲುಗಳು ರಭಸವಾಗಿ ಹರಿದುಬಂದು ಗ್ರಾಮದಲ್ಲಿದ್ದ ಅನೇಕ ಮನೆಗಳನ್ನು ಧ್ವಂಸಗೊಳಿಸಿರುವ ವಿಡಿಯೋ ಹೊರಬಂದಿದೆ.

ಈ ಘಟನೆಯಿಂದಾಗಿ ಸ್ಥಳೀಯ ನಿವಾಸಿಗಳಲ್ಲಿ ತೀವ್ರ ಆತಂಕ ಸೃಷ್ಟಿಯಾಗಿದ್ದು, ಮುನ್ನೆಚ್ಚರಿಕಾ ಕ್ರಮವಾಗಿ ದುರ್ಬಲ ಪ್ರದೇಶಗಳಲ್ಲಿದ್ದ 128ಕ್ಕೂ ಹೆಚ್ಚು ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ.

ನಿರಂತರ ಮಳೆಯಿಂದಾಗಿ ನಿಕ ಖೋಲ್ಸಾ ಹಳ್ಳದಲ್ಲಿ ನೀರು ಹೆಚ್ಚಾಗಿ ಸೇತುವೆಯೊಂದು ಕೊಚ್ಚಿಹೋಗಿದ್ದು, ರಸ್ತೆ ಸಂಪರ್ಕವೂ ಸಂಪೂರ್ಣವಾಗಿ ಕಡಿತಗೊಂಡಿದೆ. ಅದೃಷ್ಟವಶಾತ್ ಈ ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ ಎಂದು ಅಧಿಕಾರಿಗಳು ದೃಢಪಡಿಸಿದ್ದು, ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಾಂಗ್ ಅವರು ಪರಿಹಾರ ಕಾರ್ಯಾಚರಣೆಯನ್ನು ತೀವ್ರಗೊಳಿಸಲು ಮತ್ತು ಹೈ ಅಲರ್ಟ್‌ನಲ್ಲಿರಲು ಆಡಳಿತಕ್ಕೆ ಸೂಚಿಸಿದ್ದಾರೆ.

# ನಗರದಲ್ಲಿ ಜ್ಞಾನೇಶ್‌ಕುಮಾರ್ ವಿರುದ್ಧ ಪೋಸ್ಟರ್ ಅಭಿಯಾನ

ಬೆಂಗಳೂರು.ಸೆ.25– ಕೇಂದ್ರ ಚುನಾವಣಾ ಮುಖ್ಯ ಆಯುಕ್ತ ಜ್ಞಾನೇಶ್ ಕುಮಾರ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂಬ ಬರಹಗಳಿರುವ ಪೋಸ್ಟರ್ ಅಭಿಯಾನ ಬೆಂಗಳೂರಿನ ವಿವಿಧ ಭಾಗಗಳಲ್ಲಿ ರಾರಾಜಿಸುತ್ತಿವೆ.

ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸಾರ್ವಜನಿಕವಾಗಿ ಪ್ರಶ್ನೆಗಳನ್ನು ಎತ್ತುವ ಉದ್ದೇಶದಿಂದ ಈ ಪೋಸ್ಟರ್ ಅಭಿಯಾನ ನಡೆಯುತ್ತಿದೆ ಎಂದು ಹೇಳಲಾಗಿದೆ.

ಜ್ಞಾನೇಶ್ ಕುಮಾರ್ ಎಸ್‌ಐಆರ್ ಕುರಿತು ಚುನಾವಣಾ ಆಯೋಗದ ತಮ್ಮ ಸಹೋದ್ಯೋಗಿಗಳೊಂದಿಗೆ ಚರ್ಚಿಸಿದ್ದಾರೆಯೇ? ಅಥವಾ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಚರ್ಚಿಸಿದ್ದಾರೆಯೇ? ಎಂಬ ಪ್ರಶ್ನೆಯನ್ನು ಪೋಸ್ಟರ್‌ಗಳಲ್ಲಿ ಮುಂದಿಡಲಾಗಿದೆ.

ಪೋಸ್ಟರ್‌ನಲ್ಲಿ ಜ್ಞಾನೇಶ್ ಕುಮಾರ್ ಜೊತೆ ನರೇಂದ್ರ ಮೋದಿ ಹಾಗೂ ಅಮಿತ್ ಶಾ ಚರ್ಚಿಸುತ್ತಿರುವ ರೀತಿಯ ಚಿತ್ರವನ್ನೂ ಬಳಸಲಾಗಿದೆ.

ಎಸ್‌ಐಆರ್ ಹಾಗೂ ಮತದಾರರ ಪಟ್ಟಿಗೆ ಸಂಬಂಧಿಸಿದ ನಿರ್ಧಾರಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಯಾರೊಂದಿಗೆ ಸಮಾಲೋಚನೆ ನಡೆಸಲಾಯಿತು ಎಂಬುದರ ಕುರಿತು ಸಾರ್ವಜನಿಕವಾಗಿ ಸ್ಪಷ್ಟನೆ ನೀಡಬೇಕು ಎಂಬುದು ಅಭಿಯಾನದ ಪ್ರಮುಖ ಬೇಡಿಕೆಯಾಗಿದೆ.

ಚುನಾವಣಾ ಆಯೋಗದೊಳಗೆ ವರದಿಯಾಗಿರುವ ಆಕ್ಷೇಪಣೆಗಳು ಮತ್ತು ಎಸ್‌ಐಆರ್‌ಗೆ ಸಂಬಂಧಿಸಿದ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆ ಕುರಿತು ಹೆಚ್ಚಿನ ಪಾರದರ್ಶಕತೆ ಹಾಗೂ ಉತ್ತರದಾಯಿತ್ವ ಇರಬೇಕು ಎಂದು ಅಭಿಯಾನದಲ್ಲಿ ಒತ್ತಾಯಿಸಲಾಗಿದೆ.

20th Asian Games Aichi-Nagoya 2026

## ಸ್ವರ್ಣಕ್ಕೆ ಗುರಿಯಿಟ್ಟ ಕಾಮಲ್‌ಜೀತ್-ಸುರೂಚಿ

# 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಭಾರತಕ್ಕೆ ಚಿನ್ನ

ನಗೋಯಾ, ಸೆ.25: ಏಷ್ಯನ್ ಗೇಮ್ಸ್ 2026ರಲ್ಲಿ ಭಾರತ ಎರಡನೇ ಚಿನ್ನದ ಪದಕವನ್ನು ಗೆದ್ದಿದೆ. 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದ ಫೈನಲ್‌ನಲ್ಲಿ ಕಾಮಲ್‌ಜೀತ್ ಮತ್ತು ಸುರೂಚಿ ಜೋಡಿ ಅಗ್ರಸ್ಥಾನ ಪಡೆದು ಚಿನ್ನದ ಪದಕಕ್ಕೆ ಮುತ್ತಿಕ್ಕಿದೆ. ಇದರೊಂದಿಗೆ ಹಾಲಿ ಕೂಟದದಲ್ಲಿ ಭಾರತ–ಕ್ಕೆ ಎರಡನೇ ಚಿನ್ನದ ಪದಕ ಲಭಿಸಿದಂತಾಗಿದೆ.

ಅತ್ಯುತ್ತಮ ಪ್ರದರ್ಶನ ನೀಡಿದ ಭಾರತೀಯ ಜೋಡಿ ಒಟ್ಟು 484.6 ಅಂಕಗಳನ್ನು ಗಳಿಸಿ ಏಷ್ಯನ್ ದಾಖಲೆ ನಿರ್ಮಿಸಿದೆ. ವಿಶ್ವ ದಾಖಲೆಯ ಅಂಕಗಳಿಗಿಂತ ಕೇವಲ 3.8 ಅಂಕಗಳಷ್ಟು ಹಿಂದೆ ಉಳಿದಿದೆ.

ಸ್ಪರ್ಧೆಯ ಆರಂಭದಿಂದಲೂ ಕಾಮಲ್‌ಜೀತ್ ಸುರೂಚಿ ಜೋಡಿ ಮುನ್ನಡೆ ಕಾಯ್ದುಕೊಂಡಿತ್ತು. ಕೊರಿಯಾ ತಂಡದಿಂದ ತೀವ್ರ ಪೈಪೋಟಿ ಎದುರಾದರೂ ಅಂತಿಮವಾಗಿ 6.6 ಅಂಕಗಳ ಅಂತರದಿಂದ ಭಾರತ ಚಿನ್ನದ ಪದಕ ಗೆದ್ದು–ಕೊಂಡಿತು.

ಫೈನಲ್‌ನಲ್ಲಿ ಭಾರತ 484.6 ಅಂಕಗಳೊಂದಿಗೆ ಮೊದಲ ಸ್ಥಾನ ಪಡೆದರೆ, ಕೊರಿಯಾ 478 ಅಂಕಗಳೊಂದಿಗೆ ಬೆಳ್ಳಿ ಪದಕ ಹಾಗೂ ಇರಾನ್ 415.8 ಅಂಕಗಳೊಂದಿಗೆ ಕಂಚಿನ ಪದಕ ಗೆದ್ದಿತು.



**ಮೋದಿ, ಮುರ್ಮು ಅಭಿನಂದನೆ**

**ಜಪಾನ್‌ನ ಐಚಿ–ನಗೋಯಾದಲ್ಲಿ ನಡೆಯುತ್ತಿರುವ 2026 ರ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತೀಯ ಕ್ರೀಡಾಪಟುಗಳು ನೀಡಿದ ಅತ್ಯುತ್ತಮ ಪ್ರದರ್ಶನವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವಿಶೇಷವಾಗಿ ಶ್ಲಾಘಿಸಿ ಅಭಿನಂದಿಸಿದ್ದಾರೆ. ಕ್ರೀಡಾಪಟುಗಳ ಈ ಅದ್ಭುತ ಸಾಧನೆಯು ಅವರ ಅಪಾರ ಕಠಿಣ ಪರಿಶ್ರಮ, ಶಿಸ್ತು, ತಂಡದ ಒಗ್ಗಟ್ಟು ಮತ್ತು ದೃಢಸಂಕಲ್ಪದ ಫಲಿತಾಂಶವಾಗಿದೆ ಎಂದು ಪ್ರಧಾನಿಯವರು ಬಣ್ಣಿಸಿದ್ದಾರೆ. ಭಾರತೀಯ ಕ್ರೀಡಾಪಟುಗಳ ಭವಿಷ್ಯದ ಪ್ರಯತ್ನಗಳಿಗೆ ಶುಭ ಹಾರೈಸಿದ ಪ್ರಧಾನಿ ಮೋದಿ ಅವರೊಂದಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರೂ ಕೂಡ ಪ್ರತ್ಯೇಕವಾಗಿ ಸಾಮಾಜಿಕ ಮಾಧ್ಯಮಗಳ ಮೂಲಕ ಆಟಗಾರರಿಗೆ ತಮ್ಮ ಹೆಮ್ಮೆಯ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.**

**ರುದ್ರಾಂಕ್ಷ್, ಐಶ್ವರಿ, ನೀರಜ್ ಗೆ ಬೆಳ್ಳಿ**

ಈ ಮಧ್ಯೆ, ಪುರುಷರ 50 ಮೀಟರ್ ರೈಫಲ್ 3 ಪೊಸಿಷನ್ ತಂಡ ಸ್ಪರ್ಧೆಯಲ್ಲಿ ರುದ್ರಾಂಕ್ಷ್ ಪಾಟೀಲ್, ಐಶ್ವರಿ ಪ್ರತಾಪ್ ತೋಮರ್ ಮತ್ತು ನೀರಜ್ ಕುಮಾರ್ ಒಳಗೊಂಡ ಭಾರತ ತಂಡ ಬೆಳ್ಳಿ ಪದಕ ಜಯಿಸಿದೆ.

ಭಾರತೀಯರು 1762–94 ಎಕ್ಸ್ ಅಂಕಗಳನ್ನು ಗಳಿಸಿದರೆ, ಚೀನಾ ಮತ್ತು ದಕ್ಷಿಣ ಕೊರಿಯಾ ತಂಡಗಳು ಚಿನ್ನ ಮತ್ತು ಕಂಚಿನ ಪದಕ ಗೆದ್ದುಕೊಂಡವು. ಸದ್ಯ ಭಾರತ 19 ಪದಕಗಳನ್ನು ಗೆದ್ದು ಪದಕ ಪಟ್ಟಿಯಲ್ಲಿ 12ನೇ ಸ್ಥಾನಕ್ಕೆ ಏರಿಕೆ ಕಂಡಿದೆ. ಇದರಲ್ಲಿ 2 ಚಿನ್ನ, 8 ಬೆಳ್ಳಿ ಮತ್ತು 9 ಕಂಚಿನ ಪದಕ ಸೇರಿವೆ.

**ಸ್ಕ್ವಾಷ್: ಚಿನ್ನದ ಪದಕದತ್ತ ಜೋತ್ಸ್ನಾ, ವೇಲವನ್**

ಸ್ಕ್ವಾಷ್ ಮಿಶ್ರ ಡಬಲ್ಸ್‌ನಲ್ಲಿ ಭಾರತದ ಜೋತ್ಸ್ನಾ ಚಿನ್ನಪ್ಪ ಮತ್ತು ವೇಲವನ್ ಸೆಂಥಿಲ್‌ಕುಮಾರ್ ಸೆಮಿಫೈನಲ್ ಪ್ರವೇಶಿಸುವ ಮೂಲಕ ಪದಕ ಖಚಿತಪಡಿಸಿಕೊಂಡಿದ್ದಾರೆ. ಫಿಲಿಪ್ಪೀನ್ಸ್ ಜೋಡಿಯನ್ನು ಭಾರತೀಯ ಜೋಡಿ 11–3, 11–5 ಅಂಕಗಳಿಂದ ಸುಲಭವಾಗಿ ಮಣಿಸಿತು. ಇದರೊಂದಿಗೆ ಭಾರತಕ್ಕೆ ಕನಿಷ್ಠ ಕಂಚಿನ ಪದಕ ಖಚಿತವಾಗಿದೆ.

40 ವರ್ಷದ ಜೋತ್ಸ್ನಾ ಚಿನ್ನಪ್ಪ ಅವರು 16 ವರ್ಷಗಳ ಹಿಂದೆ ಏಷ್ಯನ್ ಗೇಮ್ಸ್ ನಲ್ಲಿ ಪದಕ ಗೆದ್ದಿದ್ದರು. ಇದೀಗ ಮತ್ತೊಂದು ಪದಕ ಗೆಲ್ಲುವ ಅವಕಾಶ ಅವರ ಮುಂದಿದೆ. ನಾಳೆ ನಡೆಯಲಿರುವ ಸೆಮಿಫೈನಲ್‌ನಲ್ಲಿ ಭಾರತ ಜೋಡಿ ಹಾಂಕಾಂಗ್‌ನ ಲೀ ಕಾ ಯಿ ಮತ್ತು ಟಾಂಗ್ ಮಿಂಗ್ ಹಾಂಗ್ ಅವರನ್ನು ಎದುರಿಸಲಿದೆ.

**ದಿಯಾ – ಮನುಷ್ ಗೆ ಐತಿಹಾಸಿಕ ಪದಕ ಖಚಿತ**

ಟೇಬಲ್ ಟೆನಿಸ್ ಮಿಶ್ರ ಡಬಲ್ಸ್ ನಲ್ಲಿ ಮನುಷ್ ಶಾ ಮತ್ತು ದಿಯಾ ಚಿತಾಲೆ ಜೋಡಿ ಹಾಂಕಾಂಗ್‌ನ ವಿಶ್ವದ 4ನೇ ಶ್ರೇಯಾಂಕದ ವಾಂಗ್ ಚುನ್ ಟಿಂಗ್ ಮತ್ತು ಡೂ ಹೋಯಿ ಕೆಮ್ ಜೋಡಿಯನ್ನು 3–1 ಅಂತರದಿಂದ ಮಣಿಸಿ ಸೆಮಿಫೈನಲ್ ಪ್ರವೇಶಿಸಿದೆ.

ತೀವ್ರ ಪೈಪೋಟಿ ನಡೆದ ಎರಡನೇ ಗೇಮ್‌ನಲ್ಲಿ ಸೋತ ಬಳಿಕವೂ ಭಾರತೀಯ ಜೋಡಿ ಅದ್ಭುತವಾಗಿ ಪುಟಿದೆದ್ದು 11–6, 13–15, 11–9, 11–5 ಅಂಕಗಳಿಂದ ಪಂದ್ಯ ಗೆದ್ದಿತು. ಈ ಗೆಲುವಿನೊಂದಿಗೆ ಏಷ್ಯನ್ ಗೇಮ್ಸ್ ನ ಮಿಶ್ರ ಡಬಲ್ಸ್ ವಿಭಾಗದಲ್ಲಿ ಭಾರತಕ್ಕೆ ಇದೇ ಮೊದಲ ಪದಕ ಖಚಿತವಾಗಿದೆ.

ಸೆಮಿಫೈನಲ್‌ನಲ್ಲಿ ಇಂದು ಮಧ್ಯಾಹ್ನ 3.45ಕ್ಕೆ ಚೀನಾದ ಸನ್ ಯಿಂಗ್ಶಾ ಮತ್ತು ವಾಂಗ್ ಚುಕಿನ್ ಜೋಡಿಯನ್ನು ಭಾರತೀಯ ಜೋಡಿ ಎದುರಿಸಲಿದೆ. ಮತ್ತೊಂದೆಡೆ, ಹರ್ಮೀತ್ ಮತ್ತು ಯಶಸ್ವಿನಿ ಜೋಡಿ ಕ್ವಾರ್ಟರ್‌ಫೈನಲ್‌ನಲ್ಲಿ 0–3 ಅಂತರದಿಂದ ಸೋಲು ಕಂಡಿದೆ.

# ಬೇಡಿಕೆಗೆ ಪಟ್ಟು ದೇಶವ್ಯಾಪಿ ಬ್ಯಾಂಕ್ ಮುಷ್ಕರಕ್ಕೆ ಕರೆ




- ಬ್ಯಾಂಕ್ ಗ್ರಾಹಕರು ಗಮನಿಸಬೇಕಾದ ದಿನಾಂಕಗಳು
- ಸೆ.26: 4ನೇ ಶನಿವಾರ ಸಾಮಾನ್ಯ ಬ್ಯಾಂಕ್ ರಜೆ
- ಸೆ.27: ಭಾನುವಾರ ಸಾರ್ವಜನಿಕ ವಲಯ ಮತ್ತು ಗ್ರಾಮೀಣ ಬ್ಯಾಂಕ್‌ಗಳು ಕಾರ್ಯನಿರ್ವಹಿಸಲು ಸೂಚನೆ
- ಸೆ.28: ಮುಷ್ಕರ ಮೊದಲ ದಿನ
- ಸೆ.29: ಮುಷ್ಕರ ಎರಡನೇ ದಿನ
- ಸೆ.30: ಮುಷ್ಕರ ಮೂರನೇ ದಿನ
- ನೆಟ್ ಬ್ಯಾಂಕಿಂಗ್: ಸಾಮಾನ್ಯವಾಗಿ ಲಭ್ಯ

ಬೆಂಗಳೂರು:ಸೆ,25–ಬ್ಯಾಂಕ್ ನೌಕರರ ಹೋರಾಟ ಮತ್ತೆ ತೀವ್ರಗೊಂಡಿದ್ದು, ಸೆಪ್ಟೆಂಬರ್ 28ರಿಂದ 30ರವರೆಗೆ ಮೂರು ದಿನಗಳ ಕಾಲ ರಾಷ್ಟ್ರವ್ಯಾಪಿ ಬ್ಯಾಂಕ್ ಮುಷ್ಕರಕ್ಕೆ ಯುನೈಟೆಡ್ ಫೋರಂ ಆಫ್ ಬ್ಯಾಂಕ್ ಯೂನಿಯನ್ಸ್ ಕರೆ ನೀಡಿದೆ. ಇದರಿಂದ ಸೆ.26ರಿಂದ 30ರವರೆಗೆ ಬ್ಯಾಂಕ್‌ಗಳ ಶಾಖಾ ಸೇವೆಗಳಿಗೆ ಸತತ ಐದು ದಿನಗಳ ಕಾಲ ವ್ಯತ್ಯಯ ಉಂಟಾಗುವ ಸಾಧ್ಯತೆ ಎದುರಾಗಿದೆ.

ಸೆ.26 ನಾಲ್ಕನೇ ಶನಿವಾರವಾಗಿರುವುದರಿಂದ ಬ್ಯಾಂಕ್‌ಗಳಿಗೆ ಸಾಮಾನ್ಯ ರಜೆ ಇದೆ. ಸೆ.27 ಭಾನುವಾರವಾಗಿದ್ದು, ಮುಷ್ಕರಕ್ಕೂ ಮುನ್ನ ಗ್ರಾಹಕರಿಗೆ ಅನುಕೂಲವಾಗುವಂತೆ ಸಾರ್ವಜನಿಕ ವಲಯದ ಬ್ಯಾಂಕ್‌ಗಳು ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳನ್ನು ಭಾನುವಾರವೂ ಕಾರ್ಯನಿರ್ವಹಿಸುವಂತೆ ಕೇಂದ್ರ ಸರ್ಕಾರ ಸೂಚಿಸಿದೆ. ಆರ್‌ಬಿಐ ಕೂಡ ಶಾಖೆಗಳು, ಕಚೇರಿಗಳು, ಎಟಿಎಂ–ಲಿಂಕ್ಡ್ ಶಾಖೆಗಳು ಹಾಗೂ ಕರೆನ್ಸಿ ಚೆಸ್ಟ್‌ಗಳನ್ನು ಸೆ.27ರಂದು ಕಾರ್ಯನಿರ್ವಹಿಸಲು ಅನುಮತಿ ನೀಡಿದೆ.

ಆದರೆ ಸೆ.28, 29 ಮತ್ತು 30ರಂದು ಮುಷ್ಕರ ನಡೆದರೆ ನೇರವಾಗಿ ಬ್ಯಾಂಕ್ ಶಾಖೆಗೆ ತೆರಳಿ ಮಾಡಬೇಕಾದ ಕೆಲಸಗಳಿಗೆ ತೊಂದರೆಯಾಗುವ ಸಾಧ್ಯತೆ ಇದೆ. ಚೆಕ್ ಕ್ಲಿಯರಿಂಗ್, ದಾಖಲೆ ಆಧಾರಿತ ಸೇವೆಗಳು, ಸಿಬ್ಬಂದಿ ನೆರವು ಅಗತ್ಯವಿರುವ ವ್ಯವಹಾರಗಳು ಸೇರಿದಂತೆ ಹಲವು ಸೇವೆಗಳು ವಿಳಂಬವಾಗಬಹುದು.

**ಐದು ದಿನ ಕೆಲಸದ ವಾರಕ್ಕೆ ಪಟ್ಟು:**

ಬ್ಯಾಂಕ್ ನೌಕರರ ಪ್ರಮುಖ ಬೇಡಿಕೆ ವಾರದಲ್ಲಿ ಐದು ದಿನ ಮಾತ್ರ ಬ್ಯಾಂಕ್‌ಗಳು ಕಾರ್ಯನಿರ್ವಹಿಸುವ ವ್ಯವಸ್ಥೆ ಜಾರಿಗೆ ತರಬೇಕು ಎಂಬುದಾಗಿದೆ. ಪ್ರಸ್ತುತ ಎರಡನೇ ಹಾಗೂ ನಾಲ್ಕನೇ ಶನಿವಾರ ಬ್ಯಾಂಕ್‌ಗಳಿಗೆ ರಜೆ ಇದೆ. ಎಲ್ಲ ಶನಿವಾರಗಳನ್ನೂ ರಜೆಯನ್ನಾಗಿ ಮಾಡಿ ಐದು ದಿನಗಳ ಕೆಲಸದ ವಾರ ಜಾರಿಗೆ ತರಬೇಕು ಎಂದು ನೌಕರರ ಸಂಘಟನೆಗಳು ಒತ್ತಾಯಿಸುತ್ತಿವೆ. ಈ ಬೇಡಿಕೆಗೆ 2024ರ ವೇತನ ಪರಿಷ್ಕರಣೆ ಒಪ್ಪಂದದ ಸಂದರ್ಭದಲ್ಲೇ ಒಪ್ಪಿಗೆ ದೊರೆತಿದ್ದರೂ ಅನುಷ್ಠಾನವಾಗಿಲ್ಲ ಎಂದು ಹೇಳಿದೆ.

ಇದರ ಜೊತೆಗೆ ಪಿಂಚಣಿ ಸೇರಿದಂತೆ ವಿವಿಧ ಸೇವಾ ಸಂಬಂಧಿತ ಬೇಡಿಕೆಗಳನ್ನೂ ನೌಕರರ ಸಂಘಟನೆಗಳು ಮುಂದಿಟ್ಟಿವೆ. ಸೆ.22ರಂದು ನಡೆದ ಸಮನ್ವಯ ಸಭೆಯಲ್ಲೂ ಐದು ದಿನಗಳ ಕೆಲಸದ ವಾರದ ಬೇಡಿಕೆಗೆ ಸ್ಪಷ್ಟ ಪ್ರಗತಿ ಕಂಡುಬರದ ಹಿನ್ನೆಲೆಯಲ್ಲಿ ಮುಷ್ಕರ ಮುಂದುವರಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದೆ.

**ಸೆ.11ರ ಮುಷ್ಕರದ ಬಳಿಕ ಮತ್ತೊಂದು ಹೋರಾಟ**

ಇದೇ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಬ್ಯಾಂಕ್ ನೌಕರರು ಸೆಪ್ಟೆಂಬರ್ 11ರಂದು ದೇಶವ್ಯಾಪಿ ಒಂದು ದಿನದ ಮುಷ್ಕರ ನಡೆಸಿದ್ದರು. ಇದೀಗ ಮತ್ತೆ ಮೂರು ದಿನಗಳ ಮುಷ್ಕರಕ್ಕೆ ಕರೆ ನೀಡಲಾಗಿದೆ. ಬೇಡಿಕೆಗಳ ಕುರಿತು ಸರ್ಕಾರದೊಂದಿಗೆ ಚರ್ಚೆ ಮುಂದುವರಿದಿದ್ದರೂ, ಸಂಘಟನೆಗಳು ಸ್ಪಷ್ಟ ನಿರ್ಧಾರಕ್ಕೆ ಒತ್ತಾಯಿಸುತ್ತಿವೆ.

ಮುಷ್ಕರವನ್ನು ಮುಂದೂಡುವಂತೆ ಕೇಂದ್ರ ಸರ್ಕಾರ ಹಾಗೂ ಬ್ಯಾಂಕ್ ಆಡಳಿತ ಮಂಡಳಿಗಳು ಮನವಿ ಮಾಡಿವೆ. ಆದರೆ ಸಂಘಟನೆಗಳು ತಮ್ಮ ಬೇಡಿಕೆಗಳ ಕುರಿತು ಸ್ಪಷ್ಟ ಹಾಗೂ ಸಕಾರಾತ್ಮಕ ಬೆಳವಣಿಗೆ ಕಂಡುಬಂದಿಲ್ಲ ಎಂದು ಹೇಳಿ ಮುಷ್ಕರ ಮುಂದುವರಿಸುವ ನಿಲುವು ತೆಗೆದುಕೊಂಡಿವೆ.

**ಗ್ರಾಹಕರಿಗೆ ಡಿಜಿಟಲ್ ಸೇವೆಗಳೇ ಆಸರೆ:**

ಮುಷ್ಕರದಿಂದ ಮುಖ್ಯವಾಗಿ ಬ್ಯಾಂಕ್ ಶಾಖೆಗಳಲ್ಲಿ ನಡೆಯುವ ನೇರ ಸೇವೆಗಳು ಬಾಧಿತವಾಗುವ ಸಾಧ್ಯತೆ ಇದೆ. ಆದರೆ ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್, ಯುಪಿಐ ಸೇರಿದಂತೆ ಡಿಜಿಟಲ್ ಪಾವತಿ ವ್ಯವಸ್ಥೆಗಳು ಸಾಮಾನ್ಯವಾಗಿ ಮುಂದುವರಿಯುವ ನಿರೀಕ್ಷೆಯಿದೆ. ಎಟಿಎಂ ಸೇವೆಗಳನ್ನೂ ಸಾಧ್ಯವಾದಷ್ಟು ನಿರಂತರವಾಗಿ ಇರಿಸಲು ಬ್ಯಾಂಕ್‌ಗಳಿಗೆ ಸೂಚನೆ ನೀಡಲಾಗಿದೆ.

ಹೀಗಾಗಿ ಗ್ರಾಹಕರು ಮುಷ್ಕರಕ್ಕೂ ಮುನ್ನ ಅಗತ್ಯವಿರುವ ಶಾಖಾ ವ್ಯವಹಾರಗಳನ್ನು ಪೂರ್ಣಗೊಳಿಸಿಕೊಳ್ಳುವಂತೆ ಬ್ಯಾಂಕ್‌ಗಳು ಸಲಹೆ ನೀಡಿವೆ.

# ಪನ್ನೀರ್ ಹೆಸರಲ್ಲಿ ಗ್ರಾಹಕರಿಗೆ ತಪ್ಪು ಮಾಹಿತಿ ತಡೆಗೆ ಹೊಸ ಕಾನೂನು

**ಪನ್ನೀರ್ ನಿಯಮದಲ್ಲಿ ಏನು ಬದಲಾವಣೆ**

- ಹಾಲಿನಿಂದ ತಯಾರಿಸಿದ ಉತ್ಪನ್ನಗಳಿಗೆ ಮಾತ್ರ 'ಪನ್ನೀರ್' ಹೆಸರಿನ ಬಳಕೆಗೆ ಅವಕಾಶ ನೀಡುವ ಪ್ರಸ್ತಾವನೆ
- ಹಾಲೇತರ ಪದಾರ್ಥಗಳಿಂದ ತಯಾರಿಸಿದ ಅನಲಾಗ್ ಉತ್ಪನ್ನಗಳಿಗೆ 'ಪನ್ನೀರ್' ಹೆಸರಿನ ಬಳಕೆಗೆ ನಿರ್ಬಂಧ
- ಲೇಬಲ್, ಮಾರ್ಕೆಟಿಂಗ್ ಮತ್ತು ಪ್ರಚಾರದಲ್ಲೂ 'ಪನ್ನೀರ್' ಪದ ಬಳಕೆಗೆ ಕಡಿವಾಣ
- ಗ್ರಾಹಕರಿಗೆ ಉತ್ಪನ್ನದ ನೈಜ ಸ್ವರೂಪದ ಬಗ್ಗೆ ಸ್ಪಷ್ಟ ಮಾಹಿತಿ ನೀಡುವುದು ಉದ್ದೇಶ
- ಕರಡು ನಿಯಮದ ಬಗ್ಗೆ 60 ದಿನಗಳ ಕಾಲ ಸಲಹೆ, ಆಕ್ಷೇಪಣೆ ಸಲ್ಲಿಸಲು ಅವಕಾಶ
- ಅಂತಿಮ ಅಧಿಸೂಚನೆ ಹೊರಬಂದ ಬಳಿಕವಷ್ಟೇ ಹೊಸ ನಿಯಮ ಜಾರಿಗೆ ಬರಲಿದೆ.



ಬೆಂಗಳೂರು, ಸೆ.25– ಪನ್ನೀರ್ ಹೆಸರಿನಲ್ಲಿ ಗ್ರಾಹಕರಿಗೆ ತಪ್ಪು ಮಾಹಿತಿ ನೀಡುವುದನ್ನು ತಡೆಯಲು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (FSSAI) ಹೊಸ ನಿಯಮ ಜಾರಿಗೆ ತರಲು ಮುಂದಾಗಿದೆ. ಹಾಲಿನ ಮೂಲವಲ್ಲದ ಪದಾರ್ಥಗಳಿಂದ ತಯಾರಿಸುವ ಉತ್ಪನ್ನಗಳನ್ನು 'ಪನ್ನೀರ್' ಎಂದು ಹೆಸರಿಸಿ ಮಾರಾಟ ಮಾಡುವುದಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ಕರಡು ತಿದ್ದುಪಡಿ ನಿಯಮವನ್ನು ಪ್ರಕಟಿಸಲಾಗಿದೆ.

ಹಾಲಿನಿಂದ ತಯಾರಿಸುವ ನೈಜ ಪನ್ನೀರ್‌ಗೆ ಬದಲಾಗಿ ಸಸ್ಯಜನ್ಯ ಕೊಬ್ಬು, ಪ್ರೋಟೀನ್ ಅಥವಾ ಇತರ ಹಾಲೇತರ ಪದಾರ್ಥಗಳನ್ನು ಬಳಸಿ ತಯಾರಿಸುವ ಉತ್ಪನ್ನಗಳನ್ನು ಸಾಮಾನ್ಯವಾಗಿ 'ಅನಲಾಗ್ ಡೈರಿ ಉತ್ಪನ್ನ'ಗಳೆಂದು ಪರಿಗಣಿಸಲಾಗುತ್ತದೆ. ಇಂತಹ ಉತ್ಪನ್ನಗಳನ್ನು ಪನ್ನೀರ್ ಎಂದು ಬಿಂಬಿಸುವುದರಿಂದ ಗ್ರಾಹಕರಿಗೆ ಉತ್ಪನ್ನದ ನೈಜ ಸ್ವರೂಪದ ಬಗ್ಗೆ ಗೊಂದಲ ಉಂಟಾಗುವ ಸಾಧ್ಯತೆ ಹಿನ್ನೆಲೆಯಲ್ಲಿ FSSAI ಈ ಕ್ರಮಕ್ಕೆ ಮುಂದಾಗಿದೆ.

**'ಪನ್ನೀರ್' ಪದ ಬಳಕೆಗೂ ನಿರ್ಬಂಧ :**

ಹಾಲಿನಿಂದ ಪಡೆಯದ ಪದಾರ್ಥಗಳಿಂದ ತಯಾರಿಸಲಾದ ಉತ್ಪನ್ನಗಳಿಗೆ 'ಪನ್ನೀರ್' ಎಂಬ ಹೆಸರನ್ನು ಬಳಸುವುದನ್ನು ನಿರ್ಬಂಧಿಸುವ ಪ್ರಸ್ತಾವನೆಯನ್ನು FSSAI ಮುಂದಿಟ್ಟಿದೆ. ಉತ್ಪನ್ನದ ಲೇಬಲ್, ಪ್ಯಾಕೇಜಿಂಗ್, ಮಾರ್ಕೆಟಿಂಗ್ ಹಾಗೂ ಪ್ರಚಾರ ಸಾಮಗ್ರಿಗಳಲ್ಲೂ 'ಪನ್ನೀರ್' ಪದ ಬಳಕೆಗೆ ನಿರ್ಬಂಧ ವಿಧಿಸುವ ಪ್ರಸ್ತಾವನೆ ಇದೆ.

ಅಂದರೆ, ಹಾಲಿನಿಂದ ತಯಾರಾಗದ ಅನಲಾಗ್ ಉತ್ಪನ್ನವನ್ನು ಪನೀರ್ ಎಂದು ಮಾರಾಟ ಮಾಡಿ ಗ್ರಾಹಕರಲ್ಲಿ ಅದು ಹಾಲಿನಿಂದ ತಯಾರಿಸಿದ ಉತ್ಪನ್ನ ಎಂಬ ಭಾವನೆ ಮೂಡಿಸುವಂತಿಲ್ಲ. ಉತ್ಪನ್ನದ ನೈಜ ಸ್ವರೂಪ ಸ್ಪಷ್ಟವಾಗಿ ತಿಳಿಯುವಂತೆ ನಿಯಮ ರೂಪಿಸುವ ಇದಾಗಿದೆ.

**60 ದಿನ ಆಕ್ಷೇಪಣೆ, ಸಲಹೆಗೆ ಅವಕಾಶ**

ಅನಲಾಗ್ ಡೈರಿ ಕಾಂಟೆಕ್ಸ್ಟ್ ಉತ್ಪನ್ನಗಳಿಗೆ ಸಂಬಂಧಿಸಿದ ನಿಯಮಗಳಲ್ಲಿ ತಿದ್ದುಪಡಿ ತರಲು FSSAI ಕರಡು ಅಧಿಸೂಚನೆ ಹೊರಡಿಸಿದ್ದು, ಸಾರ್ವಜನಿಕರಿಂದ 60 ದಿನಗಳ ಕಾಲ ಸಲಹೆ ಮತ್ತು ಆಕ್ಷೇಪಣೆಗಳನ್ನು ಆಹ್ವಾನಿಸಿದೆ. ಸಾರ್ವಜನಿಕರು, ಉದ್ಯಮ ವಲಯ ಹಾಗೂ ಇತರ ಸಂಬಂಧಪಟ್ಟವರು ಸಲ್ಲಿಸುವ ಅಭಿಪ್ರಾಯಗಳನ್ನು ಪರಿಶೀಲಿಸಿದ ಬಳಿಕ ಅಂತಿಮ ನಿಯಮ ಪ್ರಕಟಿಸುವ ಪ್ರಕ್ರಿಯೆ ನಡೆಯಲಿದೆ.

**ಸದ್ಯಕ್ಕೆ ಪ್ರಸ್ತಾವನೆ ಮಾತ್ರ**

FSSAI ಪ್ರಕಟಿಸಿರುವುದು ಸದ್ಯಕ್ಕೆ ಕರಡು ತಿದ್ದುಪಡಿ ಪ್ರಸ್ತಾವನೆ ಮಾತ್ರ. ಅಂತಿಮ ನಿಯಮ ಇನ್ನೂ ಜಾರಿಗೆ ಬಂದಿಲ್ಲ. 60 ದಿನಗಳ ಅವಧಿಯಲ್ಲಿ ಸ್ವೀಕರಿಸುವ ಸಲಹೆ ಮತ್ತು ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ನಿಯಮದಲ್ಲಿ ಅಗತ್ಯ ಬದಲಾವಣೆ ಮಾಡಿ ಅಂತಿಮ ಅಧಿಸೂಚನೆ ಹೊರಡಿಸುವ ಸಾಧ್ಯತೆ ಇದೆ.

# ಎಸ್‌ಐಆರ್ ಕರ್ತವ್ಯಕ್ಕೆ ಶಿಕ್ಷಕರ ಬಳಕೆ ನಿಯಂತ್ರಣಕ್ಕೆ ಕಾಯ್ದೆ

ಬೆಂಗಳೂರು, ಸೆ.25: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಕಾರ್ಯಕ್ಕೆ ಶಿಕ್ಷಕರನ್ನು ನಿಯೋಜಿಸುವುದರಿಂದ ಶಾಲಾ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗುತ್ತಿದೆ. ಶಿಕ್ಷಕರನ್ನು ಶಿಕ್ಷಣೇತರ ಕೆಲಸಗಳಿಗೆ ಬಳಸುವುದನ್ನು ನಿಯಂತ್ರಿಸಲು ಕಾನೂನು ತಿದ್ದುಪಡಿ ತರಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿಕ್ಷಣ ಇಲಾಖೆಯ ಶಿಕ್ಷಕರು ಹಲವು ಸಂದರ್ಭಗಳಲ್ಲಿ ಸರ್ಕಾರದೊಂದಿಗೆ ಸಹಕರಿಸಿ ಉತ್ತಮವಾಗಿ ಕಾರ್ಯನಿರ್ವಹಿಸಿದ್ದಾರೆ. ಇದರ ಫಲವಾಗಿ ಶಿಕ್ಷಣ ಕ್ಷೇತ್ರದಲ್ಲಿಯೂ ಉತ್ತಮ ಫಲಿತಾಂಶಗಳು ಬಂದಿವೆ. ಆದರೆ ಶಿಕ್ಷಕರನ್ನು ನಿರಂತರವಾಗಿ ಶಿಕ್ಷಣೇತರ ಕಾರ್ಯಗಳಿಗೆ ನಿಯೋಜಿಸುವುದರಿಂದ ಶಾಲಾ ಶಿಕ್ಷಣದ ಮೇಲೆ ಪರಿಣಾಮ ಬೀರುತ್ತಿದೆ ಎಂದು ಹೇಳಿದರು.

"ಶಿಕ್ಷಕರನ್ನು ಎಸ್‌ಐಆರ್ ಕೆಲಸಕ್ಕೆ ಬಳಸಿಕೊಳ್ಳಲಾಗುತ್ತಿದೆ. ಮಕ್ಕಳು ವಿಡಿಯೋ ಮಾಡಿ ನನಗೆ ಕಳುಹಿಸುತ್ತಿದ್ದಾರೆ. ಶಾಲೆಗೆ ಬರುತ್ತೇವೆ, ಆದರೆ ಪಾಠ ಹೇಳಿಕೊಡುವುದಿಲ್ಲ. ಮಧ್ಯಾಹ್ನದ ಊಟ ಮಾಡಿಸಿ ನಮ್ಮನ್ನು ಮನೆಗೆ ಕಳುಹಿಸುತ್ತಾರೆ ಎಂದು ಮಕ್ಕಳು ಹೇಳುತ್ತಿದ್ದಾರೆ. ಇದಕ್ಕಿಂತ ದೊಡ್ಡ ದುರಂತ ಮತ್ತೊಂದಿಲ್ಲ" ಎಂದು ಸಚಿವರು ಅಸಮಾಧಾನ ವ್ಯಕ್ತಪಡಿಸಿದರು.

ಮಕ್ಕಳ ಶಿಕ್ಷಣದ ಮೇಲೆ ಪರಿಣಾಮ ಬೀರುವ ಯಾವುದೇ ಕ್ರಮಕ್ಕೆ ಶಿಕ್ಷಣ ಸಚಿವನಾಗಿ ತಾನೇ ಹೊಣೆಗಾರನಾಗಿದ್ದು, ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಎಂದು ಅವರು ಹೇಳಿದರು.

ಶಿಕ್ಷಕರನ್ನು ಶಿಕ್ಷಣ ಕಾರ್ಯದಿಂದ ಹೊರತುಪಡಿಸಿ ಇತರ ಕೆಲಸಗಳಿಗೆ ನಿಯೋಜಿಸುವುದನ್ನು ನಿಯಂತ್ರಿಸುವ ಉದ್ದೇಶದಿಂದ ಕಾನೂನು ತಿದ್ದುಪಡಿ ತರಲಾಗುವುದು. ಅತ್ಯಂತ ಅನಿವಾರ್ಯ ಸಂದರ್ಭಗಳಲ್ಲಿ, ವಿಶೇಷವಾಗಿ ಚುನಾವಣಾ ಕರ್ತವ್ಯಕ್ಕೆ ಮಾತ್ರ ಶಿಕ್ಷಕರ ಸೇವೆಯನ್ನು ಬಳಸಿಕೊಳ್ಳುವ ಅವಕಾಶ ಇರಲಿದೆ. ಈ ಸಂಬಂಧ ತಾವು ತಿದ್ದುಪಡಿ ಪ್ರಸ್ತಾವವನ್ನು ಸಿದ್ಧಪಡಿಸುತ್ತಿದ್ದು, ಅದು ಸಚಿವ ಸಂಪುಟದ ಮುಂದೆ ಬರಲಿದೆ. ಬಳಿಕ ವಿಧಾನಸಭೆಯಲ್ಲಿ ಕಾನೂನು ರೂಪ ಪಡೆಯಲಿದೆ ಎಂದು ಮಧು ಬಂಗಾರಪ್ಪ ತಿಳಿಸಿದರು.

ಎಸ್‌ಐಆರ್ ಪ್ರಕ್ರಿಯೆ ಸುಮಾರು ಒಂದೂವರೆ ತಿಂಗಳವರೆಗೆ ನಡೆಯುವ ಸಾಧ್ಯತೆಯಿದೆ. ಇದೇ ಸಂದರ್ಭದಲ್ಲಿ ಶಾಲೆಗಳಲ್ಲಿ ಪರೀಕ್ಷಾ ಸಿದ್ಧತೆ ಆರಂಭವಾಗಿದ್ದು, ನಂತರ ಮಧ್ಯಂತರ ಪರೀಕ್ಷೆಗಳೂ ನಡೆಯಲಿವೆ. ಇಂತಹ ಸಮಯದಲ್ಲಿ ಶಿಕ್ಷಕರನ್ನು ಎಸ್‌ಐಆರ್ ಕಾರ್ಯಕ್ಕೆ ನಿಯೋಜಿಸುವುದರಿಂದ ಅವರ ಮೇಲಿನ ಕೆಲಸದ ಒತ್ತಡ ಹೆಚ್ಚಾಗುತ್ತಿದೆ ಎಂದು ಅವರು ಹೇಳಿದರು.

ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಅವರು ಈ ವಿಚಾರವನ್ನು ಪರಿಷತ್‌ನಲ್ಲಿ ಪ್ರಸ್ತಾಪಿಸಿ, ಶಿಕ್ಷಕರನ್ನು ಎಸ್‌ಐಆರ್ ಕಾರ್ಯದಿಂದ ಮುಕ್ತಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ. ಸಮಸ್ಯೆ ಮುಂದುವರಿದರೆ ಶಿಕ್ಷಕರು ಮುಷ್ಕರ ನಡೆಸಬೇಕಾಗಬಹುದು ಎಂಬ ಎಚ್ಚರಿಕೆಯನ್ನೂ ನೀಡಿದ್ದಾರೆ ಎಂದು ಸಚಿವರು ತಿಳಿಸಿದರು.

ಶಿಕ್ಷಕರ ಪ್ರತಿನಿಧಿಗಳೂ ತಮ್ಮನ್ನು ಭೇಟಿ ಮಾಡಿ ಸಮಸ್ಯೆ ಕುರಿತು ಮನವಿ ಸಲ್ಲಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನ ನೀಡಲಾಗಿದ್ದು, ಶಿಕ್ಷಕರ ಮೇಲಿನ ಒತ್ತಡ ಕಡಿಮೆ ಮಾಡುವ ಹಾಗೂ ಮಕ್ಕಳ ಶಿಕ್ಷಣ–ಕ್ಕೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಆದಷ್ಟು ಶೀಘ್ರ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಹೇಳಿದರು.



ನಗರದ ಮೈಸೂರು ರಸ್ತೆಯ ಶಾಮಣ್ಣ ಗಾರ್ಡನ್‌ನ ಪೈಪ್‌ಲೈನ್ ಬಳಿ ಕಸದ ರಾಶಿ ಉರುಳಿ ಬಿದ್ದಿದ್ದು, ಇದರಿಂದ ವಾಹನ ಸವಾರರಿಗೆ ತೊಂದರೆಯಾಗಿದ್ದು ಸಂಬಂಧಪಟ್ಟವರು ಈ ಕಸವನ್ನು ತೆರವುಗೊಳಿಸುವರೇ?

## ಕರಾವಳಿಗೆ ಅಪ್ಪಳಿಸಿದ ಚಂಡಮಾರುತ

# 16 ರಾಜ್ಯಗಳಲ್ಲಿ ಭಾರಿ ಮಳೆ ಎಚ್ಚರಿಕೆ

ನವದೆಹಲಿ,ಸೆ.25–ಚಂಡಮಾರುತದ ಭೀಕರ ಪರಿಣಾಮಗಳು ಈಗ ದೇಶದ ವಿವಿಧ ಭಾಗಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿವೆ. ಮಾನ್ಸೂನ್ ಹಿಮ್ಮೆಟ್ಟುವಿಕೆಯ ಈ ಸಂದರ್ಭದಲ್ಲಿ ದೆಹಲಿ, ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್, ಪಂಜಾಬ್, ಹರಿಯಾಣ ಹಾಗೂ ರಾಜಸ್ಥಾನ ಸೇರಿದಂತೆ ಹಲವು ರಾಜ್ಯಗಳಲ್ಲಿ ಪ್ರಕೃತಿಯ ವಿಕೋಪ ಮುಂದುವರಿದಿದೆ. ಭಾರತೀಯ ಹವಾಮಾನ ಇಲಾಖೆಯು ಶುಕ್ರವಾರದಂದು ದೇಶದ ಅನೇಕ ಭಾಗಗಳಲ್ಲಿ ಚಂಡಮಾರುತದ ಬಲವಾದ ಗಾಳಿಯೊಂದಿಗೆ ಭಾರಿ ಮಳೆ ಹಾಗೂ ಕೆಲವು ಪ್ರದೇಶಗಳಲ್ಲಿ ಆಲಿಕಲ್ಲು ಮಳೆಯಾಗುವ ಗಂಭೀರ ಎಚ್ಚರಿಕೆಯನ್ನು ನೀಡಿದೆ. ಕರಾವಳಿ ಭಾಗಗಳನ್ನು ಹೊರತುಪಡಿಸಿ ಉತ್ತರಾಖಂಡ, ಜಮ್ಮು ಮತ್ತು ಕಾಶ್ಮೀರ, ಛತ್ತೀಸ್‌ಗಢ, ಪಶ್ಚಿಮ ಬಂಗಾಳ ಹಾಗೂ ಮಧ್ಯಪ್ರದೇಶದಲ್ಲೂ ಹವಾಮಾನ ವೈಪರೀತ್ಯ ಮುಂದುವರಿಯುವ ಸಾಧ್ಯತೆಯಿದೆ. ಒಡಿಶಾ, ಆಂಧ್ರಪ್ರದೇಶ, ಜಾರ್ಖಂಡ್ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ಮೇಲೆ ಈ ಚಂಡಮಾರುತದ ಪ್ರಭಾವ ಅತ್ಯಂತ ತೀವ್ರವಾಗಿದ್ದು, ಗಂಟೆಗೆ 60 ರಿಂದ 70 ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸುವ ಮುನ್ಸೂಚನೆ ಇದೆ. ಈ ಹಿನ್ನೆಲೆಯಲ್ಲಿ ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

# ರಾಜ್ಯದಲ್ಲಿ ಮೂರು ದಿನ ಮಳೆ

**ಹಲವು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್**

ಬೆಂಗಳೂರು,ಸೆ.25– ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತದ ಪ್ರಭಾವದಿಂದಾಗಿ ರಾಜ್ಯದಲ್ಲಿ ಮುಂದಿನ ಮೂರು ದಿನಗಳ ಕಾಲ ಮಳೆಯ ಅಬ್ಬರ ಹೆಚ್ಚಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಕರಾವಳಿ ಮತ್ತು ಮಲೆನಾಡು ಭಾಗಗಳಲ್ಲಿ ಈಗಾಗಲೇ ಮಳೆಯ ಆರ್ಭಟ ಜೋರಾಗಿದ್ದು, ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸಾಧಾರಣದಿಂದ ಭಾರಿ ಮಳೆಯಾಗುವ ಸಾಧ್ಯತೆಯಿದೆ.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು, ವಿಜಯಪುರ, ಕಲಬುರ್ಗಿ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆ ಇರುವ ಹಿನ್ನೆಲೆಯಲ್ಲಿ ಇಲಾಖೆಯು ಯೆಲ್ಲೋ ಅಲರ್ಟ್ ಘೋಷಿಸಿದೆ. ಕರಾವಳಿ ತೀರದಲ್ಲಿ ಬಿರುಗಾಳಿ ಹಾಗೂ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇರುವುದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ ರವಾನಿಸಲಾಗಿದೆ.

ಉತ್ತರ ಒಳನಾಡಿನ ಹಾವೇರಿ, ಬೆಳಗಾವಿ, ಧಾರವಾಡ ಮತ್ತು ಗದಗ ಜಿಲ್ಲೆಗಳಲ್ಲಿ ಲಘು ಮಳೆಯಾಗಲಿದ್ದು, ಮಲೆನಾಡಿನ ಹಾಸನ ಹಾಗೂ ಕೊಡಗು ಜಿಲ್ಲೆಗಳ ಹಲವೆಡೆ ಸಾಧಾರಣ ಮಳೆಯಾಗಲಿದೆ. ಇನ್ನು ರಾಜಧಾನಿ ಬೆಂಗಳೂರಿನಲ್ಲಿ ಕಳೆದೆರಡು ದಿನಗಳಿಂದ ಬಿಸಿಲಿನ ವಾತಾವರಣ ಕಂಡುಬಂದಿದ್ದರೂ, ಸಂಜೆ ಅಥವಾ ರಾತ್ರಿ ವೇಳೆಗೆ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಮಳೆಯಾಗುವ ನಿರೀಕ್ಷೆಯಿದೆ.

ಆಂಧ್ರಪ್ರದೇಶ ಹಾಗೂ ಒಡಿಶಾ ರಾಜ್ಯಗಳ ಮೇಲೆಯೂ ಈ ವಾಯುಭಾರ ಕುಸಿತದ ತೀವ್ರ ಪರಿಣಾಮ ಬೀರಿದ್ದು, ಗಂಟೆಗೆ ಎಪ್ಪತ್ತೈದು ಕಿಲೋಮೀಟರ್ ವೇಗದಲ್ಲಿ ಬಿರುಗಾಳಿ ಬೀಸುತ್ತಿದೆ. ಒಡಿಶಾದ ಹಲವು ಜಿಲ್ಲೆಗಳಿಗೆ ರೆಡ್ ಅಲರ್ಟ್ ಘೋಷಿಸಲಾಗಿದ್ದು, ತಗ್ಗು ಪ್ರದೇಶ ಹಾಗೂ ನದಿ ಜಲಾನಯನ ಭಾಗದ ಜನರು ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ.

